ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ 17ನೇ ಮಾರ್ಚ್ 1997 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಮಧ್ಯಾಹ್ನ 12.30 ಗಂಟೆಗೆ ಸಮಾವೇಶಗೊಂಡಿತು.

ಸಭಾಧ್ಯಕ್ಷರು : **(ಶ್ರೀ ರಮೇಶ್ ಕುಮಾರ್)** ಅವರು

ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚನೆಗಳು

ಅಧ್ಯಕ್ಷರು : ಮಾಜಿ ಮುಖ್ಯಮಂತ್ರಿಗಳಾಗಿದ್ದ, ಶ್ರೀ ವೀರೇಂದ್ರ ಪಾಟೀಲ್, ವಿಧಾನ ಸಭೆಯ ಮಾಜಿ ಸದಸ್ಯರುಗಳಾಗಿದ್ದ ಶ್ರೀ ಪಿ. ತಿಮ್ಮಯ್ಯ, ಶ್ರೀಮತಿ ಲೀಲಾದೇವಿ ವೆಂಕಟೇಶ್ ಮಾಗಡಿ, ಶ್ರೀ ದಮೀದ್‌ಷಾ ಹಾಗೂ ಶ್ರೀ ಭಾಸ್ಕರ್ ನಾಯ್ಡು ಅವರುಗಳು ನಿಧನರಾದುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸುತ್ತಿದ್ದೇನೆ.

1. ಸ್ವಾತಂತ್ರ್ಯ ಯೋಧ, ಹಿರಿಯ ಮುತ್ಸದ್ದಿ, ಧೀಮಂತ ರಾಜಕಾರಣಿ ಹಾಗೂ ಮಾಜಿ ಮುಖ್ಯಮಂತ್ರಿ ಶ್ರೀ ವಿರೇಂದ್ರ ಪಾಟೀಲ್‌ರವರು ದಿನಾಂಕ : 14-3-1997ರಂದು ನಿಧನರಾದರು. 1924ರಲ್ಲಿ ಕಲ್ಬುರ್ಗಿ ಜಿಲ್ಲೆಯ ಚಿಂಚೋಳಿಯ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದ ಶ್ರೀಯುತರು ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ದಕ್ಷ ಆಡಳಿತಕ್ಕೆ ಹೆಸರಾಗಿದ್ದ ಶ್ರೀ ಪಾಟೀಲ್‌ರವರು ವೃತ್ತಿಯಲ್ಲಿ ವಕೀಲರಾಗಿದ್ದು ನಂತರ ವಕೀಲ ವೃತ್ತಿಯನ್ನು ತ್ಯಜಿಸಿ ರಾಜಕೀಯದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. 1952ರಲ್ಲಿ ಹೈದರಾಬಾದ್ ವಿಧಾನ ಸಭೆಗೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಆಳಂದ ಕ್ಷೇತ್ರವನ್ನು ಮತ್ತು 1957 ಮತ್ತು 1962ರಲ್ಲಿ ನಡೆದ ಚುನಾವಣೆಯಲ್ಲಿ ಚಿಂಚೋಳಿ ಕ್ಷೇತ್ರವನ್ನು ಪ್ರತನಿಧಿಸಿ ಸೇವೆಸಲ್ಲಿಸಿ, 1968ರಿಂದ 1971ರ ವರೆಗೆ ಹಾಗೂ 1989 ರಿಂದ 1990ರ ಅವಧಿಯಲ್ಲಿ ರಾಜ್ಯದ ಮುಖ್ಯಮಂತ್ರಿಗಳಾಗಿ ಸೇವೆ ಸಲ್ಲಿಸಿ, ಅತಿ ಕಡಿಮೆ ಅವಧಿಯಲ್ಲಿಯೇ ರಾಜ್ಯದ ಅರ್ಥಿಕ ಸ್ಥಿತಿಯನ್ನು ಪುನಶ್ಚೇತನಗೊಳಿಸಿ, ಒಳ್ಳೆಯ ಆಡಳಿತಕ್ಕೆ ಹೆಸರಾಗಿ ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ಸೇವೆ ಸಲ್ಲಿಸಿದ ಕೀರ್ತಿ ಶ್ರೀಯುತರದಾಗಿರುತ್ತದೆ.

ಹೈದರಾಬಾದ್ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ, ಕಲ್ಬುರ್ಗಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ, ಸಂಸ್ಥಾ ಕಾಂಗ್ರೆಸ್ ಅಧ್ಯಕ್ಷರಾಗಿ, ಹೈಡ್ರೋ ಎಲೆಕ್ಟ್ರಿಕ್ ಕನ್‌ಸ್ಟ್ರಕ್ಷನ್ ನಿಗಮದ ಅಧ್ಯಕ್ಷರಾಗಿ, ಬಂದರು ಸಲಹಾ ಮಂಡಳಿಯ ಅಧ್ಯಕ್ಷರಾಗಿ, ಮೈಸೂರು ಪ್ರಾಂತ್ಯ ಪ್ರದೇಶ ಕಾಂಗ್ರೆಸ್

ಸಂಘಟನಾ ಕಾರ್ಯದರ್ಶಿಯಾಗಿ, ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿ ಸೇವೆಸಲ್ಲಿಸಿರುವ ಇವರು 1957 ಮತ್ತು 1967ರ ಅವಧಿಯಲ್ಲಿ ಗೃಹ, ಕೈಗಾರಿಕಾ, ಅಬಕಾರಿ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರಾಗಿ, ಲೋಕೋಪಯೋಗಿ ಮತ್ತು ವಿದ್ಯುತ್ ಸಚಿವರಾಗಿ, 1972ರಿಂದ 1978ರ ಅವಧಿಯಲ್ಲಿ ರಾಜ್ಯಸಭಾ ಸದಸ್ಯರಾಗಿ, 1978ರಲ್ಲಿ ಚಿಕ್ಕಮಗಳೂರು ಲೋಕಸಭೆಗೆ ನಡೆದ ಉಪ ಚುನಾವಣೆಯಲ್ಲಿ ಜನತಾ ಪಕ್ಷದ ಪತಿಯಿಂದ ಶ್ರೀಮತಿ ಇಂದಿರಾಗಾಂಧಿಯವರ ವಿರುದ್ಧ ಚುನಾವಣೆಯಲ್ಲಿ ಸ್ಪರ್ಧಿಸಿದ್ದುದು ಚರಿತ್ರಾರ್ಹವಾಗಿದೆ. 1980ರಿಂದ 1989ರ ಅವಧಿಯಲ್ಲಿ ಲೋಕಸಭಾ ಸದಸ್ಯರಾಗಿ, ಈ ಅವಧಿಗಳಲ್ಲಿ ದಿವಂಗತ ಶ್ರೀಮತಿ ಇಂದಿರಾಗಾಂಧಿ ಹಾಗೂ ಶ್ರೀ ರಾಜೀವ್ ಗಾಂಧಿಯವರುಗಳ ಸಚಿವ ಸಂಪುಟದಲ್ಲಿ ಸಾರಿಗೆ ಮತ್ತು ನೌಕಾಯಾನ, ಕಾರ್ಮಿಕ ಮತ್ತು ಪುನರ್ವಸತಿ, ಪೆಟ್ರೋಲಿಯಂ ಮತ್ತು ರಸಗೊಬ್ಬರ ಸಚಿವರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ತಮ್ಮ ಸೇವಾ ಅವಧಿಯಲ್ಲಿ ಮಂಗಳೂರನ್ನು ಸರ್ವಋತು ಬಂದರನ್ನಾಗಿ ಮಾಡಿದ್ದಲ್ಲದ ಶರಾವತಿ ಕಣಿವೆಯ ಯೋಜನೆಯ ಮೊದಲನೆ ಹಂತವನ್ನು ಪೂರ್ಣಗೊಳಿಸಿ, ಬೆಂಗಳೂರು ನೀರು ಸರಬರಾಜು ಯೋಜನೆಯ ಕಾಮಗಾರಿಯನ್ನು ಕೈಗೆತ್ತಿಕೊಂಡು ರಾಜ್ಯದ ಅತಿ ದೊಡ್ಡ ನೀರಾವರಿ ಯೋಜನೆಯಾದ ಕೃಷ್ಣ ಮೇಲ್ದಂಡೆ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಿದ್ದು ಇವರ ಚಿರಸ್ಮರಣೀಯ ಸಾಧನೆಯ ದ್ಯೋತಕವಾಗಿದೆ.

1989ರ ರಾಜ್ಯ ವಿಧಾನ ಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಚಾಲನೆ ನೀಡಿ ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಅಧಿಕಾರವಹಿಸಿಕೊಂಡರಾದರೂ ದುರುದೃಷ್ಟವಶಾತ್ ಪಾರ್ಶ್ವವಾಯು ಪೀಡಿತರಾಗಿ, ಅನಾರೋಗ್ಯದ ಕಾರಣದಿಂದಾಗಿ ಅನಿರೀಕ್ಷಿತವಾಗಿ ಮುಖ್ಯಮಂತ್ರಿ ಸ್ಥಾನ ಕಳೆದುಕೊಳ್ಳಬೇಕಾಯಿತು. ಅದಾಗ್ಯೂ ತದನಂತರದ ಅಧಿವೇಶದನ ಸಮಯದಲ್ಲಿಯೂ ಸಹ ಸದನಕ್ಕೆ ಹಾಜರಾಗಿ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದರಲ್ಲದೇ ಆಗಾಗ ಆಡುತ್ತಿದ್ದ ಅವರ ಮಾತುಗಳು ಹೇಳಿಕೆಗಳು ಬಹಳ ಪರಿಣಾಮಕಾರಿ ಪ್ರಭಾವ ಬೀರುವಂಥವಾಗಿದ್ದವು, ಅವರ ನಡವಳಿಕೆ ಇಂದಿನ ಅನೇಕ ರಾಜಕಾರಣಿಗಳಿಗೆ ಆದರ್ಶಪ್ರಾಯವಾಗಿದೆ.

2. ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಪಿ. ತಿಮ್ಮಯ್ಯ ಅವರು ದಿನಾಂಕ : 1-3-1997 ರಂದು ನಿಧನರಾದರು. 1967ರಿಂದ 1971ರ ವರೆಗೆ ನಾಲ್ಕನೇ ವಿಧಾನ ಸಭೆಗೆ ಬಸವನಗುಡಿ ಕ್ಷೇತ್ರವನ್ನು ಪ್ರತಿನಿಧಿಸಿದ ಶ್ರೀಯುತರು 10 ವರ್ಷಗಳ ಕಾಲ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸದಸ್ಯರಾಗಿ ನಗರದ ಅಭಿವೃದ್ಧಿಗಾಗಿ ಶ್ರಮಿಸಿರುವುದರ ಜೊತೆಗೆ ಹಲವಾರು ಸಂಘ - ಸಂಸ್ಥೆಗಳಲ್ಲಿ ಸಕ್ರಿಯವಾಗಿ ಸೇವೆ ಸಲ್ಲಿಸಿದ್ದಾರೆ.

3. ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀಮತಿ ಲೀಲಾದೇವಿ ವೆಂಕಟೇಶ್ ಮಾಗಡಿ, ಅವರು ದಿನಾಂಕ: 9-3-1997ರಂದು ನಿಧನರಾದರು. 1957ರಲ್ಲಿ ಕರ್ನಾಟಕ ವಿಧಾನ ಸಭೆಗೆ ಆಯ್ಕೆಯಾಗಿ 1962ರ ವರೆಗೆ ರಾಜ್ಯದ ಗ್ರಾಮೀಣಾ ಉದ್ಯೋಗ, ಕೈಮಗ್ಗ, ಗುಡಿಕೈಗಾರಿಕೆ ಖಾತೆಯ ಉಪ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀಮತಿಯವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ

ಜೈಲು ವಾಸ ಅನುಭವಿಸಿರುತ್ತಾರೆ. ಎಂಟು ವರ್ಷಗಳ ಕಾಲ ಹುಬ್ಬಳ್ಳಿಯಲ್ಲಿ ಜುವಿನೈಲ್ ನ್ಯಾಯಾಲಯದಲ್ಲಿ ಗೌರವಾನ್ವಿತ ಮಹಿಳಾ ದಂಡಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ. ಹುಬ್ಬಳ್ಳಿ ಮುನಿಸಿಪಾಲಿಟಿಯಲ್ಲಿ ಸದಸ್ಯರಾಗಿ ಹಾಗೂ 1948ರಿಂದ 1956ರ ವರೆಗೆ ಮುಂಬೈ- ಕರ್ನಾಟಕ ವಯಸ್ಕರ ಶಿಕ್ಷಣ ಸಮಿತಿಯ ಸದಸ್ಯರಾಗಿ ಎ.ಐ.ಆರ್.ಸಲಹಾ ಮಂಡಲಿ, ರಾಜ್ಯ ಸಾರಿಗೆ ಮಂಡಲಿ, ಖಾದಿ ಗ್ರಾಮೋದ್ಯೋಗ ಸಂಘ ಹಾಗೂ ಇತರೆ ಸಂಘ-ಸಂಸ್ಥೆಗಳಲ್ಲಿ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ.

1963 ರಿಂದ ಧಾರವಾಡದ ಖಾದಿ ಗ್ರಾಮೋದ್ಯೋಗ ಸಮಿತಿಯ ಅಧ್ಯಕ್ಷರಾಗಿ, 1964 ರಿಂದ 1966ರ ವರೆಗೆ ಮತ್ತು 1975 ರಿಂದ 1977ರ ವರೆಗೆ ರೈಲ್ವೆ ಬಳಕೆದಾರರ ಸಮಿತಿಯ ಸದಸ್ಯರಾಗಿದ್ದರು. ಶ್ರೀಮತಿಯವರು ವಯಸ್ಕರ ಶಿಕ್ಷಣಕ್ಕೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಅವರಿಗೆ ರಾಜ್ಯ ಸರ್ಕಾರ ಸಾರ್ವಜನಿಕ ಸೇವಾ ಪ್ರಶಸ್ತಿ ನೀಡಿದೆ. ನಂತರ 1970ರಲ್ಲಿ ಮೈಸೂರು ವಯಸ್ಕರ ಶಿಕ್ಷಣ ಸಮಿತಿಗೆ ಅವ್ಯಾಹತವಾಗಿ ಸದಸ್ಯರಾಗಿ ಆಯ್ಕೆಗೊಂಡಿದ್ದರು. ಕಸ್ತೂರಬಾಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಯ ಟ್ರಸ್ಟಿಗಳಾಗಿ ಸೇವೆ ಸಲ್ಲಿಸಿದ್ದರು. ಹಾಗೂ ಕೊನೆಯ ಗಳಿಗೆಯವರೆಗೂ ಅವರ ತಂದೆಯವರು ಸ್ಥಾಪಿಸಿದ ಮಹಿಳಾ ವಿದ್ಯಾಪೀಠದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

4. ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಸ್. ಹಮೀದ್ ಷಾ ಅವರು ದಿನಾಂಕ 14-03-1997ರಂದು ನಿಧನರಾದರು. ಶ್ರೀಯತರು 1970ರಲ್ಲಿ ಶಿವಾಜಿನಗರದ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ ವಿಧಾನ ಸಭೆಗೆ ಚುನಾಯಿತರಾಗಿ, ನಂತರ 1972ರಲ್ಲಿ ಐದನೆ ವಿಧಾನ ಸಭೆಗೆ ಉಪಚುನಾವಣೆಯಲ್ಲಿ ವಿಧಾನ ಸಭೆಗೆ ಚುನಾಯಿತರಾಗಿ, ನಂತರ 1972ರಲ್ಲಿ ಐದನೆ ವಿಧಾನ ಸಭೆಗೆ ಪುನರ್ ಆಯ್ಕೆಗೊಂಡು ಸೇವೆಸಲ್ಲಿಸಿರುವುದರ ಜೊತೆಗೆ ವಿಧಾನ ಮಂಡಲದ ವಸತಿ ಸಮಿತಿಯ ಸದಸ್ಯರಾಗಿಯೂ ಸಹ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ಕನ್ನಡ, ತಮಿಳು ಹಾಗೂ ಉರ್ದು ಭಾಷೆಗಳಲ್ಲಿ ಒಳ್ಳೆಯ ಭಾಷಣಕಾರರಾಗಿದ್ದಲ್ಲದೆ ಇತರೆ ನಾಲ್ಕು ಭಾಷೆಗಳಲ್ಲಿ ಸಹ ಪರಿಣಿತರಾಗಿದ್ದರು. ಸಮಾಜ ಸೇವಕರಾಗಿದ್ದ ಶ್ರೀಯುತರು ಬೆಂಗಳೂರು ನಗರ ಸಭೆಯ ಸದಸ್ಯರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

5, ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ, ಶ್ರೀ ಭಾಸ್ಕರ್ ನಾಯ್ಡು ಅವರು ಇಂದು ಬೆಳಿಗ್ಗೆ ನಿಧನರಾದರು. ವೃತ್ತಿಯಲ್ಲಿ ವ್ಯಾಪಾರಸ್ಥರು ಹಾಗೂ ಸಮಾಜ ಸೇವಕರಾಗಿದ್ದ ಶ್ರೀಯುತರು 1978ರಲ್ಲಿ ಆರನೇ ವಿಧಾನ ಸಭೆಗೆ ಬಳ್ಳಾರಿ ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ. ಬಳ್ಳಾರಿ ನಗರ ಸಭೆಯ ಅಧ್ಯಕ್ಷರಾಗಿ ಹಾಗೂ ಕಾಂಗ್ರೆಸ್ ಪಕ್ಷದ ರಾಜ್ಯದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಈಗ ಮೃತರ ಗೌರವಾರ್ಥ ಮೌನವನ್ನು ಆಚರಿಸುವ ಮೊದಲು ತಾವುಗಳೆಲ್ಲರೂ ತಮ್ಮ ತಮ್ಮ ಅನಿಸಿಕೆಗಳನ್ನು ಹೇಳಿದಮೇಲೆ ಕೊನೆಯಲ್ಲಿ ಮೌನವನ್ನು ಆಚರಣೆ ಮಾಡೋಣ.

+ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಯವರು)·: ಮಾನ್ಯ ಅಧ್ಯಕ್ಷರೆ, ತಾವು ಈಗಾಗಲೆ ಸದನಕ್ಕೆ ತಿಳಿಸಿರುವ ಹಾಗೆ ಶ್ರೀ ವೀರೇಂದ್ರ ಪಾಟೀಲರು, ಶ್ರೀ ಪಿ. ತಿಮ್ಮಯ್ಯನವರು, ಶ್ರೀಮತಿ

ಲೀಲಾದೇವಿ ವೆಂಕಟೇಶ್ ಮಾಗಡಿಯವರು, ಶ್ರೀ ಹಮೀದ್‌ಷಾರವರು ಹಾಗೂ ಶ್ರೀ ಭಾಸ್ಕರ್ ನಾಯ್ಡುರವರುಗಳು ನಿಧನವಾಗಿರುವ ಬಗ್ಗೆ ಸದನದ ಸಂತಾಪವನ್ನು ವ್ಯಕ್ತಪಡಿಸುತ್ತದೆ. ವಿಶೇಷವಾಗಿ ಶ್ರೀಮಾನ್ ವೀರೇಂದ್ರ ಪಾಟೀಲರ ಬಗ್ಗೆ ಕೆಲವು ಮಾತುಗಳನ್ನು ಹೇಳುವುದು ಉಚಿತವೆಂದು ಭಾವಿಸುತ್ತೇನೆ. ಮಾನ್ಯ ಪಾಟೀಲರು ಕರ್ನಾಟಕ ಏಕೀಕರಣವಾಗುವುದಕ್ಕಿಂತ ಮೊದಲು ಹಳೆ ಮೈಸೂರು ಭಾಗಕ್ಕೆ ಅಷ್ಟಾಗಿ ಪರಿಚಯವಿರಲಿಲ್ಲ. ಆದರೂ ಕರ್ನಾಟಕ ಏಕೀಕರಣವಾದಮೇಲೆ, ಆ ಭಾಗದಲ್ಲಿ ಚಂದ್ರಶೇಖರ್ ಪಾಟೀಲ ಎನ್ನುವವರು ಇದ್ದರು, ಅವರಿಗೂ ಇವರಿಗೂ ಪೊಲಿಟಿಕಲ್ ಪ್ರೊಜೆಕ್ಷನ್ ಬಹಳ ಚೆನ್ನಾಗಿತ್ತು. ಇವರು ಬಹಳ ದೊಡ್ಡ ದೊಡ್ಡ ಚಳುವಳಿಗಳಲ್ಲಿ, ಮಾಸ್ ಮೂವ್‌ಮೆಂಟ್‌ಗಳಲ್ಲಿ ಭಾಗವಹಿಸಿಕೊಂಡು ಬಂದವರೇನಲ್ಲ. ಆದರೆ ಆ ಭಾಗದ ಜನರ ಕಷ್ಟಸುಖಗಳನ್ನು ಅರಿತಂಥ, ಆ ಭಾಗದ ಜನರ ಬಗ್ಗೆ ಕಳಕಳಿಯನ್ನು ಹೊಂದಿದ್ದಂಥ ಮೊದಲ ವ್ಯಕ್ತಿ ನಮಗೆ ಕರ್ನಾಟಕ ಏಕೀಕರಣವಾದ ಮೇಲೆ ಪರಿಚಯವಾದರು. ಏಕೆಂದರೆ ಇಲ್ಲಿ ಸಾಹುಕಾರ ಚೆನ್ನಯ್ಯನವರನ್ನು, ಭಾಷಂ ಅಯ್ಯಂಗಾರ್‌ರವರನ್ನು, ಹೆಚ್. ಸಿದ್ಧಯ್ಯರಂತಹವರನ್ನು ನೋಡಿದಂತಹ ಜನ ನಾವು. ಆ ಕಡೆಯಿಂದ ಬಂದಿದ್ದು, ಕರ್ನಾಟಕದ ಇತರೆಡೆ ಹೆಚ್ಚು ಸಂಪರ್ಕ ಇಟ್ಟುಕೊಂಡಿದ್ದಂತವರು ಶ್ರೀಮಾನ್ ನಿಜಲಿಂಗಪ್ಪನವರು. ಅವರನ್ನು ಬಿಟ್ಟರೆ ಶ್ರೀಮಾನ್ ವಿರೇಂದ್ರ ಪಾಟೀಲ್‌ರು ಬರುತ್ತಾರೆ. ಅವರಿಂದ ಬಹಳ ಜನ ಆ ಭಾಗದಿಂದ ಬಂದವರು ಈ ಭಾಗಕ್ಕೆ ಪರಿಚಯವಾದರು. ಅವರು ನಿಜಲಿಂಗಪ್ಪನವರ ನಾಯಕತ್ವದಲ್ಲಿ, ಎಲ್ಲರಿಗೂ ಗೊತ್ತಿರುವ ಹಾಗೆ ಶ್ರೀಮಾನ್ ರಾಮಕೃಷ್ಣ ಹೆಗ್ಗಡೆ ಮತ್ತು ಶ್ರೀಮಾನ್ ವೀರೇಂದ್ರ ಪಾಟೀಲ್‌ರಿಗೆ 'ಲವ-ಕುಶ' ಎಂಬ ಹೆಸರು ಹೆಚ್ಚು ಪ್ರಚಲಿತ ಆಗಿತ್ತು. ಮಾನ್ಯ ವೀರೇಂದ್ರ ಪಾಟೀಲರು ಕರ್ನಾಟಕದಲ್ಲಿ ಮೊದಲು ಮಂತ್ರಿಯಾಗಿ, ಅನಂತರ ಮುಖ್ಯಮಂತ್ರಿಗಳಾಗಿದ್ದರು. ಅನಂತರ ಅವರು ಕೇಂದ್ರ ಸರ್ಕಾರದಲ್ಲಿ ಮಂತ್ರಿಯಾಗಿದ್ದರು. ಅವರು ಅಲ್ಲಿಂದ ಪುನಃ ರಾಜ್ಯಕ್ಕೆ ವಾಪಸ್ ಬಂದು ಅದೇ ಚಿಂಚೋಳಿ ಮತಕ್ಷೇತ್ರದಲ್ಲಿ ಗೆದ್ದು ಮತ್ತೆ ಮುಖ್ಯಮಂತ್ರಿಯಾಗಿದ್ದರು. ಅವರ ರಾಜಕೀಯ ಜೀವನಕ್ಕೆ ಹಲವಾರು ಮುಖಗಳಿವೆ. ಆದರೆ ಅವುಗಳಲ್ಲಿ ಎದ್ದು ಕಾಣಿಸಿಕೊಂಡದ್ದು ಅವರ ದಕ್ಷತೆ. ಎಲ್ಲರೂ ಅವರನ್ನು ಬಹಳ ಎಫಿಷಿಯಂಟ್ ಅಡ್ಮಿನಿಸ್ಟ್ರೇಟರ್ ಎಂದೇ ಹೇಳುತ್ತಿದ್ದರು. ನಾನು ಅವರೊಂದಿಗೆ ರಾಜ್ಯದ ಇತರ ಮುಖ್ಯಮಂತ್ರಿಗಳನ್ನು ಕಂಪೇರ್ ಮಾಡುವುದಕ್ಕೆ ಹೋಗುವುದಿಲ್ಲ, ನಾನು ಆ ರೀತಿ ಕಂಪೇರೂ ಮಾಡಬಾರದು. ನಾನೂ ಕೂಡ ಕೆಲವು ದಿವಸಗಳ ಮಟ್ಟಿಗೆ ಅವರೊಂದಿಗೆ ಒಂದೇ ಪಾರ್ಟಿಯಲ್ಲಿದ್ದೆ. ಅವರು ಆಗ ನಮ್ಮ ಪಾರ್ಟಿಯ ಅಧ್ಯಕ್ಷರಾಗಿದ್ದರು. ನಾನು ಒಂದೆರಡು ಸಾರಿ ಅವರ ಜೊತೆಗೆ ಕರ್ನಾಟಕದಲ್ಲಿ ಆ ಭಾಗಕ್ಕೆ ಟೂರ್ ಹೋದಾಗಲೂ ಅವರು ಯಾವತ್ತೂ ಸಹ, ಏನೇ ಪತ್ರಿಕೆ ಇರಲಿ, ಅದು ಸಣ್ಣದಿರಲಿ ಅಥವಾ ದೊಡ್ಡದಿರಲಿ, ಅದರ ಮೇಲೆ ಅವರು ಟಿಪ್ಪಣಿ ಮಾಡುತ್ತಿದ್ದರು. ಸಾಮಾನ್ಯವಾಗಿ ನಾವು ಏನಾದರೂ ಪೇಪರ್ ಓದಿದರೆ, ಅದನ್ನು ಹಾಗೇ ಗ್ಲಾನ್ಸ್ ಮಾಡುತ್ತೇವೆ ಅಥವಾ ಕೆಲವೊಂದು ಸಂದರ್ಭದಲ್ಲಿ ಬರೀ ಅದರ ಸಾರಾಂಶ ಹೇಳುತ್ತೇವೆ. ಆದರೆ % Àqàè ŸÖÐpàÌ · [He was more meticulous than an IAS Officer. ಅವರು ನೋಟಿಂಗ್ ಬರೆಯುವಾಗ, ಮತ್ತೊಂದು ಯಾವುದೇ ರೀತಿಯ ಕೆಲಸದಲ್ಲಿ ತೊಡಗಿದಾಗ ಅವರು ಬಹಳ meticulous ಆಗಿದ್ದರು. ಮಾನ್ಯ ವೀರೇಂದ್ರ ಪಾಟೀಲ್‌ರು ಸದನದಲ್ಲಿ ಉತ್ತರ ಕೊಡುವಾಗ ಅವರು

ಮಾತನಾಡುವುದನ್ನು ನಾನು ಹಲವಾರು ಬಾರಿ ನೋಡಿದ್ದೇನೆ, ಬಹಳ precise ಅನಾವಶ್ಯಕವಾದ ಶಬ್ದಗಳನ್ನು ಅವರು ಉಪಯೋಗಿಸುತ್ತಿರಲಿಲ್ಲ ಅಥವಾ ಅನಾವಶ್ಯಕವಾಗಿ ಯಾರೊಡನೆಯೂ ಜಗಳವಾಡಲು ಹೋಗುತ್ತಿರಲಿಲ್ಲ. ಕೆಲವು ಸಾರಿ ಅವರು ಯಾರನ್ನೇ ಹೊಗಳಿದರೂ ಬಹಳ ಮಿತಭಾಷಿ ಅಥವಾ ಯಾರನ್ನೇ ತೆಗಳಿದರೂ ಮಿತಭಾಷಿಯಾಗಿದ್ದರು. ಆ ಒಂದು ಮಿತಭಾಷಿತ ಅವರಲ್ಲಿ ಬಹಳ ಎದ್ದು ಕಾಣುತ್ತಿತ್ತು. ಈ ರಾಜ್ಯಕ್ಕೆ ಅವರು ಸಲ್ಲಿಸಿದ ಸೇವೆ ಅಪಾರವಾದುದು. ಕೃಷ್ಣಾ ಮೇಲ್ದಂಡೆ ಯೋಜನೆ ಆಗಿರಬಹುದು ಅಥವಾ ಕೆಲವು ಪವರ್ ಪ್ರಾಜೆಕ್ಟ್ ಆಗಿರಬಹುದು, ಅವರ ಕಾಲದಲ್ಲಿ ಅವುಗಳು ಪ್ರಾರಂಭವಾದವು ಎಂಬುದನ್ನು ನಾವು ಮರೆಯುವಂತಿಲ್ಲ. ಕೇಂದ್ರ ಸರ್ಕಾರದಲ್ಲಿ ಅವರು ಮಂತ್ರಿಗಳಾಗಿದ್ದಾಗಲೂ ಸಹ ಅವರು ಬೇರೆ ಪಾರ್ಟಿಗೆ ಹೋಗಿ ಅಲ್ಲಿ ಅವರು ಮಂತ್ರಿಗಳಾದರು. ಆ ರಾಜಕೀಯ ವ್ಯತ್ಯಾಸಗಳು ಏನೇ ಇರಲಿ, ಆದರೆ ಆ ರಾಜ್ಯದ ಹಿತಾಸಕ್ತಿ ಕಾಪಾಡಲು ಮತ್ತು ರಾಜ್ಯದ ಪ್ರಗತಿಗೆ ಎಲ್ಲಾ ರೀತಿಯಿಂದ ಬಹಳ ಪ್ರಾಮಾಣಿಕ ಕೆಲಸ ಮಾಡಿದಂತಹ ವ್ಯಕ್ತಿಯಾಗಿದ್ದರು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅವರು ನನಗೆ ಸಂಬಂಧಿಗಳೂ ಸಹ ಆಗಿದ್ದಾರೆ. ಅದೇನೇ ಇದ್ದರೂ, ನಾವು ಸಾಮಾನ್ಯವಾಗಿ ಅವರ ಆತ್ಮಕ್ಕೆ ಶಾಂತಿ ಸಿಗಲಿ ಮುಂತಾಗಿ ಹೇಳಿಕೊಳ್ಳುತ್ತೇವೆ. ಆ ಆತ್ಮ ಎಲ್ಲಿ ಇರುತ್ತದೋ, ಯಾವ ತರಹದ ಶಾಂತಿ ಅದಕ್ಕೆ ಸಿಗುತ್ತದೋ, ನನಗಂತೂ ಇಲ್ಲಿಯವರೆವಿಗೂ ಗೊತ್ತಿಲ್ಲ. ಅದನ್ನು ನೋಡಿಕೊಂಡು ವಾಪಸ್ ಬಂದಿರುವಂತಹರನ್ನು ಇದುವರೆವಿಗೂ ನಾನು ಯಾರನ್ನೂ ನೋಡಿಲ್ಲ. ಆದ್ದರಿಂದ ಈ ಆತ್ಮ, ಶಾಂತಿ ಈ ರಿಚುಯಲ್ಸ್ ಏನಿವೆ, ಅದರ ಬಗ್ಗೆ ನಾನು ಹೇಳುವುದಿಲ್ಲ. ಅವರು ಏನು ಆಡಳಿತ ನಡೆಸಿದರು, ಅವರು ಹೇಗೆ ರಾಜ್ಯವನ್ನು ನಡೆಸಿಕೊಂಡು ಹೋದರು, ಅದರಂತೆ ಸಾಧ್ಯವಾದರೆ ನಾವೂ ನಡೆಯುತ್ತೇವೆ. ನಾವು ಇವತ್ತು ಸರ್ಕಾರದಲ್ಲಿದ್ದೇವೆ, ಅವರು ವಿರೋಧ ಪಕ್ಷದಲ್ಲಿದ್ದಾರೆ. ಅವರೂ ಸರ್ಕಾರದಲ್ಲಿದ್ದರು, ನಾವೂ ವಿರೋಧ ಪಕ್ಷದಲ್ಲಿದ್ದೇವೆ, ಆಗಿನ ಕಾಲದ ರಾಜಕೀಯ ಶಿಷ್ಟಾಚಾರದಂತೆ ನಾವು ನಡೆಸಿಕೊಂಡು ಹೋಗೋಣ. ಪರವಾಗಿಲ್ಲಪ್ಪ, ಇವರು ವೀರೇಂದ್ರ ಪಾಟೀಲ್‌ರಂತೆ ಕೆಲಸ ಮಾಡಿದರು ಎಂದು ಯಾರಾದರೂ ಒಬ್ಬರು ಬಹಳ ಎಫಿಷಿಯಂಟ್ ಆಗಿದ್ದರೆ, ಆ ರೀತಿ ಹೇಳಿದರೆ, ಅಷ್ಟು ಸಾಕು ಎಂದು ಕಾಣುತ್ತದೆ. ಏಕೆಂದರೆ, ಮಾನ್ಯ ವೀರೇಂದ್ರ ಪಾಟೀಲ್‌ರ ಜ್ಞಾಪಕಾರ್ಥವಾಗಿ ಮೆಮೋರಿಯಲ್ ಒಂದನ್ನು ಏಕೆ ಮಾಡಬಾರದು ಎಂದು ಪತ್ರಕರ್ತರು ಮೊನ್ನೆ ನನಗೆ ಕೇಳಿದರು. ನಾನು ಆ ಬಗ್ಗೆ ಸದನದಲ್ಲಿ ವಿಚಾರ ಮಾಡುತ್ತೇನೆ ಹಾಗೂ ಸಚಿವ ಸಂಪುಟದಲ್ಲೂ ಸಹ ವಿಚಾರ ಮಾಡುತ್ತೇನೆ ಎಂದು ಹೇಳಿದ್ದೆ. ಮೆಮೋರಿಯಲ್ಸ್ ಇವತ್ತು ನಮ್ಮ ದೇಶದಲ್ಲಿ ಒಂದು ರೀತಿಯಲ್ಲಿ ಅರ್ಥ ಕಳೆದುಕೊಂಡಿವೆ. ಗಾಂಧೀಜಿಯನ್ನೇ ಮರೆತಂತಹ ಈ ದೇಶ, ಯಾವ ಮೆಮೋರಿಯಲ್‌ನಿಂದ ಯಾರನ್ನು ಜ್ಞಾಪಿಸಿಕೊಳ್ಳುತ್ತದೆ. ಆದರೆ ಅವರು ನಮ್ಮಲ್ಲಿದ್ದರು. ನಮ್ಮ ರಾಜ್ಯವನ್ನು ಅವರು ಆಳಿದರು ಎಂದು ನಾವು ಅವರನ್ನು ಕೆಲವು ಕಾಲ ಸ್ಮರಿಸಿಕೊಳ್ಳುತ್ತೇವೆ. ಆದರೆ ಎಷ್ಟು ದಿವಸಗಳ ಕಾಲ, ಯಾವ ಕಾರಣದಿಂದ ಅವರನ್ನು ನೆನಪಿಟ್ಟುಕೊಳ್ಳುತ್ತೇವೆ ಎನ್ನುವುದನ್ನು ಸ್ಪಷ್ಟವಾಗಿ ಹೇಳಲಿಕ್ಕಾಗುವುದಿಲ್ಲ. ಈ ಸದನದ ಎಲ್ಲಾ ಸದಸ್ಯರ ಪರವಾಗಿ ಅತ್ಯಂತ ಗೌರವಾಪೂರ್ವಕವಾದ ಪ್ರಣಾಮಗಳನ್ನು ನಾನು ಅವರಿಗೆ ಅರ್ಪಿಸುತ್ತೇನೆ. ಮಾನ್ಯ ಅಧ್ಯಕ್ಷರು ಮಂಡಿಸಿರತಕ್ಕಂತಹ ಈ ಸಂತಾಪ ಸೂಚಕ ನಿರ್ಣಯವನ್ನು ನಾನು ಸಂಪೂರ್ಣವಾಗಿ ಸಮರ್ಥನೆ ಮಾಡಿ, ಅವರ ಕುಟುಂಬ ವರ್ಗದವರಿಗೂ,

ಈಗ ನಾವೇನು ಹೇಳಿದರೂ ಅವರಿಗೆ ಸಧ್ಯಕ್ಕೆ ಸಮಾಧಾನವಾಗುವುದಿಲ್ಲ, ಇದು ನಮಗೆ ಗೊತ್ತಿದೆ. ಕಾಲವೇ ಅದನ್ನು ಮರೆಸುತ್ತದೆ. ಕಾಲವೊಂದು ಅದನ್ನು ಮರೆಸದೇ ಹೋಗಿದ್ದರೆ, ಈ ಸಾವನ್ನು ಮರೆಯುವುದು ಬಹಳ ಕಷ್ಟವಾಗುತ್ತದೆ. ಆದರೆ ಕಾಲ ಈ ಸಾವನ್ನು ಮರೆಸಿ ಬಿಡುತ್ತದೆ. ಅದೊಂದು ಪ್ರಕೃತಿಯ ವಿಚಿತ್ರ ನಿಯಮ. Forgetfulness is bliss sometimes. If you cannot forget certain things, you cannot live. Otherwise your life is miserable. So we have this feeling about him. We have respected him, we have worked with him. ಇವತ್ತು ಸದನದ ಎಲ್ಲಾ ಸದಸ್ಯರ ಪರವಾಗಿ ನನ್ನ ಅತ್ಯಂತ ಹೃತ್ಪೂರ್ವಕವಾದ ಪ್ರಣಾಮಗಳನ್ನು ದಿವಂಗತರಿಗೆ ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ತಾವು ಮಂಡಿಸಿದಂತಹ ಸಂತಾಪ ಸೂಚಕ ನಿರ್ಣಯವನ್ನು ನಾನು ಬೆಂಬಲಿಸುತ್ತಾ, ಇವತ್ತು ನಾವೊಬ್ಬ ಹಿರಿಯ ನಾಯಕನನ್ನು ಮತ್ತು ಒಬ್ಬ ಮುತ್ಸದ್ಧಿಯನ್ನು ಕಳೆದುಕೊಂಡಿದ್ದೇವೆ ಎಂದು ಹೇಳಬಯಸುತ್ತೇನೆ. ಶ್ರೀಮಾನ್ ವೀರೇಂದ್ರ ಪಾಟೀಲರು ವಿಶೇಷವಾಗಿ ಹೈದರಾಬಾದ್ - ಕರ್ನಾಟಕದಿಂದ ಬಂದಂತಹವರು. ಅವರು ರಾಜಕಾರಣದಲ್ಲಿ ಧುಮುಕಿದ ಮೇಲೆ ಆ ಭಾಗದಲ್ಲಿ ದಿನೇದಿನೇ ಎತ್ತರದ ಸ್ಥಾನಕ್ಕೆ ಹೋಗಿರುವಂಥಾದ್ದನ್ನು ನಾವು ಕಂಡಿದ್ದೇವೆ. ಸ್ವಾತಂತ್ರ್ಯ ಪೂರ್ವದಲ್ಲಿ ಅವರು ಕಾಂಗ್ರೆಸ್ ಪಕ್ಷದಲ್ಲಿದ್ದ, ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿ ಮತ್ತು ಕಾರ್ಯದರ್ಶಿಗಳಾಗಿ ಕೆಲಸ ಮಾಡಿದಂತಹವರು. ಸ್ವಾತಂತ್ರ್ಯದ ನಂತರ 1952ರಲ್ಲಿ ಆಳಂದ ಮತ ಕ್ಷೇತ್ರದಿಂದ ಶಾಸಕರಾಗಿ, ಪುನಃ 1957ರಲ್ಲಿ, 1962ರಲ್ಲಿ, 1967ರಲ್ಲಿ ಅವರು ಚಿಂಚೋಳಿಯಿಂದ ಶಾಸಕರಾಗಿ, ಮಂತ್ರಿಗಳಾಗಿ ಕೆಲಸವನ್ನು ನಿರ್ವಹಿಸಿದರು. ಅದೇ ಕಾಲದಲ್ಲಿ 1968ರಲ್ಲಿ ಅವರು ರಾಜ್ಯದ ಮುಖ್ಯಮಂತ್ರಿಗಳಾಗಿ ಕೂಡ ಕೆಲಸವನ್ನು ಮಾಡಿದರು. ಶ್ರೀಮಾನ್ ನಿಜಲಿಂಗಪ್ಪನವರ ಒಂದು ಆಶೀರ್ವಾದದಿಂದ ಮತ್ತು ಸ್ಥಳೀಯ ಮುಖಂಡರಾದ ಶ್ರೀಮಾನ್ ಚಂದ್ರಶೇಖರ್ ಪಾಟೀಲ್‌ರವರ ಆಶೀರ್ವಾದದಿಂದ ಅವರ ರಾಜಕಾರಣ ದಲ್ಲಿ ಬೆಳೆಯಲು ಹೆಚ್ಚಿನ ಅವಕಾಶ ಇತ್ತು. ಅವರು ಚಿಂಚೋಳಿಯಲ್ಲಿ ಹುಟ್ಟಿ ಬೆಳೆದರೂ ಕೂಡ ಮೊದಲನೆಯ ಚುನಾವಣೆಯಲ್ಲಿ ಅವರಿಗೆ ಚಿಂಚೋಳಿ ಕ್ಷೇತ್ರದಿಂದ ಸ್ಪರ್ಧಿಸಲು ಟಿಕೆಟ್ ಸಿಗಲಿಲ್ಲ. ಆಗ ಚಂದ್ರಶೇಖರ್ ಪಾಟೀಲ್‌ರವರು ಮಾನ್ಯ ವೀರೇಂದ್ರ ಪಾಟೀಲ್‌ರನ್ನು ತಮ್ಮ ತಾಲ್ಲೂಕಾದ ಆಳಂದ ಕ್ಷೇತ್ರಕ್ಕೆ ಕರೆದೊಯ್ದು ಅಲ್ಲಿ ಇವರನ್ನು ಚುನಾವಣೆಗೆ ನಿಲ್ಲಿಸಿದರು. ಅಂದರೆ ರಾಜಕೀಯದಲ್ಲಿ ಯಾವ ರೀತಿಯಾಗಿ ವ್ಯತ್ಯಾಸಗಳಿರುತ್ತವೆ ಮತ್ತು ಒಬ್ಬರನ್ನು ಬೆಳೆಸಬೇಕು ಅಂದರೆ ಯಾವ ರೀತಿಯಾಗಿ ಹಿಂದಿನ ಮುಖಂಡರು ಅವರ ಗುಣಗಳನ್ನು ಗುರುತಿಸಿ, ಅವರನ್ನು ಬೇರೆ ತಾಲ್ಲೂಕಿನಲ್ಲಿ ಒಯ್ದು ನಿಲ್ಲಿಸಿ ಅವರನ್ನು ಗೆಲ್ಲಿಸಿದರು. ಇವರ ತಾಲ್ಲೂಕಿನಲ್ಲಿ ಬೇರೆಯವರನ್ನು ತಂದು ಅಂದಿನ ಕಾಲದಲ್ಲಿ ನಿಲ್ಲಿಸಿದ್ದರು. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ರಾಜಕೀಯ ವ್ಯತ್ಯಾಸಗಳು ಭಿನ್ನಾಭಿಪ್ರಾಯಗಳು ಒಂದೇ ಪಕ್ಷದಲ್ಲಿ ಇದ್ದರೂ ಕೂಡ ಅನೇಕ ಮುಖಂಡರು ಅವರ ಗುಣಗಳನ್ನು ಕಂಡು ಹಿಡಿದು ಇವರು ಮುಂದೆ ಒಬ್ಬ ಒಳ್ಳೆಯ ರಾಜಕಾರಣಿ ಆಗಬಹುದು. ಇವರನ್ನು ನಾವು ಬೆಳೆಸಬೇಕು ಎನ್ನತಕ್ಕಂಥ ಒಂದು ಮನಸ್ಸು ಇಟ್ಟು ಶ್ರೀಮಾನ್ ಚಂದ್ರಶೇಖರ್ ಪಾಟೀಲರೇ ಆಗಲೀ, ಶ್ರೀಮಾನ್ ನಿಜಲಿಂಗಪ್ಪನವರೇ ಆಗಲೀ,

ಅವರಿಗೆ ಸಾಕಷ್ಟು ಪ್ರೋತ್ಸಾಹ ಕೊಟ್ಟು ಬೆಳೆಸಿದರು. ಮುಂದೆ ಅವರೂ ಕೂಡ, ಅವರಿಗೆ ಒಳ್ಳೆಯ ಹೆಸರ ಮತ್ತು ಕೀರ್ತಿ ತರತಕ್ಕ ಕೆಲಸವನ್ನು ಮಾಡಿದರು. ನಮಗೆ ಅವರ ಹೆಚ್ಚಿನ ಸಂಪರ್ಕ ಬಂದಿದ 1980ರಲ್ಲಿ. ಅದಕ್ಕಿಂತ ಹಿಂದೆ, ಅಂದರೆ ನಾವು ಯಾವಾಗ 1969ರಲ್ಲಿ ವಿದ್ಯಾರ್ಥಿ ಜೀವ ಮುಗಿಸಿಕೊಂಡು ರಾಜಕೀಯಕ್ಕೆ ಧುಮುಕಿದ್ದೆವು, ಆಗ ಅವರು ಕಾಂಗ್ರೆಸ್ (ಓ) ನಲ್ಲಿದ್ದರು. ಏಕೆಂದ ಶ್ರೀಮಾನ್ ನಿಜಲಿಂಗಪ್ಪನವರ ಆಶೀರ್ವಾದದಿಂದ ಅವರು ಮುಖ್ಯಮಂತ್ರಿಯಾದ ಮೇಲೆ, ಅವರನ ಬಿಟ್ಟು ಹೋಗಬಾರದು ಎಂದು ಹೇಳಿ ಆ ಒಂದು ಲಾಯಲಿಟಿ, ಅವರ ಬಗ್ಗೆ ಇರತಕ್ಕಂಥ ಅಭಿಮಾನ ಅವರ ಮನಸ್ಸು ರೂಲಿಂಗ್ ಕಾಂಗ್ರೆಸ್ (ಐ)ಗೆ ಜಾಯಿನ್ ಆಗಬೇಕೆಂದಿದ್ದರೂ ಕೂಡ, ನಿಜಲಿಂಗಪ್ಪನವ ಮೇಲೆ ಅವರಿಗಿರತಕ್ಕ ಪ್ರೇಮ, ವಿಶ್ವಾಸ ಮತ್ತು ಅಭಿಮಾನದಿಂದ ಅವರು ಆ ಕಡೆ ಉಳಿದುಕೊಳ್ಳ ಬೇಕಾಯಿತು. ನಾನು ಮತ್ತು ಶ್ರೀಮಾನ್ ಧರ್ಮಸಿಂಗ್‌ರವರಂತಹ ಅನೇಕ ಯುವಕರು ಅಂದಿನ ಕಾಲದಲ್ಲಿ ಕಾಂಗ್ರೆಸ್(ಆರ್)ನಲ್ಲಿ ಬಂದು ಜಾಯಿನ್ ಆದಮೇಲೆ, ಬಹುಶಃ ಹೆಚ್ಚು ಕಡಿಮೆ, 12-13 ವರ್ಷ ಅವರೇ ಒಂದು ಕಡೆ, ನಾವೇ ಒಂದು ಕಡೆ ಆಗಿ ಕೆಲಸ ಮಾಡತಕ್ಕಂಥ ಒಂದು ಪರಿಸ್ಥಿತಿ ನಮ್ಮ ಜಿಲ್ಲೆಯಲ್ಲಿ ಉಂಟಾಗಿತ್ತು.

ಅವರು 1980ರಲ್ಲಿ ಯಾವಾಗ ಪುನಃ ಕಾಂಗ್ರೆಸ್ ಪಕ್ಷಕ್ಕೆ ಮರಳಿ ಬಂದರು ಆಗ ಅವರು ನಮ್ಮಲ್ಲಿ ಚುನಾವಣೆಗೆ ನಿಲ್ಲುವುದಕ್ಕೆ ತಯಾರಾಗಲಿಲ್ಲ. ಕಾರಣ, ಅಲ್ಲಿನ ಪರಿಸ್ಥಿತಿ ವಾತಾವರಣ ನೋಡಿಕೊಂಡು ಅವರು ಬಾಗಲಕೋಟೆ ಕ್ಷೇತ್ರದಿಂದ ಚುನಾವಣೆಗೆ ಹೋದರು. ಪುನಃ 1984ರಲ್ಲಿ ನಮ್ಮಲ್ಲಿ ಚುನಾವಣೆಗೆ ನಿಲ್ಲಬೇಕೆಂಬ ಒಂದು ತಯಾರಿ ನಡೆಸಿದಾಗ ನನಗೆ ಮತ್ತು ಧರ್ಮಸಿಂಗ್‌ರವರಿಗೆ ಕರೆದು ಕೇಳಿದರು. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಅವರ ಹತ್ತಿರ ಎಷ್ಟು ದೊಡ್ಡ ಗುಣ ಇತ್ತು ಎಂದರೆ, ನಮ್ಮಲ್ಲಿ ನಿಮ್ಮಲ್ಲಿ ಅನೇಕ ಸಾರಿ ನಡೆಯುತ್ತಿರುತ್ತದೆ, ಹೈ ಕಮಾಂಡ್‌ನಿಂದ ಟಿಕೆಟ್ ಕೊಡಿ ನಾವು ನಿಲ್ಲುತ್ತೇವೆ, ಹೀಗೆ, ಇದೆ, ನಿಮ್ಮ ಅಭಿಪ್ರಾಯ ಏನೆಂದು ಯಾರು ಕೇಳುತ್ತಾರೆ. ಟಿಕೆಟ್ ತಂದರೆ ಸಾಕು ಮುಂದಿನ ಕೆಲಸ ಅವರೇ ಮಾಡುತ್ತಾರೆ ಎನ್ನುವ ಅಭಿಪ್ರಾಯ ಸರ್ವೇ ಸಾಧಾರಣವಾಗಿ ಇಂದಿನ ಪರಿಸ್ಥಿತಿಯಲ್ಲಿ ಇರತಕ್ಕಂಥದ್ದು. ಆದರೆ ಅವರು ಆ 1984ರ ಚುನಾವಣೆಯಲ್ಲಿ ನಮ್ಮಿಬ್ಬರನ್ನು ಕರೆದು ನೀವು ಗುಲ್ಬರ್ಗಾಕ್ಕೆ ನಿಲ್ಲಿ ಎಂದರೆ ನಿಲ್ಲುತ್ತೇನೆ. ಬಾಗಲಕೋಟೆ ಬಿಟ್ಟು ಇಲ್ಲಿ ನಿಲ್ಲಬೇಕೆಂದರೆ, ಇಲ್ಲಿನ ಸ್ಥಳೀಯ ಶಾಸಕರ ಬೆಂಬಲ ಇಲ್ಲದೆ ನಿಂತರೆ ಚೆನ್ನಾಗಿರುವುದಿಲ್ಲ. ಅದಕ್ಕಾಗಿ ತಮ್ಮ ಅಭಿಪ್ರಾಯವನ್ನು ನಾನು ಕೇಳುತ್ತಿದ್ದೇನೆ ಎನ್ನತಕ್ಕಂತಹ ಮಾತನ್ನು ಅವರು ನಮಗೆ ಸ್ಪಷ್ಟವಾಗಿ ಅಂದಿನ ಸಂದರ್ಭದಲ್ಲಿ ಕೇಳಿದರು. ಆ ರೀತಿ ಅವರು ಕೇಳಿದಾಗ ನಮಗೂ ಕೂಡ ಒಬ್ಬ ಮಾಜಿ ಮುಖ್ಯ ಮಂತ್ರಿಗಳು, ಕೇಂದ್ರ ಸಚಿವರೂ ಆದ ಅವರೇ ಇಲ್ಲಿ ಬಂದು ನಿಲ್ಲುತ್ತಾರೆನ್ನುವುದನ್ನು ತಿಳಿದು ಖಂಡಿತವಾಗಿ ತಾವು ಹೈ ಕಮಾಂಡನಿಂದ ಟಿಕೆಟ್ ತೆಗೆದುಕೊಂಡು ಬಂದು ನಿಂತರೆ ನಾವೆಲ್ಲರೂ ಸಹಾಯ ಮಾಡುತ್ತೇವೆಂದು ಹೇಳಿದ ಮೇಲೆ ಅವರು ಬಹಳ ಖುಷಿಯಿಂದ ಆ ಜಿಲ್ಲೆಯಲ್ಲಿ ಟೂರ್ ಮಾಡುವಾಗ ನಮಗೆ, ಧರ್ಮಸಿಂಗ್‌ರವರಿಗೆ, ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಿಗೆ ಜೊತೆಯಲ್ಲಿ ಕರೆದುಕೊಂಡು ಹೋಗಿ ಪ್ರಚಾರ ಮಾಡತಕ್ಕಂತಹ ಪ್ರವೃತ್ತಿಯನ್ನು ಅವರು ಬೆಳೆಸಿದರು. ಒಂದು ಉದಾಹರಣೆ, ಈಗಾಗಲೇ ತಾವು ಒಂದು ಮಾತು ಹೇಳಿದಿರಿ, ಸ್ವಲ್ಪ ಧೈರ್ಯ ಕಡಿಮೆ ಎಂದು. ಏಕೆಂದರೆ ನನ್ನ ಕ್ಷೇತ್ರದಲ್ಲಿ

ಏನಾಯಿತು ಎಂದರೆ, ಒಂದು ಗಲಾಟೆ ನಡೆಯಿತು. ಆ ಗಲಾಟೆ ನಡೆದಾಗ ಅವರು ಆಗ ಪಕ್ಷ ಬಿಟ್ಟು ಇಲ್ಲಿ ಬಂದಿದ್ದಾರೆಂದು ಹೆಚ್ಚು ಕಡಿಮೆ ಜನತಾದಳ ಪಕ್ಷದಲ್ಲಿರತಕ್ಕಂತಹವರಿಗೆ ಸಿಟ್ಟು ಇತ್ತು. ಸ್ಥಳೀಯವಾಗಿರತಕ್ಕಂಥ ಅಭ್ಯರ್ಥಿಗಳಿಗೆ ಬಿಟ್ಟು ಅವರಿಗೆ ಟಿಕೇಟ್ ಸಿಕ್ಕಿದೆ ಎಂದು ಕೆಲವು ಜನರಲ್ಲಿ ದ್ವೇಷವಿತ್ತು. ಹೀಗಿರುವುದರಿಂದ ಅವರ ಭಾಷಣದಲ್ಲಿ ಕೆಲವು ಜನ ಕಲ್ಲು ತೂರಾಟ ಮಾಡಿದರು. ಅಲ್ಲಿಂದ ಸಬ್‌ಇನ್‌ಸ್ಪೆಕ್ಟರ್ ಫೈರಿಂಗ್ ಮಾಡಿದರು. ಗಾಳಿಯಲ್ಲಿ ಗುಂಡು ಹಾರಿಸಿದರು. ಆಗ ಅವರು ಭಾಷಣ ಮಾಡಲಿಲ್ಲ. ಅವರು ಹೇಳಿದರು ಖರ್ಗೆಯವರೇ, ಇದನ್ನೆಲ್ಲಾ ನಿಲ್ಲಿಸಿ ಬಿಡಿ. ಕೊಟ್ಟಷ್ಟು ಮತ ಕೊಡುತ್ತಾರೆ, ಬಿಟ್ಟವರು ಬಿಡುತ್ತಾರೆ. ಓಟು ಬಂದರೆ ಬರುತ್ತವೆ, ಬಿಟ್ಟರೆ ಬಿಡುತ್ತವೆ. ಹೋಗೋಣವೆಂದು ಹೇಳಿದರು. ನಾನು ಹೇಳಿದೆ, ಈಗ ತಾವು ಬಿಟ್ಟು ಹೋಗಬಹುದು, ಆದರೆ ನಾನು ಇಲ್ಲಿ ಎಮ್.ಎಲ್.ಎ. ನಾಳೆ ನಾನು ಪುನಃ ಇಲ್ಲಿ ಫೇಸ್ ಮಾಡಬೇಕಾಗುತ್ತದೆ. ಆದುದರಿಂದ ದಯವಿಟ್ಟು ಹೋಗಬೇಡಿ. ಇವತ್ತಿನ ದಿವಸ ಇಲ್ಲೇ ಗುರುಮಿಠ್‌ಕಲ್‌ನಲ್ಲಿ ವಾಸ ಮಾಡೋಣ. ನಾಳೆ ಒಂಭತ್ತು ಘಂಟೆಗೆ ಪುನಃ ಇಲ್ಲಿ ಮೀಟಿಂಗ್ ಮಾಡೋಣ. ಆಗ ನೀವು ಹೋಗಬಹುದು, ಈಗ ಹೋದರೆ ಅದು ಚೆನ್ನಾಗಿರುವುದಿಲ್ಲ ಎನ್ನತಕ್ಕಂತಹ ಮಾತನ್ನು ನಾನು ಹೇಳಿದಾಗ, ಅವರು ಬೇಡ ಮತಗಳು ಬಂದಷ್ಟು ಬರುತ್ತವೆ, ಹೋದಷ್ಟು ಹೋಗುತ್ತವೆ ಎಂದು ಅವರು ಏನಾದರೂ ಮಾಡಿಕೊಳ್ಳಲಿ ಎಂದು ಹೇಳಿದರು. ಕೊನೆಗೆ ಅವರನ್ನು ಐ.ಬಿ.ಗೆ ತಂದು ಸಮಾಧಾನ ಮಾಡಿ 50-60 ಜನರಿಗೆ ಒಂದೇ ಕಡೆ ಸೇರಿಸಿ ಊಟ ಮಾಡಿಸಿ ಮುಗಿಸಿ ಮರುದಿವಸ ಒಂಭತ್ತು ಗಂಟೆಗೆ ಎಲ್ಲಾ ಹಳ್ಳಿ ಜನರನ್ನು ಸೇರಿಸಿ ಒಂದು ಮೀಟಿಂಗ್ ಮಾಡಿ ಅವರಿಗೆ ಕಳುಹಿಸಿದ ಮೇಲೆ ಅವರು ಹೇಳಿದರು, ಒಂದೆರಡು ಗಂಟೆಗಳಲ್ಲಿ ಆರ್ಗನೈಸ್ ಮಾಡಿ ಒಂದು ಮೀಟಿಂಗ್ ಮಾಡುವುದಕ್ಕೆ ಪುನಃ ಮಾತನಾಡುವುದಕ್ಕೆ ಇಷ್ಟೊಂದು ವ್ಯವಸ್ಥೆ ಮಾಡಿಕೊಂಡಿದ್ದೀರಿ ಎಂದರೆ, ನಿಜವಾಗಿಯೂ ಈಗ ಈ ಭಾಗದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಎಷ್ಟು ಬೆಂಬಲ ಇದೆ ಎಂದು ಅರ್ಥವಾಗುತ್ತದೆ ಎನ್ನತಕ್ಕಂಥಹ ಹೊಗಳಿಕೆಯ ಮಾತನ್ನು ಅವರು ಆಡಿದರು. ಈ ರೀತಿ ಹೊಗಳಿಕೆ ಮಾತನ್ನು ಆಡಿದ ಮೇಲೆ ಅದೇ ರೀತಿಯಾಗಿ ನಾವು ಪುನಃ ಪ್ರಚಾರ ಮಾಡಿಕೊಂಡು ಬಂದೆವು. ಕೊನೆಗೆ ಅದೇ ಮತ ಕ್ಷೇತ್ರದಲ್ಲಿ ಎಲ್ಲಾ ನಮ್ಮ ಜಿಲ್ಲೆಯಲ್ಲಿ ಹೆಚ್ಚಿನ ಬಹುಮತ ಸಿಕ್ಕಿತು. ಆದರೆ ಅವರು ನಮ್ಮನ್ನು ಕರೆದು ಸ್ಪಷ್ಟವಾಗಿ ಹೇಳಿದರು, ನೀವು ಇಷ್ಟೊಂದು ಅಭಿಮಾನ ಪೂರ್ವಕವಾಗಿ ಅಲ್ಲಿ ಕೆಲಸ ಮಾಡಿದ್ದಕ್ಕೆ ಹೆಚ್ಚಿನ ಮತಗಳನ್ನು ನಾನು ಇಲ್ಲಿ ಪಡೆದುಕೊಂಡೆ ಎಂದು ಹೇಳತಕ್ಕಂತಹ ಮಾತು ಅವರ ಬಾಯಿಯಿಂದ ಬಂದಿತು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಇವತ್ತು ಇಷ್ಟು ಜನ ಮುಖಂಡರು ಆ ಮಟ್ಟಕ್ಕೆ ಬೆಳೆದಂತಹವರು ಕರೆದು ಕೇಳಿ ಸೌಜನ್ಯತೆಯಿಂದ ನಾನು ನಿಲ್ಲುತ್ತೇನೆ, ನನಗೆ ಸಹಾಯ ಮಾಡಿ ಎಂದು ಹೇಳುತ್ತಾರೆ? ಏಕೆಂದರೆ ಆ ಮಟ್ಟಕ್ಕೆ ಬರದೇ ಇರುವವರಿಗೆ ಏನನ್ನಿಸುತ್ತದೆ ಎಂದರೆ, ನಾನು ಇವರಿಗೆ ಕೇಳಿದರೂ ಅಷ್ಟೇ, ಕೇಳದೇ ಇದ್ದರೂ ಅಷ್ಟೆ. ನ್ಯಾಯವಾಗಿ ಕೆಲಸ ಮಾಡುತ್ತಾರೆ, ಕೆಲಸ ಮಾಡದೆ ಇದ್ದರೆ ಜನ ಮತ ಕೊಡುತ್ತಾರೆ, ಏಕೆ ಕೇಳಬೇಕು ಎನ್ನುವ ಭಾವನೆ ಬರುತ್ತದೆ. ಆದರೆ ಅವರು ಅವೆಲ್ಲವನ್ನೂ ಬದಿಗಿಟ್ಟು ಆ ಮಾತನ್ನು ಆಡಿದರು. ಇನ್ನೊಂದು ಸಂದರ್ಭದಲ್ಲಿ ನಾನು ಅವರನ್ನು ನೆನಪಿಸಿಕೊಳ್ಳುವಂಥದ್ದು ಬಹಳ ಮುಖ್ಯ. ವಿಶೇಷವಾಗಿ ಗುಲ್ಬರ್ಗಾ ಜಿಲ್ಲೆಯಲ್ಲಿ ಟಿಕೇಟ್ ಕೊಡುವಾಗ ನಾವು ಹೇಳಿದಕ್ಕೆ ಕೊಡದೇ ಇದ್ದರೂ ಕೂಡ ಕೆಲವು

ಕ್ಷೇತ್ರದಲ್ಲಿ ನಾನು ಅವರ ಮಾತಿಗೆ ಬೆಲೆ ಕೊಡದೇ ಹೋದರೆ ಸರಿಯಾಗುವುದಿಲ್ಲ ಎನ್ನು ಭಾವನೆಯಿಂದ 1989ರಲ್ಲಿ ಅವರು ಅಧ್ಯಕ್ಷರಾಗಿದ್ದಾಗ ಧರ್ಮಸಿಂಗ್ ಮತ್ತು ನನಗೂ ಇಬ್ಬರಿಗ ಕರೆಯಿಸಿ ಅವರ ಮನೆಯಲ್ಲಿ ಒಂದು ಮಾತು ಕೇಳಿದರು. ಇಂತಹ ಮೂರು-ನಾಲ್ಕು ಮತ ಕ್ಷೇತ್ರಗಳ ನಾನು ಬದಲಾವಣೆ ಮಾಡಬೇಕೆಂದು ತೀರ್ಮಾನ ಮಾಡಿದ್ದೇನೆ. ತಾವು ಏನು ಹೇಳುತ್ತೀರಿ ಎಂದ ಸ್ಪಷ್ಟವಾಗಿ ಕೇಳಿದರು. ಅದೇ ರೀತಿ ನಾವೂ ಕೂಡ ಹೇಳಿದೆವು. ಆ ಎರಡು-ಮೂರು ಮತ ಕ್ಷೇತ್ರಗಳ ನೀವು ಬದಲಾವಣೆ ಮಾಡುವುದಾದರೆ ಒಂದು ರಾಂಗ್ ಸಿಗ್ನಲ್ ಹೋಗುತ್ತದೆ. ಪುನಃ ಪಕ್ಷದಲ್ಲಿ ಒಡಕ ಇವೆ ಎನ್ನತಕ್ಕಂಥದ್ದು ಬರುತ್ತದೆ. ಅದಕ್ಕಾಗಿ ದಯವಿಟ್ಟು ನೀವು ಈ ಕ್ಷೇತ್ರದಲ್ಲಿ ಬದಲಾವ ಮಾಡುವುದಕ್ಕೆ ಹೋಗಬೇಡಿ. ಅದಕ್ಕಾಗಿ ನೀವು ಅಫ್ಜಲ್‌ಪುರ ಆಗಲಿ, ಚಿತಾಪುರವಾಗಲಿ, ಬೇರೆ ಕ ಎಲ್ಲಾ ಕಡೆಯಲ್ಲಿ ಬ್ಯಾಕ್‌ವರ್ಡ್ ಕ್ಲಾಸ್ ಜನರು ಹೆಚ್ಚಿಗೆ ಇದ್ದಾರೆ ಅವರಿಗೆ ಕೊಡತಕ್ಕಂಥಾದ್ದ ಮಾಡಬೇಕು, ಇಲ್ಲದೇ ಇದ್ದರೆ ತಪ್ಪಾಗುತ್ತದೆ ಎಂದು ನಾನು ಹೇಳಿದ ಮೇಲೆ ಅವರು ತಕ್ಷ ಒಪ್ಪಿಕೊಂಡರು. ಆಯಿತು ನನ್ನ ಅಪೇಕ್ಷೆ ಇತ್ತು, ನನ್ನ ಜೊತೆಯಲ್ಲಿ ಕೆಲಸ ಮಾಡಿದಂತಹ ಕೆಲವು ಜ ಇದ್ದರು, ಅವರಿಗೆ ನಾನು ಅಕಾಮಡೇಟ್ ಮಾಡಬೇಕೆಂದು ಇದ್ದೆ. ಆದರೆ ಇವತ್ತಿನ ದಿವಸ ನೀವ ಇದನ್ನೇ ಹಠ ಹಿಡಿದರೆ ಪರವಾಗಿಲ್ಲ, ಮುಂದೆ ಏನಾಗುತ್ತದೆ ನೋಡೋಣ ಎಂದು ಹೇಳಿ, ಅವರ ನಾವು ಯಾರನ್ನು ಸಜೆಸ್ಟ್ ಮಾಡಿದ್ದೇವೆ ಅವರಿಗೇ ಟಿಕೆಟ್ ಕೊಟ್ಟರು. ಇದು ಒಂದು ದೊಡ್ಡ ಮನಸ್ಸು ಈ ಒಂದು ರೀತಿಯಲ್ಲಿ ಕೆಲಸ ಮಾಡತಕ್ಕಂತಹ ಒಂದು ಗುಣ ಅವರಲ್ಲಿತ್ತು. ಆ ಗುಣಕ್ಕೆ ಮೆಚ್ಚಿ ನಾವ ಅವರು ಏನು ಆ ಭಾಗದಲ್ಲಿ ತೀರ್ಮಾನ ತೆಗೆದುಕೊಳ್ಳುತ್ತಿದ್ದರು, ಅದಕ್ಕೆ ಎಂದೂ ಕೂಡ ವಿರೋಧವಾಗಿ ಹೋಗತಕ್ಕಂಥದ್ದು ಮಾಡಲಿಲ್ಲ ಅವರು ಮುಖ್ಯಮಂತ್ರಿಗಳಾಗಿದ್ದಾಗ ನಾನು ಅವರ ಮಂತ್ರಿಮಂಡಲದಲ್ಲಿ ಸೇರದೇ ಇದ್ದರೂ ಒಂದು ದಿವಸ ಕೂಡ ಯಾವ ಆಕ್ಟಿವಿಟೀಸ್ ಆಗಲಿ, ಡಿಸಿಡೆಂಟ್ ಆಕ್ಟಿವಿಟೀಸ್ ಯಾವುದಾದರೂ ಒಂದು ಇರಲಿಲ್ಲ ಎಂದರೆ ಮರು ದಿವಸ ಪ್ರಾರಂಭವಾಗುತ್ತದೆ. ಆದರೆ ಆ ಭಾಗಕ್ಕೆ ಅವರು ಸಲ್ಲಿಸಿದ ಸೇವೆ ಮತ್ತು ಆ ಭಾಗದಲ್ಲಿ ಮಾಡುವ ಕೆಲಸ ಕಾರ್ಯಗಳು ಹಾಗೂ ಆ ಭಾಗದಲ್ಲಿ ಎತ್ತರವಾದ ಮುಖಂಡತ್ವ ನಾಯಕತ್ವ ಏನು ಕೊಟ್ಟಿದ್ದರು, ಆ ನಾಯಕತ್ವಕ್ಕೆ ಸರಿ ಸಮಾನವಾಗಿ ಬರತಕ್ಕಂತಹ ವ್ಯಕ್ತಿಗಳು ಇರಲಿಲ್ಲ. ಅದಕ್ಕಾಗಿ ನಮ್ಮ ಜನ ಹೆಚ್ಚಿನ ರೀತಿಯಲ್ಲಿ ಅವರಿಗೆ ಬೆಂಬಲ ಕೊಟ್ಟು ಇನ್ನೂ ದೊಡ್ಡ ಸ್ಥಾನದಲ್ಲಿ ಅವರನ್ನು ನೋಡಬೇಕು ಎನ್ನತಕ್ಕಂತಹ ಹವ್ಯಾಸ ಅವರಿಗೆ ಇತ್ತು. ಆದರೆ ಕಾರಣಾಂತರಗಳಿಂದ ಅವರಿಗೆ ಪ್ಯಾರಲಿಸಿಸ್ ಅಟ್ಯಾಕ್ ಆದಮೇಲೆ ರಾಜಕೀಯವಾಗಿ ಬದಲಾವಣೆಯಾಯಿತು. ಕೊನೆಗೆ ಅವರು ಮುಖ್ಯಮಂತ್ರಿ ಪದವಿಯಿಂದ ಇಳಿಯಬೇಕಾಯಿತು. ಆದರೂ ಕೂಡ ಅವರಿಗೆ ನೋವು ಇದ್ದಾಗ ಕೂಡ ಯಾವುದೇ ಹಿಂದುಳಿದ ಭಾಗದ ಬಗ್ಗೆ ಪ್ರಶ್ನೆ ಬಂದಾಗ ಸಾವಧಾನವಾಗಿ ರಾಜ್ಯದ ಬಗ್ಗೆ ಅಷ್ಟೇ ಅಲ್ಲ, ದೇಶದ ಬಗ್ಗೆಯೂ ಚಿಂತನೆ ಮಾಡತಕ್ಕಂತಹ ಶಕ್ತಿ ಅವರಿಗೆ ಇತ್ತು. ಜೊತೆಯಲ್ಲಿ ವಿಶೇಷವಾಗಿ ಆ ಹಿಂದುಳಿದ ಭಾಗಕ್ಕೆ ಆದ್ಯತೆಯನ್ನು ಕೊಡಬೇಕು ಎನ್ನುವುದೇ ಅವರ ಒಂದು ಪ್ರಾಮಾಣಿಕವಾದ ಅನಿಸಿಕೆ ಇದ್ದ ಕಾರಣ ಹೈದರಾಬಾದ - ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ಗೆ ಒಂದು ಚಾಲನೆ ಕೊಟ್ಟು, ಹಣ ಕೊಟ್ಟು, ಅದನ್ನು ಅವರು ಪ್ರಾರಂಭ ಮಾಡಿದರು. ಆ ಕೆಲಸವನ್ನು ಮಾಡಿದ್ದಕ್ಕಾಗಿ ಅವರನ್ನು ಶ್ರೀ ಪಿ. ತಿಮ್ಮಯ್ಯನವರು, ಲೀಲಾವತಿ

ಮಾಗಡಿಯವರು, ಎಸ್. ಹಮೀದ್‌ಷಾರವರು, ಮತ್ತು ಭಾಸ್ಕರ್ ನಾಯ್ಡುರವರೂ ಕೂಡ ನಿಧನ ಹೊಂದಿದ್ದಾರೆ. ವಿಶೇಷವಾಗಿ, ಹಮೀದ್‌ಷಾರವರು 1972ರಲ್ಲಿ ನಮ್ಮ ಜೊತೆಯಲ್ಲಿ ಶಾಸಕರಾಗಿ ಕೆಲಸ ಮಾಡಿದರು. ಮತ್ತು ಆ ಐತಿಹಾಸಿಕವಾಗಿ ಉಪ ಚುನಾವಣೆ ಏನು ಇತ್ತು, ಕಾಂಗ್ರೆಸ್ ಪಕ್ಷ ಇಬ್ಭಾಗ ಆದಮೇಲೆ 1980ರಲ್ಲಿ ಶಿವಾಜಿನಗರದಿಂದ ರೂಲಿಂಗ್ ಕಾಂಗ್ರೆಸ್ ವತಿಯಿಂದ ಗೆದ್ದು ಅಂದಿನ ಕಾಂಗ್ರೆಸ್ ಪಕ್ಷಕ್ಕೆ ಹೊಸ ಚಾಲನೆ ಅಥವಾ ಹೊಸ ತಿರುವು ಬರತಕ್ಕಂತಹ ಗೆಲುವನ್ನು ಅವರು ಕೊಡಿಸಿದರು. ಅದಾದ ಮೇಲೆ ಭಾಸ್ಕರ್ ನಾಯ್ಡುರವರು ತಮ್ಮ ಗೊತ್ತಿದೆ, ಒಬ್ಬ ಒಳ್ಳೆಯ ಗೆಳೆಯ ಮತ್ತು ಎಲ್ಲರನ್ನು ಒಳ್ಳೆಯ ದೃಷ್ಟಿಯಿಂದ ನೋಡತಕ್ಕಂತಹ ಮತ್ತು ಯಾರೇ ಅವರ ಮನೆಗೆ ಹೋಗಲಿ, ಅವರಿಗೆ ಒಳ್ಳೆಯ ಊಟ ಉಪಚಾರ ಮಾಡಿಸಿ, ಯೋಗಕ್ಷೇಮ ನೋಡಿಕೊಂಡು, ಕೇಳಿಕೊಂಡು ಕಳುಹಿಸುತ್ತಿದ್ದರು. ಯಾರಾದರೂ ತಪ್ಪಿ ಅವರನ್ನು ನೋಡದೆ ಬಳ್ಳಾರಿಯಿಂದ ಬಂದರೆ ಇಲ್ಲಿಯವರೆಗೆ ಬಂದು ನಮ್ಮ ಮನೆಗೆ ಏಕೆ ಬಂದಿಲ್ಲ ಎಂದು ಅನೇಕ ಕಡೆ ಅವರ ಹತ್ತಿರ ಜಗಳ ಕಾಯ್ದುಕೊಂಡು ಮುನಿಸಿಕೊಂಡು ಹೋಗತಕ್ಕಂತಹ ಮನುಷ್ಯ.

1.00 ಪಿ.ಎಂ

ಅವರು ಅಂಥ ಒಬ್ಬ ಒಳ್ಳೆಯ ಮನುಷ್ಯರಾಗಿದ್ದರು. ಒಂದು ಘಟನೆ ನನಗೆ ನೆನಪಿಗೆ ಬರುತ್ತಿದೆ. ಬಹುಶಃ ಆಗ ಮಾನ್ಯ ಮುಖ್ಯಮಂತ್ರಿಗಳೂ ಈ ಭಾಗದಲ್ಲಿದ್ದಿರಿ. ಅಂದು ಮಾನ್ಯ ದೇವರಾಜ್ ಅರಸುರವರು ಈ ಸ್ಥಳದಲ್ಲಿ ಎದ್ದು ಮಾತನಾಡುತ್ತಿರುವಾಗ, ಅಂದು ಸಿ.ಎಂ. ಇಬ್ರಾಹಿಂರವರು ಸಚಿವರಾಗಿದ್ದರು, ಅವರು ಹೇಳಬಾರದಂಥ ಮಾತನ್ನು ಹೇಳಿದಮೇಲೆ ಪ್ರಪ್ರಥಮ ಬಾರಿಗೆ ಭಾಸ್ಕರ್ ನಾಯ್ಡುರವರು ಸದನದಲ್ಲಿ ಎದ್ದು, ಅವರು ಆಡಳಿತ ಪಕ್ಷದ ಸದಸ್ಯರಾಗಿದ್ದರೂ ನೀವು ಹೇಳಿದಂಥ ಮಾತು ತಪ್ಪು, ಆ ಮಾತನ್ನು ವಾಪಸ ತೆಗೆದುಕೊಳ್ಳಬೇಕು, ಕ್ಷಮೆ ಕೋರಬೇಕೆಂದು ಹಠವನ್ನು ಹಿಡಿದಾಗ ಇಡೀ ಸದನ ಎದ್ದು ನಿಂತಾಗ ಮಾನ್ಯ ದೇವರಾಜ್ ಅರಸುರವರು ಕಣ್ಣೀರನ್ನು ಹಾಕಿದರು; ಅಂದರೆ ಅಷ್ಟೊಂದು ಅಭಿಮಾನದಿಂದ ತಮ್ಮ ಗೆಳೆಯರನ್ನು ನೋಡತಕ್ಕದ್ದು, ರಕ್ಷಣೆ ಮಾಡತಕ್ಕ ಗುಣವನ್ನು ಅವರು ಹೊಂದಿದ್ದರು. ಅಂಥ ಒಳ್ಳೆಯ ವ್ಯಕ್ತಿಯನ್ನು ನಾವಿಂದು ಕಳೆದುಕೊಂಡಿದ್ದೇವೆ. ಅಗಲಿರುವ ಎಲ್ಲರ ಆತ್ಮಕ್ಕೆ ಶಾಂತಿಯನ್ನು ನೀಡಲಿ ಎಂದು ಹೇಳದಿದ್ದರೂ ಸಹ ರೂಢಿಯಲ್ಲಿ ಬಂದಿರುವುದರಿಂದ ಹೇಳಲೇ ಬೇಕಾಗುತ್ತದೆ. 'ಆತ್ಮಕ್ಕೆ' ಎಂದು ತಾವು ಹೇಳದಿರಬಹುದು, ಆದರೆ ಇದರ ಬಗ್ಗೆ ಜನರಲ್ಲಿ ನಂಬಿಕೆ ಇದ್ದ ಕಾರಣ ನಾವು ಆತ್ಮಕ್ಕೆ ಎನ್ನುವ ಅಂಶವನ್ನು ಹೇಳಬೇಕಾಗುತ್ತದೆ. ಅವರುಗಳಿಗೆ ಶಾಂತಿ ಸಿಗಲಿ. ಅವರುಗಳ ಅಗಲಿಕೆಯಿಂದ ಅವರ ಕುಟುಂಬಕ್ಕೇನು ನಷ್ಟವಾಗಿದೆ ಅದನ್ನು ಭರಿಸುವ ಶಕ್ತಿಯು ದೇವರು ಕಲ್ಪಿಸಲಿ ಎಂದು ಹೇಳಿ, ತಾವು ಇಂದು ತಂದಿರುವ ಸಂತಾಪ ಸೂಚನೆಯನ್ನು ಬೆಂಬಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, ಮೊದಲು ತಾವು ತಂದಿರುವ ಸಂತಾಪ ಸೂಚನೆಯನ್ನು ಅನುಮೋದಿಸುತ್ತ ಕೆಲವು ಮಾತುಗಳನ್ನು ಹೇಳಬಯಸುವೆ. ಈ ಕನ್ನಡ ನಾಡು ಕಂಡಂಥ ಒಬ್ಬ ಅಪರೂಪದ ಸಜ್ಜನಿಕೆಯ, ದಕ್ಷ ಪ್ರಾಮಾಣಿಕ ರಾಜಕೀಯ ಮುತ್ಸದ್ದಿ

ಯಾಗಿದ್ದ ಶ್ರೀಮಾನ್ ವೀರೇಂದ್ರ ಪಾಟೀಲ್‌ರನ್ನು ಕಳೆದುಕೊಂಡು ಕನ್ನಡ ನಾಡು ತಬ್ಬಲಿಯಾಗಿದೆ. ದಕ್ಷತೆಗೆ, ಪ್ರಾಮಾಣಿಕತೆಗೆ ಮತ್ತೊಂದು ಹೆಸರು ಎಂದರೆ ವೀರೇಂದ್ರ ಪಾಟೀಲರು ಎಂದು ಹೇಳಿದರೆ ತಪ್ಪಾಗುವುದಿಲ್ಲ. ಅವರ ಸಾವಿನ ಸುದ್ದಿಯು ನಾನು ಶಿಕಾರಿಪುರದಲ್ಲಿದ್ದಾಗ ಗೊತ್ತಾಗಿ ಅಂದು ಮಧ್ಯಾಹ್ನವೇ ನಾಲ್ಕು ಗಂಟೆಗೆ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುವ ಅವಕಾಶ ನನಗೆ ಸಿಕ್ಕಿತು. ಬೆಳಗಿನಿಂದ ಸಂಜೆಯವರೆಗೆ ಸಾವಿರಾರು ಸಂಖ್ಯೆಯಲ್ಲಿ ಜನ ಸಮೂಹವೇ ಶ್ರದ್ಧಾಂಜಲಿಗಾಗಿ ಅಲ್ಲಿ ಬಂದಿತ್ತು. ಅವರ ಹುಟ್ಟೂರಾದ ಚಿಂಚೋಳಿಯಲ್ಲಿ ಅವರ ಅಂತ್ಯಕ್ರಿಯೆಯ ಸಂದರ್ಭದಲ್ಲಿ ನಲವತ್ತರಿಂದ ಐವತ್ತು ಸಾವಿರ ಜನರು ಸೇರಿದ್ದರು ಎಂದರೆ ಎಷ್ಟು ಜನರ ಅಭಿಮಾನ, ವಿಶ್ವಾಸ, ನಂಬಿಕೆಯನ್ನಿಟ್ಟು ಕೊಂಡಿದ್ದರು ಎಂಬುದು ಕಂಡು ಬರುತ್ತದೆ. ಹಲವಾರು ಸಂದರ್ಭಗಳಲ್ಲಿ ನಾವು ವ್ಯಕ್ತಿಯ ಸಾವಿನ ನಂತರ ಅನುಕಂಪದ ಮಾತುಗಳನ್ನು ಹೇಳುತ್ತೇವೆ. ಆದರೆ ಯಾರು ದಕ್ಷ, ಪ್ರಾಮಾಣಿಕವಾದ ಆಡಳಿತವನ್ನು ಕೊಟ್ಟರೋ ಅಂಥವರು ಮುಖ್ಯಮಂತ್ರಿಗಳ ಸ್ಥಾನದಿಂದ ಯಾವ ರೀತಿಯಲ್ಲಿ ನಿರ್ಗಮಿಸಬೇಕಾಯಿತು ಆ ಸಂದರ್ಭದಲ್ಲಿ ಅನುಕಂಪದ ಮಾತುಗಳು ಬಂದಿದ್ದರೆ ಬಹುಶ I ಕನ್ನಡ ನಾಡಿಗೆ ಅವರ ಸೇವೆ ಇನ್ನು ಹೆಚ್ಚು ಸಿಗುತ್ತಿತ್ತು ಎಂದು ನಾನು ಭಾವಿಸುತ್ತೇನೆ. ನನಗೂ ವೀರೇಂದ್ರ ಪಾಟೀಲ್‌ರಿಗೂ ಹೆಚ್ಚು ಸಂಪರ್ಕವಿರಲಿಲ್ಲ. ನಾನು ಶಾಸಕನಾದಮೇಲೆ ಅವರು ಮುಖ್ಯಮಂತ್ರಿಗಳಾಗಿದ್ದಾಗ ಈ ಸದನದ ಒಳಗೆ ಯಾವುದೋ ಕಾರಣಕ್ಕಾಗಿ ರೈತರ ಸಮಸ್ಯೆಯನ್ನು ತೆಗೆದುಕೊಂಡು ಅವರು ಮುಖ್ಯಮಂತ್ರಿಗಳಾಗಿ ಇನ್ನೂ ಒಳಗೆ ಬರುತ್ತಿದ್ದಂತೆ ನಾವು ಧರಣೆ ಕುಳಿತುಕೊಂಡು ಮೂರ್ನಾಲ್ಕು ದಿವಸ ಅವರನ್ನು ಕಾಡಿಸಬೇಕಾಯಿತು. ಅಂದಿನಿಂದ ಅವರ ಪರಿಚಯ ನನಗೆ ಹೆಚ್ಚಾಯಿತು. ಅವರು ಮುಖ್ಯಮಂತ್ರಿ ಸ್ಥಾನವನ್ನು ಕಳೆದುಕೊಂಡ ಮೇಲೆ ಆಗಾಗ್ಗೆ ಅವರ ಹತ್ತಿರ ಹೋಗಿಬರುವ ಅವಕಾಶ ಸಿಗುತ್ತಿತ್ತು. ಅವರು ಮುಖ್ಯಮಂತ್ರಿ ಸ್ಥಾನವನ್ನು ಕಳೆದುಕೊಂಡಮೇಲೆ ಅವರ ಆರೋಗ್ಯ ಒಂದು ರೀತಿಯಲ್ಲಿ ಕ್ಷೀಣಿಸುತ್ತಾ ಬಂತು. ಆ ಮೂಲಕ ಕೊನೆಯುಸಿರನ್ನು ಎಳೆಯಬೇಕಾಯಿತು ಎಂಬುದು ನಮಗೆಲ್ಲ ಗೊತ್ತಿರುವ ಸಂಗತಿ. ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಸುಬ್ಬರಾಯರು ಒಂದು ವಿಚಾರವನ್ನು ಬರೆದಿದ್ದಾರೆ. ಅದೇನೆಂದರೆ ಇತ್ತೀಚೆಗೆ ವೀರೇಂದ್ರ ಪಾಟೀಲ್‌ರು ರಾಜಕೀಯ ಜೀವನದಿಂದ ನಿವೃತ್ತಿಯಾಗಿದ್ದೇ ಒಳ್ಳೆಯದಾಯಿತು, ಅವರು ನಂಬಿದ್ದ ಮತ್ತು ಅನುಸರಿಸಿಕೊಂಡು ಬಂದಿದ್ದ ರಾಜಕೀಯ ಮತ್ತು ಆಡಳಿತ ಸಂಸ್ಕೃತಿ ಇವತ್ತು ಇಲ್ಲ ಎಂದು. ಇದು ಬಹಳ ಅರ್ಥಗರ್ಭಿತವಾದುದಾಗಿದೆ. ನಾವೆಲ್ಲರೂ ಇದನ್ನು ಗಮನಿಸಬೇಕು. ಅವರು ಮುಖ್ಯಮಂತ್ರಿಗಳಾಗಿದ್ದಾಗ ಹಣಕಾಸು ಸಚಿವರಾಗಿ ಮಾನ್ಯ ರಾಜಶೇಖರ್ ಮೂರ್ತಿಯವರು ಆಡಳಿತ ಮಾಡಿದ್ದನ್ನು ನಾವೆಲ್ಲರೂ ನೋಡಿದ್ದೇವೆ. ಬಹುಶಃ ಆ ಸಮಯದಲ್ಲಿ ಆ ಇಬ್ಬರ ಜೋಡಿ ಹಣಕಾಸಿನ ಪರಿಸ್ಥಿತಿಯ ಸುಧಾರಣೆ ಬಗ್ಗೆ, ನಾಡಿನ ಅಭಿವೃದ್ಧಿ ಕಾರ್ಯಗಳ ಬಗ್ಗೆ ಕೊಟ್ಟಂಥ ಕಳಕಳಿ ನೋಡಿದರೆ ನಾವು ವಿರೋಧ ಪಕ್ಷದಲ್ಲಿ ಇದ್ದರೂ ಸಹ ಆ ಇಬ್ಬರ ಜೋಡಿಯ ಸೇವೆ ಈ ನಾಡಿಗೆ, ನಾಡಿನ ಅಭಿವೃದ್ಧಿ ದೃಷ್ಟಿಯಿಂದ ಇನ್ನೂ ಬೇಕಾಗಿತ್ತು. ಆದರೆ ಅವರು ಮುಖ್ಯಮಂತ್ರಿ ಸ್ಥಾನವನ್ನು ಕಳೆದುಕೊಂಡಿದ್ದರಿಂದ ನಾಡಿಗೆ ದೊಡ್ಡ ಅನ್ಯಾಯವಾಯಿತು ಎನ್ನುವ ಭಾವನೆ ನನಗೆ ಬರುತ್ತಿದೆ. ಅವರು ಮುಖ್ಯಮಂತ್ರಿಗಳಾಗಿದ್ದಾಗ ಅಪರೂಪಕ್ಕೆ ಒಮ್ಮೆ ಶಾಸಕರಾಗಿ ಮೂರನೆ ಮಹಡಿಯಲ್ಲಿರುವ ಅವರ ಕಛೇರಿಗೆ ನಾವು ಹೋಗುತ್ತಿದ್ದೆವು. ಅಲ್ಲಿ ಎಂದೂ ಸಂತೆಯ

ವಾತಾವರಣ ಇರುತ್ತಿರಲಿಲ್ಲ. ರಾಜಕೀಯ ದಳ್ಳಾಳಿಗಳ ಓಡಾಟ ಇರುತ್ತಿರಲಿಲ್ಲ. ಅಲ್ಲಿ ಹೋದರೆ ಜಾತಿ, ಹಣ, ಮತ್ತಾವುದೋ ಒಂದನ್ನು ಹೇಳಿ ವ್ಯವಹಾರವನ್ನು ಕುದುರಿಸಿಕೊಂಡು ಬರಬಹುದು ಎನ್ನತಕ್ಕ ಸ್ಥಿತಿ ಇರಲಿಲ್ಲ. ಇದೊಂದು ಬಹಳ ಅಪರೂಪದ ವಾತಾವರಣವಿತ್ತು ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ. ನಾವೆಲ್ಲ ರಾಜಕೀಯದಲ್ಲಿ ಸೇವೆ ಮಾಡತಕ್ಕವರು, ನಾವುಗಳು ಮಾನ್ಯ ವೀರೇಂದ್ರಪಾಟೀಲ್‌ರು ಹಾಕಿಕೊಟ್ಟ ದಾರಿಯಲ್ಲಿ ಕೆಲಸ ಮಾಡಿದರೆ ಬಹುಶಃ ಅದೇ ಅವರಿಗೆ ಅರ್ಪಿಸುವ ಶ್ರದ್ಧಾಂಜಲಿಯಾಗುತ್ತದೆ. ಇಂದು ವೀರೇಂದ್ರಪಾಟೀಲ್‌ರ ಸ್ಮರಣಾರ್ಥವಾಗಿ ಏನು ಮಾಡಿದರೂ ಸರಿಯೇ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದು ಸತ್ಯವಾದ ಸಂಗತಿ. ಯಾರು ಗಂಧದ ಮರದಂತೆ ತಮ್ಮನ್ನು ತಾವೇ ಸಮಾಜ ಸೇವೆಗೆ ಅರ್ಪಣೆ ಮಾಡಿಕೊಂಡರೋ ಅವರನ್ನು ಇಂದು ಬಹಳ ಬೇಗ ಮರೆಯುತ್ತಿರುವುದರಿಂದ ನಾವು ಈ ಅಧೋಗತಿಗೆ ಮುಟ್ಟಿದ್ದೇವೆ. ಆದರೆ ಈ ನಾಡಿನಲ್ಲಿ ಇಂಥ ಪ್ರಾಮಾಣಿಕವಾಗಿ ಸೇವೆ ಮಾಡಿದಂಥ ರಾಜಕಾರಣಿ ಇದ್ದರು, ಮುಂದಿನ ಪೀಳಿಗೆಗೆ ಮಾರ್ಗದರ್ಶಕರಾಗಿ ಮತ್ತು ದಯನೀಯ ಹೊಲಸು ಇವತ್ತಿನ ರಾಜಕೀಯದಲ್ಲ ಸ್ವಲ್ಪ ನಿಷ್ಠೆಯಿಂದ ಕೆಲಸ ಮಾಡಬೇಕು ಎನ್ನುವವರಿಗೆ, ಯುವಕರಿಗೆ ಪ್ರೇರಣೆ ಕೊಡುವಂಥ ಯಾವುದಾದರೂ ಯೋಜನೆಯನ್ನು ವೀರೇಂದ್ರಪಾಟೀಲ್‌ರ ಹೆಸರಿನಲ್ಲಿ ಮಾಡಿದರೆ ಸಾರ್ಥಕವಾದೀತು. ಅವರ ಆತ್ಮಚರಿತ್ರೆಯನ್ನು ಅವರೇ ಬರೆದಿದ್ದರು, ಅದರ ಅಂತಿಮ ಪುಟ ಉಳಿದಿತ್ತು ಎಂದು ಹೇಳಿದರು. ಅದನ್ನು ಸರ್ಕಾರ ಮುದ್ರಿಸಿ ಎಲ್ಲರಿಗೂ ಹಂಚಿದರೆ ಅವರ ಜೀವನದ ಅನುಭವ ಎಲ್ಲರಿಗೂ ಉಪಯೋಗವಾಗುತ್ತದೆ. 'ಎಲ್ಲರೂ ನಗುವಾಗ ನೀ ಅಳುತಾ ಬಂದೆ' ಎಲ್ಲರೂ ಅಳುವಾಗ ನೀ ನಗುತಾ ಹೋದೆ' ಎಂದು ವೇದಾಂತಿ ಒಂದು ಮಾತನ್ನು ಹೇಳಿದ್ದಾನೆ. ಸಾಮಾನ್ಯ ಜನರಿಗೆ ಇದು ಅನ್ವಯವಾಗದಿದ್ದರೂ ಜನಸೇವೆ ಮಾಡುವವರಿಗೆ ಇದು ಅನ್ವಯವಾಗುತ್ತದೆ. ನಾವು ಹುಟ್ಟಿದಾಗ ಅಳುತ್ತಾ ಬರುತ್ತೇವೆ, ಮನೆಯವರು ಗಂಡಾಯಿತು, ಹೆಣ್ಣಾಯಿತು ಎಂದು ನಗುತ್ತಿರುತ್ತಾರೆ, ನಾವು ಜೀವನದ ಯಾತ್ರೆಯನ್ನು ಮುಗಿಸಿ ನಾಲ್ಕು ಜನರು ನಮ್ಮನ್ನು ಎತ್ತಿಕೊಂಡು ಹೋಗುವಾಗ ಜನರು ಈ ರೀತಿ ವ್ಯಕ್ತಿ ಇದ್ದರು, ಈ ನಾಡಿನ ಅಭಿವೃದ್ಧಿ, ಏಳಿಗೆಗಾಗಿ ಬದುಕಿದ್ದರು ಎಂದು ನೆನಪು ಮಾಡಿಕೊಂಡು ಕಣ್ಣೀರನ್ನು ಹಾಕುತ್ತಾರೆ. ಆ ರೀತಿಯಾದ ಆದರ್ಶ ಜೀವನವನ್ನು ವೀರೇಂದ್ರಪಾಟೀಲ್‌ರು ಹಾಕಿಕೊಟ್ಟಿದ್ದಾರೆ. ಅವರು ಹಾಕಿ ಕೊಟ್ಟಿರುವ ಮಾರ್ಗದಲ್ಲಿ ನಡೆಯುವುದೊಂದೇ ನಮಗೆ ಇರುವ ದಾರಿ. ಅವರ ಅಗಲಿಕೆಯಿಂದ ಅವರ ಕುಟುಂಬಕ್ಕೆ ಆಗಿರುವ ನೋವನ್ನು ತಡೆಯುವ ಶಕ್ತಿ ಭಗವಂತ ಕೊಡಲಿ ಎಂದು ಹಾರೈಸುತ್ತೇನೆ. ಅದೇ ರೀತಿ ಆ ಸದನದ ಸದಸ್ಯರುಗಳಾಗಿದ್ದಂಥ ಶ್ರೀ ಪಿ. ತಿಮ್ಮಯ್ಯನವರು, ಶ್ರೀಮತಿ ಲೀಲಾದೇವಿ ವೆಂಕಟೇಶ್‌ರವರು, ಶ್ರೀ ಹಮೀದ್‌ಷಾ ಹಾಗೂ ಭಾಸ್ಕರ್ ನಾಯ್ಡುರವರುಗಳು ನಿಧನರಾಗಿದ್ದಾರೆ. ಅವರುಗಳೆಲ್ಲರ ಆತ್ಮಕ್ಕೆ ಶಾಂತಿಯನ್ನು ಕೋರಿ ಬಿ.ಜೆ.ಪಿ. ಪರವಾಗಿ ಇವರುಗಳೆಲ್ಲರಿಗೂ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಮಾನ್ಯ ವೀರೇಂದ್ರ ಪಾಟೀಲ್‌ರವರ ಜೊತೆ ನಾವು ಇದ್ದದ್ದೇ ನಮಗೆ ಸೌಭಾಗ್ಯ. ಒಂದು ಕಾಲದಲ್ಲಿ ವೀರೇಂದ್ರಪಾಟೀಲ್‌ರು ಮುಖ್ಯಮಂತ್ರಿಗಳು, ಈ ಕಡೆ ಸಾಹುಕಾರ ಚೆನ್ನಯ್ಯನವರು, ಶಾಂತವೇರಿಗೋಪಾಲಗೌಡರು, ಎಸ್. ಶಿವಪ್ಪನವರು, ಹೆಚ್.ಎಂ. ಚೆನ್ನಬಸಪ್ಪನವರು, ಸಿದ್ದವೀರಪ್ಪನವರು ಈ ರೀತಿ ದೊಡ್ಡ ದೊಡ್ಡ

ದಿಗ್ಗಜಗಳಿದ್ದರು. 1967ರಲ್ಲಿ ನಾನು, ನಂಜೇಗೌಡರು, ಬಂಗಾರಪ್ಪ ಮುಂತಾದವರು ಹೊಸದಾಗಿ ಗೆದ್ದು ಬಂದವರು. ನಾವು ಎಷ್ಟೆಲ್ಲಾ ಗದ್ದಲ ಮಾಡಿದರೂ ನೀವು ಏಕೆ ಮಾಡುತ್ತೀರಿ ಎಂದು ಎಂದೂ ಕೇಳುತ್ತಿರಲಿಲ್ಲ, ಸೌಮ್ಯವಾಗಿ ಅವರುಗಳು ಕುಳಿತಿರುತ್ತಿದ್ದರು. ಆ ರೀತಿ ಗದ್ದಲ ಇಂದು ಇಲ್ಲ. ಸದನದಲ್ಲಿ ಏನೇ ನಡೆದರೂ ಅದರ ತೀರ್ಮಾನಕ್ಕೆ ಅಧ್ಯಕ್ಷರಿಗೆ ಇಲ್ಲವೆ ವಿರೋಧ ಪಕ್ಷದವರಿಗೆ ಬಿಟ್ಟಿರುತ್ತಿದ್ದರು. ಅವರು ಎದ್ದು ಯಾವುದರ ಬಗ್ಗೆಯೂ ಮಾತನಾಡುತ್ತಿರಲಿಲ್ಲ. ಆ ಸಂದರ್ಭದಲ್ಲಿ ಮೂರುಮುಕ್ಕಾಲು ವರ್ಷಗಳ ಕಾಲ ಮುಖ್ಯಮಂತ್ರಿಗಳಾಗಿ ಅಧಿಕಾರವನ್ನು ವಹಿಸಿಕೊಂಡು, ಆ ವಯಸ್ಸಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಒಬ್ಬ ಧೀಮಂತ ಮುಖ್ಯಮಂತ್ರಿ ಎಂದು ಹೆಸರನ್ನು ಪಡೆದರು. ಕೊನೆಯಲ್ಲಿ ರಾಜಕೀಯ ಗೊಂದಲದಿಂದ ರಾಜೀನಾಮೆ ಕೊಡಬೇಕಾದಂಥ ಪರಿಸ್ಥಿತಿ ಬಂತು. ಅವತ್ತು ಸದನ ನಡೆಯುತ್ತಿತ್ತು. ಸದನ ನಡೆಯುವಾಗ ಕಾಂಗ್ರೆಸ್ ಎರಡು ಭಾಗವಾಯಿತು. ಆ ಸಂದರ್ಭದಲ್ಲಿ ಸದನ ನಡೆಯುವಾಗ ತಮಗೆ ಬಹುಮತ ಕಡಿಮೆಯಾಯಿತು ಫಂದು ಬಹುಮತ ಅಂದರೆ 10-15 ಕಡಿಮೆ ಆಗಲಿಲ್ಲ; ಒಂದೋ, ಎರಡೋ ಬಹುಮತ ಕಡಿಮೆಯಾಯಿತು ಎಂದು ಹೇಳಿ ಸದನಕ್ಕೆ ರಾಜೀನಾಮೆಯನ್ನು ಕಳುಹಿಸಿದರು. ನಾನು ಮುಖ್ಯಮಂತ್ರಿಯಾಗಿರುವುದಿಲ್ಲ ಎಂದು ರಾಜೀನಾಮೆಯನ್ನು ಸದನಕ್ಕೆ ಕಳುಹಿಸಿದರು. ಅವತ್ತಿನ ದಿವಸ ಸದನದಲ್ಲಿ ಒಂದು ರೀತಿ ಮೌನ ವಾತಾವರಣ ಉಂಟಾಯಿತು. ಅವರ ರಾಜೀನಾಮೆಯನ್ನು ಯಾರೂ ಸ್ವಾಗತ ಮಾಡಲಿಲ್ಲ, ಸಂತೋಷಪಡಲಿಲ್ಲ. ಮಾನ್ಯ ಸಿದ್ದವೀರಪ್ಪನವರು ಇದ್ದರು, ಚನ್ನಬಸಪ್ಪನವರು ಇದ್ದರು, ನಂಜೇಗೌಡರಿದ್ದರು, ಅದು ಅವತ್ತಿನ ಪರಿಸ್ಥಿತಿ. ಸದನ ತಕ್ಷಣ ಮುಂದೂಡಲ್ಪಟ್ಟಿತು. ಹೊರಗಡೆ ಗೋಪಾಲಗೌಡರು, ನಾವು, ಶಿವಪ್ಪನವರು, ಮೈಸೂರಿನ ಬಿ.ಬಿ. ಗಂಗಾಧರಪ್ಪನವರು ಇದ್ದರು, ಆಮೇಲೆ, ಶ್ರೀಮಾನ್ ಜೆ.ಹೆಚ್. ಪಟೇಲ್‌ರವರ ಮುಖಂಡತ್ವದಲ್ಲಿ ಅವರು ರಾಜೀನಾಮೆಯನ್ನು ಕೊಡಬಾರದೆಂದು ಹೇಳುವುದಕ್ಕೆ ನಾವೆಲ್ಲರೂ ಶ್ರೀ ವೀರೇಂದ್ರಪಾಟೀಲರ ಮನೆಗೆ ಹೋದೆವು. ಆಗ ಅವರು ರಾಜೀನಾಮೆ ಕೊಟ್ಟು ಚಡಪಡಿಸುತ್ತಿರಲಿಲ್ಲ; ಹಾಯಾಗಿ ಹೋಗಿ ಮೇಲುಗಡೆ ಮಲಗಿದ್ದರು. ನಾವು ಹೋಗುವುದಕ್ಕೆ ಮುಂಚೆ ಇಲ್ಲಿ ಶಾಂತವೇರಿ ಗೋಪಾಲಗೌಡರು ಕಾರು ಹತ್ತುವಾಗ ಈ ಸದನದ ಸುತ್ತ, ವಿಧಾನ ಸೌಧದ ಸುತ್ತ ಯಾವ ರೀತಿಯ ವಾತಾವರಣ ಇತ್ತು ಎಂದು ಒಂದು ಮಾತನ್ನು ಹೇಳಿದ ನೆನಪು, ವಾಟಾಳ್‌ರವರೇ ಇದೇನು ಈ ಸ್ಥಳ ಗೋಲಿಬಾರ್ ಆದ ಹಾಗೆ ಕಾಣುತ್ತದಲ್ಲ ಅಂದರು. ಅಂದರೆ, ಗೋಲಿಬಾರ್ ಆದರೆ, ಆ ಸ್ಥಳದ ವಾತಾವರಣ ಎಷ್ಟು ಬಿಕೋ ಎನ್ನಿಸುತ್ತದೆ ಆ ಪರಿಸ್ಥಿತಿ ಮೂಡಿದೆ ಎಂದು ಹೇಳಿದರು. ಸರ್ಕಾರಿ ಅಧಿಕಾರಿಗಳು ಅವರ ಮುಂದೆ ಕಣ್ಣೀರಿಟ್ಟರು. ನಾವೆಲ್ಲ ಹೋಗಿದ್ದಾಗ, ಅವರು ಮಲಗಿದ್ದರು. ಮಲಗಿದ್ದವರನ್ನು ಎಳಿಸಿ ಕೆಳಗೆ ಕರೆದೆವು. ನಾವು ವಿರೋಧ ಪಕ್ಷದಲ್ಲಿ ನಿಮ್ಮ ಬಗ್ಗೆ ಏನೇನು ವಾದ-ವಿವಾದ ಮಾಡಿದರೂ ನೀವು ಮುಖ್ಯಮಂತ್ರಿಯಾಗಿ ಉಳಿಯಬೇಕು, ನಿಮ್ಮ ವಿರುದ್ಧ ನಮಗೆ ಯಾವುದೇ ದ್ವೇಷವಿಲ್ಲ. ನಾವು ನಮ್ಮ ಸಂಪೂರ್ಣ ಬೆಂಬಲ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದೆವು. ಅಷ್ಟು ಹೇಳಿ ಆದ ನಂತರ, ಪಟೇಲರು ನಾವು ಎಲ್ಲಾ ರಾಜಭವನಕ್ಕೆ ಹೋದೆವು. ಆ ಕಾಲದಲ್ಲಿ ಶ್ರೀ ಧರ್ಮವೀರ್ ಅವರು ರಾಜ್ಯಪಾಲರಾಗಿದ್ದರು. ನಾವು ಶ್ರೀ ಧರ್ಮವೀರ್ ಅವರಿಗೆ ಒತ್ತಾಯ ಮಾಡಿ ಹೇಳಿದೆವು. ಆದರೆ, ಅವರು ಯಾವ ಒತ್ತಾಯಕ್ಕೂ ಮಣಿಯದೆ ಮತ್ತೆ ಅಧಿಕಾರಕ್ಕೆ

ಬರಬೇಕೆಂಬ ಆಸೆ-ಆಶೋತ್ತರಗಳನ್ನು ಶಿವತ್ತನ ಪರಿಸ್ಥಿತಿಯಲ್ಲಿ ಇಟ್ಟುಕೊಳ್ಳಲೇ ಇಲ್ಲ. ಅಧಿಕಾರ ಅಷ್ಟೊಂದು ವ್ಯವಸ್ಥಿತವಾಗಿ ಪ್ರಾಮಾಣಿಕತೆಯಿಂದ ಇತ್ತು. ನಾನು ಯಾವುದೇ ಪಿತೂರಿ ಮಾಡಬಾರದು ರಾಜಕಾರಣ ಮಾಡಬಾರದು, ನನಗೆ ಬಹುಮತವಿಲ್ಲ ಅಂದಾಗ, ಅಧಿಕಾರವನ್ನು ಬಿಡಬೇಕು ಎಂದು ಹೇಳಿದಂಥ ಕರ್ನಾಟಕ ರಾಜ್ಯದ ಒಬ್ಬ ಆದರ್ಶ ವ್ಯಕ್ತಿ ಶ್ರೀಮಾನ್ ವೀರೇಂದ್ರ ಪಾಟೀಲ್‌ರು. ಅದಾದ ನಂತರ ಕೊನೆಗೆ ಪರಿಸ್ಥಿತಿ ಬಹಳ ಬಿಗಡಾಯಿಸಿತು. ಅವರು ಆಗುವುದೇ ಇಲ್ಲವೆಂದು ಹೇಳಿದರು. ನಂತರ, ಶ್ರೀ ಗೋಪಾಲಗೌಡರನ್ನು ನಾವು ಮುಖ್ಯಮಂತ್ರಿಯನ್ನಾಗಿ ಮಾಡಬೇಕೆಂದು ಹೊರಟೆವು. ಕೊನೆಗೆ, ಮತ್ತೊಂದು ಸಾರಿ ಎಲ್ಲಾ ಬೆಂಬಲ ಸಿಕ್ಕಿ ಮತ್ತೆ ಮುಖ್ಯಮಂತ್ರಿಯಾಗುತ್ತಾರೆಂಬ ಪರಿಸ್ಥಿತಿ ಬಂದಾಗ, ಶ್ರೀಮಾನ್ ಗೋಪಾಲಗೌಡರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಬಹಳ ಅತ್ಯಂತ ನೋವಿನಿಂದ ರೋಗದಿಂದ ನರಳುತ್ತಿದ್ದರು. ನಾನು ಮುಖ್ಯಮಂತ್ರಿಯಾಗುವುದಿಲ್ಲ ಎನ್ನುವುದನ್ನು ನೀವು ಬರೆದುಕೊಡಬೇಕೆಂದು ಹೇಳಿ ಕಟುವಾಗಿ ತಮ್ಮ ನಾಯಕರನ್ನು ಹೋಗಿ ಭೇಟಿ ಮಾಡಿ ಗೋಪಾಲಗೌಡರನ್ನು ಕೇಳಿದಾಗ, ನಾನು ಮುಖ್ಯಮಂತ್ರಿಗೆ ಅಭ್ಯರ್ಥಿ ಅಲ್ಲ ಎಂದು ಬರೆಸಿಕೊಂಡು ಬಂದು ರಾಜ್ಯಪಾಲರಿಗೆ ತಲುಪಿಸಿದ್ದಾಯಿತು. ಇವು ನೆನಪುಗಳು. ನನಗೆ ಅನ್ನಿಸುತ್ತದೆ. ಅವರಿಗೆ ಸ್ಮಾರಕ ಆಗಬೇಕು, ಬಿಡಬೇಕು ಎನ್ನುವ ಪ್ರಶ್ನೆ ಬೇರೆ. 1989ನೇ ಇಸವಿಯಲ್ಲಿ ಅವರು ಏನು ಈ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರವನ್ನು ವಹಿಸಿಕೊಂಡು, ಆ 11 ತಿಂಗಳ ಆಡಳಿತವನ್ನು ಸ್ಮಾರಕ ಎಂದು ನಾವು ಕರೆಯಬೇಕು. ಆ 11 ತಿಂಗಳ ಆಡಳಿತವನ್ನು ಯಾರೇ ಮಾಡಿದರೂ ಅದನ್ನೇ ಸ್ಮಾರಕ ಎಂದು ಹೇಳಬೇಕು. ಆ ಜೋಡಿ ಅವತ್ತಿನ ಜೋಡಿ ಅಪರದು. ಅವತ್ತಿನ ದಿವಸ ಹಣಕಾಸಿನ ಸಚಿವರು ಶ್ರೀ ರಾಜಶೇಖರಮೂರ್ತಿ ಅವರು ಅವರಿಬ್ಬರ ಜೋಡಿ, ಆ ಸಚಿವ ಸಂಪುಟ, ಯಾವ ಸಚಿವಸಂಪುಟಕ್ಕೂ ತಾವು ಮೇಲ್ಬಿದ್ದು ಮಂತ್ರಿ ಹೀಗೇ ಆಗಬೇಕೆಂದು ಯಾವ ಮಂತ್ರಿಯನ್ನೂ ಮೇಲೆ ಮಾಡಿ ಏನೂ ಮಾತನಾಡಲಿಲ್ಲ. ಇದು ಅತ್ಯಂತ ಒಂದು ಆದರ್ಶವಾದ ಇಡೀ ಕರ್ನಾಟಕ ರಾಜ್ಯದಲ್ಲೇ ಒಂದು ಸುವರ್ಣಯುಗ ಆ 11 ತಿಂಗಳು. ಆ ಸಂದರ್ಭದಲ್ಲಿ ನನ್ನ ಕ್ಷೇತ್ರಕ್ಕೆ ಕಾವೇರಿ ನೀರು ಕೊಡಬೇಕೆಂದು ಹೇಳಿ ಈ ಸದನದಲ್ಲಿ ಹೋರಾಟ ಮಾಡಿ ಒಪ್ಪಿದರು. ಕಾವೇರಿ ನೀರನ್ನು ಕೊಟ್ಟರು. ಆ ಒಂದು ಉದ್ಘಾಟನಾ ಸಮಾರಂಭಕ್ಕೆ ಕರೆದುಕೊಂಡು ಹೋಗಿ ಅತ್ಯಂತ ಅದ್ದೂರಿಯಿಂದ ವೈಭವ ಸಮಾರಂಭವನ್ನು ಮಾಡಿದ್ದಾಯಿತು. ಆ ಸಂದರ್ಭದಲ್ಲಿ ಚಾಮರಾಜನಗರಕ್ಕೆ ವೀರೇಂದ್ರ ಪಾಟೀಲ್‌ರು ಬರಬಾರದೆಂದು ಹೇಳಿ ಇಡೀ ತಾಲ್ಲೂಕಿನ ಕಾಂಗ್ರೆಸ್ಸಿಗರೆಲ್ಲಾ ದೊಡ್ಡ ಧಾಳಿ ಮಾಡಿದರು. ಅವರು ಸರ್ಕಾರಿ ಭವನಕ್ಕೆ ಮೈಸೂರಿಗೆ ಬಂದಾಗ ಎಲ್ಲರಿಗೂ ಹೇಳಿದರು, ನಾನು ಕಾಂಗ್ರೆಸ್ಸಿಗರ ಮುಖ್ಯಮಂತ್ರಿ ಅಲ್ಲ, ಇಡೀ ಕರ್ನಾಟಕ ರಾಜ್ಯದ ಮುಖ್ಯಮಂತ್ರಿ. ಇಲ್ಲಿ ಪಕ್ಷ ತರುವುದಕ್ಕೆ ಆಗುವುದಿಲ್ಲ, ವಾಟಾಳ್ ನಾಗರಾಜ್ ಎಲ್ಲೆಲ್ಲಿ ಕರೆದಿದ್ದಾರೆ ಅಲ್ಲೆಲ್ಲಾ ಬರುತ್ತೇನೆಂದು ಹೇಳಿದರು. ಚಾಮರಾಜ ನಗರಕ್ಕೆ ಬೆಳಿಗ್ಗೆ ಬಂದರು. ಒಂದು ಸುಂದರವಾದ ಭಾಷಣ ಮಾಡಿದರು. ಅಧ್ಯಕ್ಷರೆ, ಆ ಭಾಷಣವನ್ನು ನಾನು ಕ್ಯಾಸೆಟ್ ಮಾಡಿದ್ದೇನೆ, ತಮಗೆ ತೋರಿಸುತ್ತೇನೆ. ನಿಷ್ಕಳಂಕವಾಗಿ ಯಾವುದೇ ಪೂರ್ವಗ್ರಹ ಪೀಡಿತರಾಗದೆ ಆ ಸಭೆಯಲ್ಲಿ ಹೇಳಿದರು. ಕಾಂಗ್ರೆಸಿಗರು ಬಂದು ನನ್ನನ್ನು ಕಾಡಿ ಬರಬೇಡಿ ಎಂದು ಹೇಳಿದರು, ಆದರೂ ನಾನು ಬಂದಿದ್ದೇನೆ, ಈ ಸದನದಲ್ಲಿ ಒಬ್ಬ ಸದಸ್ಯರಾಗಿರತಕ್ಕಂಥವರು ಯಾರೇ ಕರೆದರೂ ಬರಬೇಕಾದುದು ನನ್ನ ಕರ್ತವ್ಯ,

ಕೊನೆಯದಾಗಿ, ಕಾವೇರಿ ನೀರು ಅದರ ಕೀರ್ತಿ ಪಾಟಾಳ್ ನಾಗರಾಜ್‌ಗೆ ಸಲ್ಲಬೇಕು ಎನ್ನತಕ್ಕಂಥ ಮಾತನ್ನು ಎಷ್ಟು ಸಹೃದಯದಿಂದ ಪಕ್ಷ ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೆ ಆ ಒಂದು ಪ್ರೀತಿಯಿಂದ ಆ ಮಾತನ್ನು ಹೇಳಿದರು. ಅದಾದ ನಂತರ ನನ್ನ ಜೊತೆಯಲ್ಲಿ ಅಲ್ಲಿಂದ ಬಿಳಿಗಿರಿರಂಗನ ಬೆಟ್ಟಕ್ಕೆ ಬಂದರು. ನಾವು, ಅವರು ಮತ್ತು ನರಸಿಂಹಮೂರ್ತಿ ಹಾಗೂ ಶ್ರೀನಿವಾಸ್ ಪ್ರಸಾದ್‌ರವರು ಇದ್ದರು. ದಾರಿಯಲ್ಲಿ ಹೋಗುವಾಗ ಅವರು ಮುಂದಿನ ಖರ್ಚಿಯಲ್ಲೇ ಕುಳಿತಿದ್ದರು. ಅಷ್ಟೊತ್ತಿಗಾಗಲೇ ಅವರನ್ನು ಅಧಿಕಾರದಿಂದ ಕೆಳಗಿಳಿಸುತ್ತೇವೆ ಎನ್ನುವ ಸುದ್ದಿಗಳು ಹುಟ್ಟಿದ್ದವು. ಸಾರ್, ತಮ್ಮನ್ನೇನೋ ಕೆಳಗಿಳಿಸುತ್ತಾರೆಂದು ಹೇಳಿ ಭಾರಿ ಭಾರಿ ಉದ್ಯಮಿಗಳು ಪ್ರಯತ್ನಪಡುತ್ತಿದ್ದಾರೆ ಅಂದಾಗ, ಅವರು, ಹೌದು ನಿಜ, ಪ್ರಯತ್ನಪಡುತ್ತಿದ್ದಾರೆ, ಆಯಿತು ಇಳಿಸಿಕೊಳ್ಳಲಿ, ನಾನೇನು ಮಾಡುವುದಕ್ಕಾಗುತ್ತದೆ, ಯಾವತ್ತು ಇಳಿಸುತ್ತಾರೋ ಅವತ್ತು ನಾನು ಹೊರಗೆ ಹೋಗುತ್ತೇನೆ ಎನ್ನುವ ಮಾತನ್ನು ಬಿಳಿಗಿರಿರಂಗನ ಬೆಟ್ಟಕ್ಕೆ ಹೋಗುವ ದಾರಿಯಲ್ಲಿ ಹೇಳಿದರು. ಅವರಿಗೆ ಪಾರ್ಶ್ವವಾಯು ಏಕೆ ಬಂತು, ಹೇಗೆ ಬಂತು ಎನ್ನುವುದಕ್ಕೆ ನಮ್ಮಲ್ಲಿ ಯಾವ ನಿದರ್ಶನಗಳೂ ಇಲ್ಲ. ಪರಿಶುದ್ಧವಾದಂಥ ಜೀವನ, ಪ್ರಾಮಾಣಿಕವಾದಂಥ ಜೀವನ ನಡೆಸುತ್ತಿದ್ದರು ಮತ್ತು ಆಹಾರದಲ್ಲಿ ಎಲ್ಲ ಪ್ರತಿಯೊಂದರಲ್ಲೂ ಅವರು ಕಟ್ಟುನಿಟ್ಟಾಗಿದ್ದರು. ಆದರೂ, ಪಾರ್ಶ್ವವಾಯು ಬಂತು. ನಾನು ಅನೇಕ ಬಾರಿ ತಮ್ಮ ಜೊತೆಯಲ್ಲಿ ಅವರನ್ನು ಭೇಟಿ ಮಾಡಿದ್ದೇನೆ. ಮಾನ್ಯ ನಂಜೇಗೌಡರ ಜೊತೆಯಲ್ಲೂ ಹೋಗಿದ್ದೇನೆ. ನಾನಂತೂ 2-3 ತಿಂಗಳಿಗೆ ಒಂದು ಸಾರಿಯಾದರೂ ಅವರ ಮನೆಗೆ ಹೋಗುತ್ತಿದ್ದೆ. ಕೊನೆಯ ಸಾರಿ ಹೋದಾಗ, ಅಂದರೆ, ಈಗ್ಗೆ 2-3 ತಿಂಗಳ ಹಿಂದೆ ಭೇಟಿ ಮಾಡಿದಾಗ, ಈ ವ್ಯವಸ್ಥೆಯಲ್ಲ ನಾನು ಬದುಕಿರಬಾರದು ಅಂದರು. ನಮ್ಮ ಶತ್ರುಗಳಿಗೆ ಕೂಡ ಈ ಕಾಯಿಲೆ ಬರಬಾರದು ಎನ್ನುವಂಥ ಮಾತನ್ನು ಅವರು ಹೇಳಿದರು. ಏನು ಈ ಪರಿಸ್ಥಿತಿಯಲ್ಲಿದ್ದಾರಲ್ಲ ಎಂದು ನನಗೆ ನೋವಾಯಿತು. ಪಾರ್ಶ್ವವಾಯು ಹೇಗಾಯಿತು, ಅಧಿಕಾರವನ್ನು ಏಕೆ ಬಿಟ್ಟರು ಅದು ಈಗ ಅಪ್ರಸ್ತುತ. ಅದರ ಬಗ್ಗೆ ನಾನು ಮಾತನಾಡುವ ಗೋಜಿಗೆ ಹೋಗುವುದಿಲ್ಲ. ನಮ್ಮ ಅಧ್ಯಕ್ಷರನ್ನು ಕರೆದುಕೊಂಡು ಹೋದಾಗ, ಅಧ್ಯಕ್ಷರನ್ನು ಕರೆದು ನೀವು ಚಿಕ್ಕವಯಸ್ಸಿನಲ್ಲೇ ಅಧ್ಯಕ್ಷರಾಗಿ ಈ ಸದನವನ್ನು ಚೆನ್ನಾಗಿ ನಡೆಸುತ್ತಿದ್ದೀರಿ ಎಂದು ಹೇಳಿ ಬೆನ್ನು ತಟ್ಟಿ ಮಾತನಾಡಿಸಿದರು. ಆದಾದ ನಂತರ, ನಿಜಲಿಂಗಪ್ಪನವರ ಹತ್ತಿರ ಹೋದೆವು. ಅವರಿಬ್ಬರು ಅವರಿಗೆ ಆಶೀರ್ವಾದ ಮಾಡಿದರು. ಇದು ನನ್ನ ಕಣ್ಣೆದುರಿಗೆ ನಡೆದಂಥ ಚಿತ್ರ. ಬಹಳ ಚೆನ್ನಾಗಿ ಮಾಡುತ್ತಿದ್ದೀರಿ, ನಿಮ್ಮ ಹೇಳಿಕೆಗಳು, ಆದೇಶಗಳು ಇವೆಲ್ಲ ಚೆನ್ನಾಗಿವೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದರು. ಪಾರ್ಶ್ವವಾಯು ಆದಮೇಲೆ ಕೊನೆಯ ದರ್ಶನ ನಮ್ಮ ಪಟೇಲರದ್ದು ಎಂದು ಕಾಣುತ್ತದೆ. ಸುಮಾರು 15 ದಿವಸಗಳ ಕೊನೆಯ ಅವಸಾನ ಕಾಲದಲ್ಲಿ ಅವರ ಭೇಟಿ. ಅವರು ಬೆಳಗಾವಿ ಬಗ್ಗೆ ತೆಗೆದುಕೊಂಡಂಥ ನಿರ್ಧಾರ ಚಿರಸ್ಮರಣೀಯ. ಈ ಸದನದ ಎಲ್ಲಾ ಸದಸ್ಯರ ನಿಯೋಗವನ್ನು ಕಳುಹಿಸಿದರು. ಈ ಸದನದ ಮತ್ತು ವಿಧಾನ ಪರಿಷತ್ತಿನ ಎಲ್ಲಾ ಸದಸ್ಯರ 25 ಜನರಂತೆ ಒಂದೊಂದು ನಿಯೋಗ. ಮೊದಲನೇ ನಿಯೋಗದಲ್ಲಿ ನಾವು ಮತ್ತು ಎಸ್. ಶಿವಪ್ಪನವರ ಅಧ್ಯಕ್ಷತೆಯಲ್ಲಿ ಹೋದೆವು. ಆಗ ದೆಹಲಿಯಲ್ಲಿ ಶ್ರೀ ಜೆ.ಎಚ್. ಪಟೇಲ್‌ರವರು ಲೋಕಸಭಾ ಸದಸ್ಯರಾಗಿದ್ದರು. ನಾವೆಲ್ಲ ಹೋಗಿದ್ದೆವು. ಜಿ.ವಿ. ಹಳ್ಳಿಕೇರಿ ಅಂತಹ ದೊಡ್ಡ ಹಿರಿಯರೆಲ್ಲರೂ ಅಲ್ಲಿಗೆ ಹೋದಾಗ, ಆ ಪರಿಸ್ಥಿತಿಯನ್ನು ನೋಡಿದಾಗ ಬೆಳಗಾವಿ ಬಗ್ಗೆ

ಒಂದು ಮಾತು ಹೇಳಿದರು. ಬೆಳಗಾವಿಯನ್ನು ಬರ್ಲಿನ್ ಮಾಡುವುದಕ್ಕೆ ಬಿಡುವುದಿಲ್ಲ, ನಾನು ಎಂದೆಂದೂ ಒಂದಿಂಚೂ ಬಿಡುವುದಿಲ್ಲ ಎಂದು ಹೇಳಿದರು, ಎಂಥ ಮಾತು? ಅವತ್ತ ಗಡಿ ಬಗ್ಗೆ, ನೀರಿನ ಬಗ್ಗೆ, ನೆಲ-ಜಲದ ಬಗ್ಗೆ ಅವರಿಗೆ ಇದ್ದಂಥ ಕಾಳಜಿ; ಹಾರಂಗಿ, ಹೇಮಾವತಿಗೆ ಕೇಂದ್ರ ಸರ್ಕಾರ ಅವಕಾಶ ಕೊಡುವುದಿಲ್ಲ ಎಂದು ಹೇಳಿದಾಗ ನಿಮ್ಮ ಹಣ ಬೇಡ, ನಿಮ್ಮ ಅನುಮತಿ ಬೇಡ ಎಂದು ಹೇಳಿದ ಒಬ್ಬ ಧೀಮಂತ, ಒಬ್ಬ ಧೀರ ವ್ಯಕ್ತಿ ಎಂಬುದರ ಬಗ್ಗೆ ಎರಡನೇ ಅಭಿಪ್ರಾಯವಿಲ್ಲ. ಇಂತಹ ಅನೇಕ ಕಾರ್ಯಗಳನ್ನು ಅವರು ಮಾಡಿದ್ದಾರೆ. ನಿನ್ನೆ ಅವರ ನಿಧನ. ನಾವು ಅವರ ಮನೆಯಲ್ಲಿ ಅವರ ಪಾರ್ಥಿವ ಶರೀರವನ್ನು ನೋಡಿದೆವು. ಆಗಲೇ ಆಸ್ಪತ್ರೆಯಲ್ಲಿ ಪಾರ್ಥಿವ ಶರೀರವಾಗಿತ್ತು. ಅವರ ಉಸಿರಾಟವನ್ನು ಆಮ್ಲಜನಕದಿಂದ ಆಡಿಸುತ್ತಿದ್ದರು. ಯಾವ ಗಳಿಗೆಯಲ್ಲಿ ಏನಾಗುತ್ತದೆಂದು ಬೆಳಿಗ್ಗೆಯಿಂದ ಸಂಜೆವರೆಗೆ ಕಾಯುತ್ತಿದ್ದರು. 4.30 ಗಂಟೆಯಲ್ಲಿ ಅವರ ಪರಿಸ್ಥಿತಿ ಚಿಂತಾಜನಕವಾಗಿ ಕೊನೆ ಉಸಿರೆಳೆದರು. ಮನೆಯ ಹತ್ತಿರ ಹೋದಾಗ, ಕಾಡ್ಗಿಚ್ಚಿನಂತೆ ಇಡೀ ರಾಜ್ಯಕ್ಕೆ ಅವರ ಸಾವಿರ ಸುದ್ದಿ ಹಬ್ಬಿತ್ತು. ಈ ಸಂದರ್ಭದಲ್ಲಿ ಒಂದು ಜ್ಞಾಪಕಕ್ಕೆ ಬರುತ್ತದೆ. 'ಊರು ಉಪಕಾರ ಅರಿಯದು, ಹೆಣ ಶೃಂಗಾರ ಅರಿಯದು". ಅವರು ಈ ರಾಜ್ಯದಲ್ಲಿ 4 ವರ್ಷಗಳ ಕಾಲ ಮುಖ್ಯಮಂತ್ರಿಯಾಗಿದ್ದರು. ರಾಜ್ಯದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆ ಸಲ್ಲಿಸಿರತಕ್ಕಂಥಾದ್ದು, ಕರ್ನಾಟಕ್ಕೆ ಅವರು ಮಾಡಿರತಕ್ಕಂಥ ಸೇವೆ ಅಪಾರವಾದುದು. ಆದರೆ ಬಂದಂಥ ಜನರ ಸಂಖ್ಯೆ ಬಹಳ ಕಡಿಮೆ. ಇದನ್ನು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ. ಕನಿಷ್ಟ ಪಕ್ಷ ಒಂದು ಲಕ್ಷ ಜನರಾದರೂ ಬರಬೇಕಾಗಿತ್ತು. ಕರ್ನಾಟಕದ ಜನ ಒಂದು ರೀತಿಯಲ್ಲಿ ನಿರಭಿಮಾನಿಗಳು. ತಮಿಳುನಾಡಿನಲ್ಲಿ ಒಂದು ಕತ್ತೆ ಸತ್ತರೆ ಲಕ್ಷ ಜನ ಸೇರುತ್ತಾರೆ. ಇನ್ನು ವ್ಯಕ್ತಿ ಸತ್ತರಂತೂ ಲಕ್ಷಾಂತರ ಜನರು ಸೇರುತ್ತಾರೆ. ಈ ಮಾತನ್ನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ವೀರೇಂದ್ರ ಪಾಟೀಲ್‌ರು ಅಧಿಕಾರದಲ್ಲಿದ್ದಾಗ ಮೆರೆದವರು ಎಷ್ಟು ಜನರು, ಪಾಟೀಲ್‌ರನ್ನು ಕರೆದು ಕೆಂಪು ಕಾರ್ಪೆಟ್‌ಗಳನ್ನು ಹಾಸಿದವರು ಎಷ್ಟು ಜನರು, ಪಾಟೀಲರಿಗೆ ಹಾರ ತುರಾಯಿ ಹಾಕಿದವರು ಎಷ್ಟು ಜನರು, ಇವರಲ್ಲಿ ಕಾರ್ಮಿಕ ವರ್ಗದವರಿರಬಹುದು, ಶ್ರೀಮಂತವರ್ಗದವರಿರಬಹುದು, ಅಧಿಕಾರಿ ವರ್ಗದವರಿರಬಹುದು, ಮಠಾದಿಪತಿಗಳಿರಬಹುದು, ಭಾರಿ ದೊಡ್ಡ ದೊಡ್ಡ ಜಗದ್ಗುರುಗಳಾಗಿರಬಹುದು, ಇಂಥವರೆಲ್ಲರೂ ಆ ಕಾಲದಲ್ಲಿ ಇವರನ್ನು ಕರೆದು ಪಾದಪೂಜೆ ಮಾಡಿ ನಮ್ಮ ಮಠಕ್ಕೆ ಬರಬೇಕು, ನಮ್ಮ ಮಠಕ್ಕೆ ತಾವು ಬರಬೇಕು ಎಂದು ದುಂಬಾಲು ಬೀಳುತ್ತಿದ್ದರು. ಆದರೆ ಇಂದು ಒಬ್ಬ ಮಠಾಧಿಪತಿಯಾಗಲಿ, ಜಗದ್ಗುರುಗಳಾಗಲಿ ಕೆಳಗೆ ಇಳಿಯಲಿಲ್ಲ. ಒಬ್ಬ ಧರ್ಮಾಧಿಕಾರಿ ಕೆಳಗಿಳಿಯಲಿಲ್ಲ, ಕರ್ನಾಟಕದಲ್ಲಿರುವ ಕಾರ್ಮಿಕ ವರ್ಗದವರಾಗಲಿ, ಒಟ್ಟಾರೆ ಲಕ್ಷಾಂತರ ಜನರು ಸೇರಬೇಕಾಗಿತ್ತು. ಪಾರ್ಥಿವ ಶರೀರ ಕೊಂಡೊಯ್ಯುವಾಗ ಲಕ್ಷಾಂತರ ಜನರು ಸೇರಬೇಕಾಗಿತ್ತು. ನನಗೆ ಗೊತ್ತು ಶವ ಶೃಂಗಾರವನ್ನರಿಯದು, ಅದು ನಿಜ, ಆದರೆ ಹಿಂದೆ ಪಾಟೀಲ್‌ರಿಂದ ಉಪಕಾರ ಪಡೆದವರು ಮತ್ತು ರಾಜಕೀಯವಾಗಿ ಮುಂದೆ ಬಂದವರು ಅಂತಿಮ ಸಂಸ್ಕಾರದ ವೇಳೆಯಲ್ಲಿ ಕೆಲವರು ಇರಲಿಲ್ಲ. ಇದರಿಂದಾಗಿ ನಾನು ಬಹಳ ನೋವಿನಿಂದ ಈ ಮಾತುಗಳನ್ನು ಹೇಳುತ್ತಿದ್ದೇನೆ. ಅತ್ಯಂತ ದುಃಖವಾಗುತ್ತಿದೆ, ಇಂದು ಅವರು ನಿಧನರಾಗಿದ್ದಾರೆ, ನಮ್ಮ ಕರ್ನಾಟಕದ ಜನ ಅಭಿಮಾನ್ಯ ಶೂನ್ಯರಾಗಿದ್ದಾರೆ. ಈ ಹಿಂದೆ ಕೆಂಗಲ್ ಹನುಮಂತಯ್ಯನವರು

ತೀರಿಕೊಂಡಾಗ ಅವರ ಪಾರ್ಥಿವ ಶರೀರವನ್ನು ವಿಧಾನ ಸೌಧಕ್ಕೆ ತಂದಾಗ ಕನಿಷ್ಠ ಪಕ್ಷ 200 ಜನರೂ ಕೂಡ ಇರಲಿಲ್ಲ. ಇವರು ಈ ವಿಧಾನ ಸೌಧವನ್ನು ಕಟ್ಟಿದಂಥ ವ್ಯಕ್ತಿಯಾಗಿದ್ದರು. ಕರ್ನಾಟಕಕ್ಕೆ ಹೋರಾಟ ಮಾಡಿದಂಥ ಗೋಪಾಲಗೌಡರ ಸಂತಾಪ ಸೂಚಕ ಸಭೆ ಅವರನ್ನು ಸುಟ್ಟು ಸ್ಥಳದಲ್ಲಿ ಮಾಡಿದೆವು. ಎಲ್ಲಿ ಸುಟ್ಟಿದೆವೋ, ಎಲ್ಲಿ ಅವರನ್ನು ದಹನ ಮಾಡಿದೆವೋ ಅದೇ ಸ್ಥಳದಲ್ಲಿ ಸಭೆ ನಡೆದದ್ದು. ಈ ಪರಿಸ್ಥಿತಿಯನ್ನು ಗಮನಿಸಿದರೆ ಈ ಕರ್ನಾಟಕ ರಾಜ್ಯದ ಜನತೆಗೆ ಹೃದಯವಿದೆಯೇ? ಬರೇ ಊಟ ತಿಂಡಿಯನ್ನು ಮಾಡುವುದಷ್ಟೇ ಇವರ ಕೆಲಸವೇ ಅಥವಾ ಇವರಿಗೆ ಮನಸ್ಸಿಲ್ಲವೇ? ಅಭಿಮಾನವಿಲ್ಲವೇ ಎಂಬುದನ್ನು ಈ ಕರ್ನಾಟಕ ರಾಜ್ಯದ ಜನತೆಗೆ ಬಹಳ ನೋವಿನಿಂದ ಕೇಳುತ್ತಿದ್ದೇನೆ. ತಮಿಳುನಾಡಿನಲ್ಲಿ ಅಣ್ಣಾ ದೊರೈ ಸತ್ತಾಗ ಅಲ್ಲಿ 25 ಜನರು ಆತ್ಮಾಹುತಿಯನ್ನು ಮಾಡಿಕೊಂಡರು. ತಮಿಳುನಾಡು ಮತ್ತು ಆಂಧ್ರದಲ್ಲಿರತಕ್ಕಂಥ ಅಭಿಮಾನ ನೋಡಿ. ಅದೇ ಕರ್ನಾಟಕದಲ್ಲಿ ನೋಡಿದರೆ ಇಲ್ಲಯ ಜನತೆಗೆ ಅಭಿಮಾನವಿಲ್ಲ, ಇವರು ಅಭಿಮಾನಶೂನ್ಯರಾಗಿದ್ದಾರೆ, ಇನ್ನು ಮುಂದಾದರೂ ಅಭಿಮಾನ ಬರುತ್ತದೆಯೆ ಎಂದು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ. ಇನ್ನು ಸ್ಮಾರಕಗಳ ಬಗ್ಗೆ ಹೇಳುವುದಾದರೆ, ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ವಾದದ ಸರಣಿ ಒಂದು ರೀತಿಯಲ್ಲಿ ಸರಿ ಇದೆಯೆಂದು ಒಪ್ಪುವುದಾದರೂ ಕೂಡ ನಾನು ಕೆಲವು ಹೆಸರುಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಕ್ಯಾಸಂಬಳ್ಳಿ ಚೆಂಗಲ ರಾಯರೆಡ್ಡಿಯವರು ಈ ರಾಜ್ಯದ ಪ್ರಪ್ರಥಮ ಮುಖ್ಯಮಂತ್ರಿಯಾಗಿದ್ದರು. ಅವರ ಸಮಾಧಿ ಎಲ್ಲಿದೆ ಎಂದು ಯಾರಿಗೆ ಗೊತ್ತಿದೆ? ಇವರು ಎಂಥ ಕಾರ್ಯಗಳನ್ನು ಮಾಡಿದ್ದಾರೆಂದು ಯಾರಿಗೆ ಗೊತ್ತಿದೆ, ಅವರ ಇತಿಹಾಸ ಏನು ಎಂಬುದು ಯಾರಿಗೆ ಗೊತ್ತಿದೆ. ಇನ್ನು ಕೆಂಗಲ ಹನುಮಂತಯ್ಯನವರು, ಮೈಸೂರಿಗೆ ಹೋಗುವ ದಾರಿಯ ಪಕ್ಕದಲ್ಲಿ ಒಂದು ಸಣ್ಣ ರಸ್ತೆಯಲ್ಲಿ ಹನುಮಂತಯ್ಯನವರ ಸಮಾಧಿಗೆ ದಾರಿ ಎಂದು ಒಂದು ಕಲ್ಲಿನಲ್ಲಿ ತೋರಿಸಿದ್ದಾರೆ. ಇನ್ನು ಹೆಚ್. ಸಿದ್ಧಯ್ಯ, ಬಿ. ಸಿದ್ದಲಿಂಗಯ್ಯ, ದೇವರಾಜ ಅರಸು, ಹೆಚ್.ಎಸ್. ರುದ್ರಪ್ಪ, ಕಡಿದಾಳ ಮಂಜಪ್ಪ, ಸಾಹುಕಾರ ಚೆನ್ನಯ್ಯ, ಎಸ್.ಆರ್. ಕಂಠಿ, ಕೆ.ಟಿ. ಭಾಷ್ಯಂ, ಶಾಂತವೇರಿ ಗೋಪಾಲಗೌಡರು, ಹೆಚ್.ಸಿ. ದಾಸಪ್ಪ, ಬಿ.ಕೆ. ಪುಟ್ಟರಾಮಯ್ಯ, ಜೆ.ಬಿ. ಮಲ್ಲಾರಾಧ್ಯ, ಹೆಚ್. ಶಿವಪ್ಪ, ನಾಗಪ್ಪ ಆಳ್ವ, ಸಿ.ಎಂ. ಪೂಣಚ್ಚ, ಕೆ.ಮಲ್ಲಪ್ಪ, ಆರ್. ನಾಗನಗೌಡ, ವೈಕುಂಠ ಬಾಳಿಗ, ಕೆ.ಎಸ್. ಪಾಟೀಲ, ಕೆ.ಹೆಚ.ಪಾಟೀಲ ಸಿ. ಸುಬ್ರಹ್ಮಣ್ಯಂ, ಕೆಂಚಪ್ಪ, ಚೆನ್ನಿಗರಾಮಯ್ಯ, ಎನ್. ರಾಚಯ್ಯ, ಬಸವಲಿಂಗಪ್ಪ, ಹೆಚ್.ಎಂ. ಚೆನ್ನಬಸಪ್ಪ, ಸಿದ್ದವೀರಪ್ಪ, ಎಂ.ವಿ. ರಾಮರಾವ್ - ಇವರುಗಳು ಹೆಸರುಗಳು ಎಷ್ಟು ಜನಕ್ಕೆ ಗೊತ್ತಿದೆ. ಈಗಾಗಲೇ ಇವರುಗಳನ್ನು ಮರೆತುಬಿಟ್ಟಿದ್ದಾರೆ, ಇವರುಗಳ ಹೆಸರುಗಳು ಇತಿಹಾಸದಲ್ಲಿ ಹೊರಟುಹೋಗಿದೆ. ಈ ಹೆಸರುಗಳನ್ನು ನಾನು ತಮಗೆ ಏಕೆ ಹೇಳುತ್ತಿದ್ದೇನೆಂದರೆ, ಈ ಸಂಬಂಧ ನಾನು ಎರಡು ವಿಧದ ಸಲಹೆಗಳನ್ನು ತಮಗೆ ಕೊಡಬಯಸುತ್ತೇನೆ. ಮೊದಲನೆಯದಾಗಿ ಈ ಮಹನೀಯರುಗಳಿಗೆ ನೀವು ಸ್ಮಾರಕವನ್ನು ಮಾಡಿಸದೇ ಇದ್ದರೂ ಕೂಡ ಕಡೇ ಪಕ್ಷ ಅವರ ಸಮಾಧಿ ಇಂಥ ಕಡೆ ಇದೆ ಎಂದು ಹೆಸರು ಸೂಚಿಸುವುದನ್ನು ಸರ್ಕಾರದವರು ಮಾಡಬೇಕು. ಎರಡನೆಯದಾಗಿ ಸ್ಮಾರಕ ಭವನವನ್ನು ಮಾಡಿ ಕಡೇ ಪಕ್ಷ 10 ಸಾವಿರ ಪುಟಗಳ ಗ್ರಂಥಗಳನ್ನು ಮೊದಲನೆಯದು, ಎರಡನೆಯದು, ಮೂರನೆಯದು ನಾಲ್ಕನೆಯದು, ಎಂದು ಕಂತಿನ ಮೇಲೆ ಗ್ರಂಥಗಳನ್ನು ಬರೆಸುವ ವ್ಯವಸ್ಥೆಯನ್ನು

ಮಾಡಿ, ಮುಂದಿನ ಪೀಳಿಗೆಗೆ ಕನಿಷ್ಠ ಅವರುಗಳ ಚರಿತ್ರೆಯನ್ನಾದರೂ ಓದಲು ಅನುಕೂಲವಾಗಲಿ. ಆ ಕೆಲಸವನ್ನು ತಾವು ಮಾಡಬೇಕೆಂದು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿಯನ್ನು ಮಾಡುತ್ತಿದ್ದೇನೆ. ಇದಕ್ಕೆ ಬೇಕಾದರೆ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸದನ ಸಮಿತಿಯನ್ನು ರಚನೆ ಮಾಡಲಿ. ಯಾವ ರೀತಿಯಲ್ಲಿ ಸ್ಮಾರಕ ಆಗಬೇಕು ಎಂಬುದರ ಬಗ್ಗೆ ಸ್ಪಷ್ಟವಾದ ನಿರ್ಧಾರವಾಗಬೇಕು. ಏಕೆಂದರೆ ಕೆಂಗಲ್ ಹನುಮಂತಯ್ಯನವರು ಈ ಸದನ ಕಟ್ಟುವಾಗ ಪ್ರತಿಯೊಂದು ಕಲ್ಲು ಹೀಗೆ ಇರಬೇಕು ಎಂದು ಹೇಳಿ ಸದನವನ್ನು ಕಟ್ಟಿದರು. ಆದರೆ ಈ ಸದನದೊಳಗೆ ಬರುವುದಕ್ಕೆ ಆಗಲಿಲ್ಲ. ಒಳ್ಳಾರಿ ರಸ್ತೆಯಲ್ಲಿ ಮನೆಯಿದೆ, ಅಲ್ಲಿ ಅವರಿಗೆ ಬಂದಿರುವ ಬಹುಮಾನಗಳಿವೆ, ಇವುಗಳನ್ನು ನೋಡುವುದಕ್ಕೆ ಒಂದು ಉತ್ತಮವಾದ ವ್ಯವಸ್ಥೆ ಆಗಬೇಕು. ಇಂಥವುಗಳನ್ನು ನಾವು ಮಾಡಬೇಕಾದ ಅವಶ್ಯಕತೆ ಇದೆ. ಈ ಹಿನ್ನೆಲೆಯಲ್ಲಿ ಇವುಗಳನ್ನು ಸರ್ಕಾರ ಮಾಡಬೇಕು. ಇಂಥ ಅನೇಕ ದಿಗ್ಗಜರು ಇದ್ದಾರೆ. ಅದರಲ್ಲಿ ಸಾಹುಕಾರ ಚೆನ್ನಯ್ಯನವರು ಈ ರಾಜ್ಯವನ್ನು ಕಟ್ಟಿದಂಥವರು. ನಂತರ ರಾಜಾ ತಿಮ್ಮಯ್ಯನವರು, ಇವರ ಬಗ್ಗೆ ನಾನು ಮತ್ತು ಖರ್ಗೆಯವರು ಒಂದು ಬಾರಿ ಮಾತನಾಡುತ್ತಾ ರಾಜಾ ತಿಮ್ಮಯ್ಯನವರನ್ನು ಕರೆದು ಸನ್ಮಾನ ಮಾಡಬೇಕು ಎಂದು ಕೊಂಡಿದ್ದೆವು. ರಾಜಾ ತಿಮ್ಮಯ್ಯನವರು ಎಲ್ಲರನ್ನೂ ಗಾಂಭೀರ್ಯ ದಿಂದ ಏಕವಚನದಲ್ಲಿ ಮಾತನಾಡಿಸುತ್ತಿದ್ದರು. ಬಹುವಚನಕ್ಕಿಂತಲೂ ಹೆಚ್ಚಿನ ಗಾಂಭೀರ್ಯ ಮಾತಿನ ಧಾಟಿಯಲ್ಲಿತ್ತು. ಕೆಂಗಲ್ ಹನುಮಂತಯ್ಯನವರನ್ನು ಹೋಗು, ಬಾ ಎಂದು ಕರೆಯುತ್ತಿದ್ದವರು ಇವರೊಬ್ಬರೇ, ಹಿಂದೆ ಕೆಂಗಲ್ ಹನುಮಂತಯ್ಯನವರು ಪಾರ್ಲಿಮೆಂಟ್ ಚುನಾವಣೆಗೆ ನಿಂತಿದ್ದರು. ಅವರಿಗೆ ದುಡ್ಡುಗಿಡ್ಡು ವಸೂಲಿ ಮಾಡಿ ಚುನಾವಣೆಯಲ್ಲಿ ಗೆಲ್ಲುವ ಅಭ್ಯಾಸ ಇಲ್ಲ. ಆಗ ಮಾಜಿ ಮೇಯರ್‌ರವರಾಗಿದ್ದ ಜೆ.ಲಿಂಗಯ್ಯನವರು ಹನುಮಂತಯ್ಯನವರಿಗೆ ಸ್ವಲ್ಪ ಹಣಕಾಸು ಚುನಾವಣೆಗೆ ಬೇಕಾಗುತ್ತದೆ ಏನು ಮಾಡೋಣ ಎಂದರು, ಆಗ ಹನುಮಂತಯ್ಯನವರೆಂದರು, ಇಲ್ಲ, ಇಲ್ಲ, ಎಲ್ಲೂ ನನ್ನ ಹೆಸರನ್ನು ಹೇಳಕೂಡದು, ಹಣವನ್ನು ವಸೂಲಿ ಮಾಡಬಾರದು, ನನ್ನ ಆಡಳಿತ ಚೆನ್ನಾಗಿತ್ತು ಎನ್ನಿಸಿದರೆ ಜನರೇ ಓಟು ಹಾಕುತ್ತಾರೆ ಎಂದರು. ಹೀಗೆಂದಾದಗ ರಾಜಾ ತಿಮ್ಮಯ್ಯನವರು ಏಕವಚನದಲ್ಲಿ ಇವನ ಮುಖ ನೋಡು, ಮುಖಕ್ಕೊಸಿ ಬೆಂಕಿ ಹಾಕ್ತು, ಹಾಕ್ತಾರೆ ಜನ ಓಟು, ಓಟು ಹಾಕ್ತಾರಾ ನಿನಗೆ, ಈಗ ಆ ಕಾಲ ಇಲ್ಲ, ನೀನು ಆ ರೀತಿಯಲ್ಲಿ ಮಾತನಾಡಿದರೆ ಆಗುವುದಿಲ್ಲ. ಎಂದು ಈ ರೀತಿಯಲ್ಲಿ ನೀನು, ತಾನ ಎಂದು ಮಾತನಾಡಿಸುವ ಆ ಸಲಿಗೆ, ಸೌಜನ್ಯ ರಾಜಾ ತಿಮ್ಮಯ್ಯನವರಿಗಿತ್ತು. ಈ ಸದನದಲ್ಲಿ ಶಾಸಕರಾಗಿದ್ದಾಗ ಬೆಂಗಳೂರಿನ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಸತ್ಯಾಗ್ರಹವಾದಾಗ ಆರ್. ಎಮ್. ಪಾಟೀಲರು ಒಳಚರಂಡಿ ಮತ್ತು ನೀರಿನ ಸಚಿವರಾಗಿದ್ದರು. ನನಗೆ ತಿಳಿದಿರುವ ಹಾಗೆ ರಾಜಾ ತಿಮ್ಮಯ್ಯನವರು ಕೆನ್ನೆಗೆ ಮುತ್ತನ್ನು ಕೊಟ್ಟು ರಾಜಾ ಈ ಕೆಲಸವನ್ನು ಮಾಡಿಬಿಡು, ಬೆಂಗಳೂರಿಗೆ ಅನುಕೂಲವಾಗಲಿ ಎಂದರು. ಈ ಧಾಟಿಯಲ್ಲಿ ಯಾರೇ ಸಿಗಲಿ ಹಾಸ್ಯಮಯವಾಗಿ, ರಾಜಕೀಯವಾಗಿ ಒಂದು ಒಳ್ಳೆಯ ವ್ಯಕ್ತಿತ್ವವನ್ನು ಹೊಂದಿದಂಥವರು ಶ್ರೀಮಾನ್ ರಾಜಾ ತಿಮ್ಮಯ್ಯನವರು. ಈ ಸಂದರ್ಭದಲ್ಲಿ ಲೀಲಾವತಿ ಮಾಗಡಿಯವರ ಬಗ್ಗೆ ಹೇಳಬೇಕೆಂದರೆ ಅವರನ್ನು ನಾನು ನೋಡಿದ್ದೇನೆ, ನನ್ನ ಜೊತೆಯಲ್ಲಿ ಇದ್ದಂಥವರು ಅವರು, ಅವರು ಒಳ್ಳೆಯ ವ್ಯಕ್ತಿತ್ವವನ್ನು ಹೊಂದಿ ಚೆನ್ನಾಗಿ ಕೆಲಸವನ್ನು ಮಾಡಿದ್ದಾರೆ. ಹಾಗೆಯೇ ಈ ಸಂದರ್ಭದಲ್ಲಿ , ಹಮೀದ್ ಷಾ ಬಗ್ಗೆ ಹೇಳಬೇಕೆಂದರೆ, ಮೊನ್ನೆ ನಾನು

ಮತ್ತು ನೀವು ಹೋಗಿದ್ದಾಗ ಒಬ್ಬ ಪೋಲಿಸನನ್ನು ಹಮೀದ್ ಷಾ ಮನೆ ಎಲ್ಲಿ ಎಂದು ಕೇಳಿದೆವು, ಅದಕ್ಕೆ ಆತ ನನಗೆ ಗೊತ್ತಿಲ್ಲ ಸ್ವಾಮಿ ಎಂದು ಹೇಳಿದ. ಆಗ ಖರ್ಗೆಯವರೂ ಇದ್ದರು. ನಾವು ಆ ಪೋಲಿಸ್‌ನವರನ್ನು ಹಮೀದ ಷಾ ಮನೆ ಕೇಳಿದ ಜಾಗದಿಂದ ಕೇವಲ 10 ಅಡಿ ದೂರದಲ್ಲಿ ಅವರ ಮನೆ ಇತ್ತು. ಹಮೀದಷಾ ಶಾಸಕರಾಗಿ ಕೆಲಸ ಮಾಡಿದವರು. ನಮ್ಮ ಪೋಲಿಸಿನವರಿಗೆ ಮತ್ತು ಎಂ.ಎಲ್.ಎ. ಯಾರು, ಮಂತ್ರಿಗಳು ಯಾರು ಎಂಬುದೇ ಸರಿಯಾಗಿ ಗೊತ್ತಿಲ್ಲ. ಇವರ ಮನೆ ಹಾಳಾಗ, ಈ ಅಧಿಕಾರಿಗಳಿಗೆ ಸರಿಯಾಗಿ ಇವ್ಯಾವೂ ಗೊತ್ತಿಲ್ಲ. ಏಕೆಂದರೆ, ಆ ಪೋಲಿಸ್‌ಗೆ ಹಮೀದ ಷಾ ಮನೆಯ ವಿಳಾಸವೇ ಗೊತ್ತಿಲ್ಲ. ಮೂರು ವರ್ಷಗಳ ಕಾಲ ಆ ಕ್ಷೇತ್ರದ ಶಾಸಕರಾಗಿ ದುಡಿದ ಹಮೀದ ಷಾ ವಿಚಾರ ಮತ್ತು ಅವರ ವಿಳಾಸ ಗೊತ್ತಿಲ್ಲವೆಂದರೆ ಶಾಸಕರ ಪರಿಸ್ಥಿತಿ ಏನಾಗಿದೆ ಎಂದು ಗೊತ್ತಾಗುತ್ತದೆ, ಅದೇ ಬೇರೆ ಯಾರ್ಯಾದರೂ ದರೋಡೆ ಕೋರರ ಹೆಸರನ್ನು ಕೇಳಿದರೆ ಬೇಕಾದರೆ ಅವರ ವಿಳಾಸವನ್ನು ಹೇಳುತ್ತಾ ಅವರು ಇಲ್ಲಿದ್ದಾರೆ ನೋಡಿ. ಅಥವಾ ಅಲ್ಲಿದ್ದಾರೆ ನೋಡಿ ಎಂದು ವಿಳಾಸವನ್ನು ಹೇಳುತ್ತಾರೆ. ನಾನು ಬಹಳ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಅಂದು ನೀವು ಕೂಡ ಪೋಲಿಸನ ಮಾತಿನಿಂದ ಬಹಳ ನೋವನ್ನು ಪಟ್ಟಿರಿ. ಜೊತೆಗೆ ಶ್ರೀ ಭಾಸ್ಕರನಾಯ್ಡುರವರು ನಿಧನರಾದರೆಂದು ತಿಳಿದ ಬಹಳ ನೋವಾಯಿತು. ಆದುದರಿಂದ ಮೊದಲು ಸರ್ಕಾರ ದಿಗ್ಗಜ ವ್ಯಕ್ತಿಗಳ ಸಮಾಧಿ ಎಲ್ಲಿದೆ ಎನ್ನುವ ಬಗ್ಗೆ ಸೂಚಿಸುವುದನ್ನು ಮಾಡಬೇಕು. ತಾವು ಇಂದು ಏನು ಸಂತಾಪ ಸೂಚಕ ನಿರ್ಣಯವನ್ನು ಮಂಡಿಸಿದ್ದೀರಿ ಅದಕ್ಕೆ ನನ್ನ ಸಂಪೂರ್ಣ ಸಹಮತವನ್ನು, ಬೆಂಬಲವನ್ನು ವ್ಯಕ್ತಪಡಿಸುತ್ತೇನೆ ಮತ್ತು ಆತ್ಮಕ್ಕೆ ಶಾಂತಿಯಾಗಲಿ ಎಂದು ಹೇಳತಕ್ಕಂಥದ್ದು, ಅದರ ಬಗ್ಗೆ ವಾದ ವಿವಾದ ಅದು ಬೇರೆ ಪ್ರಶ್ನೆ. ಏಕೆಂದರೆ, ಜನರಲ್ ಆಗಿ ನಾವು ಅದನ್ನು ಮಾಡಲೇಬೇಕಾಗುತ್ತದೆ,ಆ ವಿಧಿ-ವಿಧಾನಗಳ ಬಗ್ಗೆ ನಾವು ಸಂಪೂರ್ಣವಾಗಿ ಹೇಳಲೇಬೇಕಾಗುತ್ತೆ. ದಿವಂಗತರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡಿ ನನ್ನ ಕೆಲವು ಮಾತುಗಳನ್ನು ಮುಗಿಸುತ್ತೇನೆ.

1.30 ಪಿ.ಎಂ

+ಶ್ರೀ ಜೆ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೇ, ಅಗಲಿದ ಮುಖಂಡರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸತಕ್ಕಂಥ ಒಂದು ನಿರ್ಣಯವನ್ನು ತಾವು ಮಂಡಿಸಿದ್ದೀರಿ. ಅದರಲ್ಲಿ ಪ್ರಮುಖವಾಗಿರತಕ್ಕಂಥಾದ್ದು ಮೊನ್ನೆ ನಿಧನರಾದ ಮಾಜಿ ಮುಖ್ಯಮಂತ್ರಿಗಳಾಗಿದಂತಹ ಶ್ರೀಮಾನ ವೀರೇಂದ್ರಪಾಟೀಲರು. ಅವರ ಬಗ್ಗೆ ಮಾತನಾಡತಕ್ಕಂಥ ಶಕ್ತ ನನಗೆ ಇಲ್ಲ. ಅವರು ಮಹಾನ ಹಿರಿಯ ನಾಯಕರು. ಅವರನ್ನು ಒಂದೇ ಒಂದು ಬಾರಿ ಭೇಟಿಯಾಗಿ ಅವರು ನಮ್ಮ ಜೊತೆ ಮಾತನಾಡತಕ್ಕಂಥ ಒಂದು ಸಂದರ್ಭ ನನಗೆ ಸಿಕ್ಕಿತ್ತು. ಅದು ಯಾವಾಗೆಂದರೆ, 1978ನೇ ಇಸವಿಯಲ್ಲಿ ಚಿಕ್ಕಮಗಳೂರಿನಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ವಿರುದ್ಧ ಚುನಾವಣೆಗೆ ಸ್ಪರ್ಧೆ ಮಾಡಿದಂತಹ ಸಂದರ್ಭದಲ್ಲಿ ಚುನಾವಣೆಯ ಒಂದು ಕಾವು ಬಹಳಷ್ಟು ಎತ್ತರಕ್ಕೆ ಏರಿತ್ತು. ಅದೇ ಸಂದರ್ಭದಲ್ಲಿ ನಾವು ಉಜಿರೆಯಲ್ಲಿ ಚುನಾವಣಾ ಪ್ರಚಾರದ ಅಂಗವಾಗಿ ಒಂದು ನಾಟಕವನ್ನು ಆಡುತ್ತಿದ್ದೆವು. ಅಲ್ಲಿ ಪೋಲಿಸರ ಅನಾಶ್ಯಕವಾದಂತಹ ಪ್ರವೇಶದಿಂದಾಗಿ ಗೋಲಿಬಾರ ಆಗಿ ಕುಮಾರಿ ಗಾಯಿತ್ರಿ ಎನ್ನುವವರು ನಿಧನ

ಹೊಂದಿದ್ದು ಎಲ್ಲರಿಗೂ ಗೊತ್ತಿರತಕ್ಕಂಥ ವಿಷಯ. ಅವರು ಸತ್ತಾಗ ಆ ಹೆಣವನ್ನು ತೆಗೆದು ನಾವು ಮೆರವಣಿಗೆ ಮಾಡುತ್ತಿದ್ದಂತಹ ಸಂದರ್ಭದಲ್ಲಿ ಆಗ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಿದಂತಹ ವೀರೇಂದ್ರಪಾಟೀಲರು ಈ ಸ್ಥಳಕ್ಕೆ ಬಂದರು. ಆಗ ನಾವು ಹೆಣವನ್ನು ಮೆರವಣಿಗೆ ತೆಗೆದುಕೊಂಡು ಹೋಗಬೇಕೆಂದು ಹೊರಟಿದ್ದೆವು. ಆಗ ವರು ಅಡ್ಡ ಬಂದು ನಮಗೆ ಹೇಳಿದರು. ನೀವು ಏಕೆ ಈ ಪರಿಸ್ಥಿತಿ ತಂದುಕೊಂಡಿರಿ, ಇಂತಹ ದಾರುಣವಾದಂತಹ, ಒಂದು ದುರ್ಘಟನೆ ನಡೆದುಹೋಯಿತಲ್ಲ, ಈಗ ನೀವು ಹೆಣವನ್ನು ತೆಗೆದುಕೊಂಡು ಹೋಗಿ ಮೆರವಣಿಗೆ ಮಾಡಿದರೆ ಜನರನ್ನು ನೀವು ಉದ್ರೇಕಪಡಿಸುತ್ತೀರಿ, ಅದು ಅನಾಹುತಕ್ಕೆ ಎಡೆ ಮಾಡಿಕೊಟ್ಟಂತಾಗುತ್ತದೆ ಎಂದು ಹೇಳಿ ಅದನ್ನು ತಡೆಹಿಡಿಯುವುದಕ್ಕೆ ನಮಗೆ ಬುದ್ಧಿವಾದ ಹೇಳಿದರು. ಆದರೆ ನಾವು ಹುಡುಗರು, ಅದನ್ನು ನಿಲ್ಲಿಸುವುದಕ್ಕೆ ತಯಾರು ಇರಲಿಲ್ಲ. ನಾನು ಏಕೆ ಈ ವಿಷಯ ಹೇಳುತ್ತಿದ್ದೇನೆಂದರೆ, ಅಂತಹ ಸಭ್ಯ ರಾಜಕಾರಣಿ ಬಹಳ ವಿರಳ ಮತ್ತು ಬಹಳ ಅಪರೂಪವಾಗಿ ಕಾಣುತ್ತಿದ್ದೇವೆ. ಶ್ರೀಮತಿ ಇಂದಿರಾಗಾಂಧಿ ಅವರ ವಿರುದ್ಧ ಸ್ಪರ್ಧೆ ಮಾಡಿದಂತಹ ಸಂದರ್ಭದಲ್ಲಿ ಅವರ ಎಲ್ಲಾ ಭಾಷಣಗಳನ್ನು ನಾನು ಕೇಳಿದ್ದೇನೆ. ಅವರು ಯಾವತ್ತೂ ಕೂಡ ಅಪ್ಪಿತಪ್ಪಿ ನಾಲಿಗೆ ಜಾರಿ ಏಕವಚನದಲ್ಲಾಗಲಿ ಅಥವಾ ಬೇರೆಬೇರೆ ರೀತಿಯಲ್ಲಾಗಲಿ ಭಾಷಣ ಮಾಡಿದ್ದನ್ನು ಚಿಕ್ಕಮಗಳೂರಿನ ಚುನಾವಣೆಯಲ್ಲಿ ನಾನು ಕೇಳಲಿಲ್ಲ. ಆದರೆ ಅವರ ಪರವಾಗಿ ಪ್ರಚಾರಕ್ಕೆ ಬಂದಂತಹ ಹಲವಾರು ಮುಖಂಡರುಗಳು ಮಾತನಾಡಿದಂತಹ ಧಾಟಿಯನ್ನು ನೋಡಿದ್ದೇನೆ. ಆದರೆ ಅವರ ಧಾಟಿಗೂ ಮಾನ್ಯ ವೀರೇಂದ್ರಪಾಟೀಲರು ಮಾತನಾಡಿದಂತಹ ಧಾಟಿಗೂ ಎಷ್ಟು ವ್ಯತ್ಯಾಸ ಇತ್ತು ಎಂದರೆ ನಾವು ಊಹೆ ಮಾಡುವುದಕ್ಕೂ ಸಾಧ್ಯವಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಅಷ್ಟು ಸಭ್ಯ ರಾಜಕಾರಣಿಯನ್ನು ನಾವು ಎಲ್ಲಾರೂ ನೋಡುವುದಕ್ಕೆ ಸಾಧ್ಯವಿದೆಯೇ ಎಂದು ಹುಡುಕಬೇಕಾದಂತಹ ಪರಿಸ್ಥಿತಿಯಿದೆ. ಅದು ನಾನು ಸ್ವತಃ ನೋಡಿದಂತಹ ಘಟನೆ. ಅವರ ದಕ್ಷತೆ ಮತ್ತು ಪ್ರಾಮಾಣಿಕತೆ ಬಗ್ಗೆ ಯಾರೂ ಕೂಡ ಇದುವರೆಗೂ ಚಕಾರ ಎತ್ತಿದ್ದನ್ನು ನಾನು ಕೇಳಲಿಲ್ಲ. ಅಂತಹ ಒಬ್ಬ ಮುಖ್ಯಮಂತ್ರಿ ಕರ್ನಾಟಕ ರಾಜ್ಯಕ್ಕೆ ಪ್ರಾಮಾಣಿಕವಾದಂತಹ, ದಕ್ಷವಾದಂತಹ ಆಡಳಿತವನ್ನು ಒದಗಿಸಿಕೊಟ್ಟಂತಹ ಮುಖ್ಯಮಂತ್ರಿ ಅಷ್ಟೇ ಅಲ್ಲ, ಕರ್ನಾಟಕ ರಾಜ್ಯ ಇವತ್ತು ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆಯೆಂದರೆ ಅದಕ್ಕೆ ಬಹುಶಃ ಮಾನ್ಯ ವೀರೇಂದ್ರಪಾಟೀಲರು ಹಾಕಿದಂತಹ ಅಡಿಪಾಯ ಏನದೆ ಅದು ಬಹಳ ಮುಖ್ಯ ಎಂದು ಅನಿಸುತ್ತದೆ. ಅದು ನೀರಾವರಿ ಯೋಜನಗಳಾಗಿರಬಹುದು, ವಿದ್ಯುತ ಯೋಜನೆಗಳಾಗಿರ ಬಹುದು, ಅಥವಾ ಬೇರೆ ಯಾವುದೇ ಯೋಜನೆಗಳಾಗಿರಬಹುದು. ಅವರು ಕರ್ನಾಟಕ ರಾಜ್ಯದ ಏಳಿಗೆಗೆ ಅಭಿವೃದ್ಧಿಗೆ ಏನು ಮಾಡಿದರೆ ಅದು ನಿಜವಾಗಿ ಅಭಿವೃದ್ಧಿಯಾಗುತ್ತದೆ ಎನ್ನುವುದನ್ನು ಚಿಂತನೆ ಮಾಡಿದರು. ಆದರೆ ಈಗಿನ ರಾಜಕಾರಣದಲ್ಲಿ ಏನಾಗಿದೆ ಎಂದರೆ ಓಟು ಗಳಿಸುವುದಕ್ಕೆ ಏನು ತಂತ್ರ ಹೂಡಬೇಕು ಎನ್ನುವಂತಹ ಪ್ರಯತ್ನದ ಕಾರ್ಯಕ್ರಮಗಳನ್ನಷ್ಟೇ ಹಾಕತಕ್ಕಂಥಾದ್ದು ಒಂದು ಅಭ್ಯಾಸವಾಗಿದೆ. ಆದರೆ ಅವರು ಈ ರೀತಿ ಆಲೋಚನೆ ಮಾಡಿದ್ದರೆ, ಅಪ್ಪರ ಕೃಷ್ಣಾ, ವರಾಹಿ, ಕಬಿನಿ, ಹಾರಂಗಿ ಇರುತ್ತಿರಲಿಲ್ಲ ಬಹುಶಃ ಹಲವಾರು ವಿದ್ಯುತ ಯೋಜನೆಗಳು ಕೂಡ ಇರುತ್ತಿರಲಿಲ್ಲ. ಎಂದರೆ ಓಟಿಗೋಸ್ಕರ ರಾಜಕಾರಣ ಮಾಡುವುದಿದ್ದರೆ ಕರ್ನಾಟಕದ ಪರಿಸ್ಥಿತಿ ಇವತ್ತು ಬೇರೆಯಾಗುತ್ತಿತ್ತು. ಅಂತಹ ದೂರದೃಷ್ಟಿ ಇರತಕ್ಕಂಥ ಮುತ್ಸದ್ದಿಯಾಗಿದಂತಹ ಅವರು ಅಧಿಕಾರದಲ್ಲಿದ್ದಾಗ ಯಾವುದೇ

ಒಂದು ರಾಜ್ಯ ಪ್ರಗತಿ ಹೊಂದುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುವಂಥಾದ್ದು ನಾವು ಒಪ್ಪತಕ್ಕಂ ವಿಷಯ. ಅಂತಹ ಒಬ್ಬ ಮಾಜಿ ಮುಖ್ಯಮಂತ್ರಿಗೆ ನಾವು ಶ್ರದ್ಧಾಂಜಲಿ ಅರ್ಪಿಸುವುದೆಂದರೆ ಯಾ ಧ್ಯೇಯ, ಉದ್ದೇಶ, ಪ್ರಾಮಾಣಿಕತೆ ಸ್ವಚ್ಛತೆ ಮತ್ತು ಸಭ್ಯ ರಾಜಕಾರಣವನ್ನು ಅವರ ಜೀವನದ ಅಳವಡಿಸಿಕೊಂಡಿದ್ದಾರೋ ಅದನ್ನು ಅಳವಡಿಸಿಕೊಳ್ಳುವುದರ ಮುಖಾಂತರ ಅಷ್ಟೇ ನಾ ಶ್ರದ್ಧಾಂಜಲಿಯನ್ನು ಅರ್ಪಿಸಲಿಕ್ಕೆ ಸಾಧ್ಯವಾದಂತಾಗುತ್ತದೆಂದು ನನ್ನ ಅಭಿಪ್ರಾಯ. ಅದೇ ರೀತಿಯ ಹಲವಾರು ಗಣ್ಯರು ನಿಧನ ಹೊಂದಿದ್ದಾರೆ. ಅವರೆಲ್ಲರ ಬಗ್ಗೆಯೂ ಕೂಡ ಸಂತಾಪವನ್ನು ವ್ಯಕ್ತಪಡಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ತಾವು ತಂದಿರತಕ್ಕಂ ಸಂತಾಪ ಸೂಚನೆಯನ್ನು ಬೆಂಬಲಿಸುತ್ತಾ, ಮಾನ್ಯ ವೀರೇಂದ್ರಪಾಟೀಲ್‌ರು, ಬಿ. ತಿಮ್ಮಯ್ಯನವರು ಲೀಲಾವತಿ ವೆಂಕಟೇಶ್ ಮಾಗಡಿಯವರು, ಹಮೀದ್ ಷಾ ಹಾಗೂ ಭಾಸ್ಕರ್ ನಾಯ್ಡು ಅವರೆಲ್ಲರೂ ಕೂಡ ಈ ಮನೆಯ ಸದಸ್ಯರಾಗಿ ಬಹಳ ದೀರ್ಘಕಾಲ ರಾಜಕಾರಣದಲ್ಲಿ ಇದ್ದು, ಈ ಸಮಾಜದ ಸೇವೆಯನ್ನು ಮಾಡಿರತಕ್ಕಂಥವರು. ಮಾನ್ಯ ವೀರೇಂದ್ರಪಾಟೀಲ್‌ರು 1968-71ರ ಕಾಲದಲ್ಲಿ ನಾವು ವಿದ್ಯಾರ್ಥಿಗಳಾಗಿದ್ದಾಗ ಮುಖ್ಯಮಂತ್ರಿಗಳಾಗಿದ್ದರು. ಆಗ ನಮಗೆ ರಾಜಕಾರಣದಲ್ಲಿ ಪರಿಚಯ ಅಷ್ಟಾಗಿ ಇಲ್ಲದೆ ಇದ್ದರೂ ಕೂಡ ನಮ್ಮ ಭಾಗದಲ್ಲಿ ಎಲ್ಲಾ ಜನ ಮಾತನಾಡುತ್ತಿದ್ದರು. ಮಾನ್ಯ ವೀರೇಂದ್ರ ಪಾಟೀಲ್‌ರು ಒಬ್ಬ ದಕ್ಷ, ಪ್ರಾಮಾಣಿಕ, ಆಡಳಿತಗಾರರು, ಒಬ್ಬ ಒಳ್ಳೆಯ ಮುಖ್ಯಮಂತ್ರಿಗಳು ಎಂದು ಹೇಳುತ್ತಿದ್ದರು. ನಾವು ಅದನ್ನು ನೋಡತಕ್ಕಂಥ ತಿಳಿದುಕೊಳ್ಳತಕ್ಕಂಥ ಅವಕಾಶ ಕೂಡ ಇರಲಿಲ್ಲ. ಅವರು ಮತ್ತೆ ಎರಡನೆ ಬಾರಿ 1989ರಲ್ಲಿ ಮುಖ್ಯಮಂತ್ರಿಗಳಾದಮೇಲೆ ನಾವು ಈ ಮನೆಯ ಸದಸ್ಯರಲ್ಲದೆ ಇದ್ದರೂ ಕೂಡ ನಾವು ನೋಡಿದ್ದು, ಅವರು 11 ತಿಂಗಳ ಕಾಲ ಈ ರಾಜ್ಯದಲ್ಲಿ ಒಳ್ಳೆಯ ಆಡಳಿತವನ್ನು ಕೊಟ್ಟರು, ಹಾಗೂ ಹಣಕಾಸಿನ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದರು. ಈ ರಾಜ್ಯದ ಸರ್ವತೋಮುಖ ಅಭಿವೃದ್ಧಿಯಾಗಬೇಕೆನ್ನುವ ಕಾಳಜಿಯನ್ನು ಇಟ್ಟುಕೊಂಡಿದ್ದರು. ಅದರಲ್ಲೂ ವಿಶೇಷವಾಗಿ ಹೈದರಾಬಾದ ಕರ್ನಾಟಕ ಭಾಗದಲ್ಲಿ ಅಭಿವೃದ್ಧಿಯಾಗಬೇಕು, ಅಲ್ಲಿ ಅಭಿವೃದ್ಧಿ ದೃಷ್ಟಿಯಿಂದ ಅಸಮಾನತೆ ಇದೆ, ಅದಕ್ಕೆ ಹೆಚ್ಚು ಒತ್ತು ಕೊಡಬೇಕು ಎಂದು ಬಹಳ ಪ್ರಯತ್ನ ಪಟ್ಟಿದ್ದರು. ಇವರೆಲ್ಲರೂ ಕೂಡ 1969ಕ್ಕಿಂತ ಮುಂಚಿತವಾದಂತಹ ರಾಜಕಾರಣದಲ್ಲಿ ಇದ್ದಂತಹವರು. ಅವತ್ತಿನ ರಾಜಕೀಯ ಸಂಸ್ಕೃತಿ, ಅವತ್ತಿನ ರಾಜಕೀಯ ಮೌಲ್ಯಗಳು, ಆ ವಾತಾವರಣದಲ್ಲಿ ಬೆಳೆದಂತಹವರು. ಆದಾದಮೇಲೆ ಇತ್ತೀಚೆಗೆ ರಾಜಕೀಯ ಮೌಲ್ಯಗಳು ಕುಸಿಯುತ್ತಿರತಕ್ಕಂಥ ಪರಿಸ್ಥಿತಿಯಲ್ಲಿ ವಾತಾವರಣದಲ್ಲಿ ನಾವು ಬಂದಿರತಕ್ಕಂಥವರು. ಹಾಗಾಗಿ ಇವರು ಸಮಾಜದ ಬಗ್ಗೆ ಕಾಳಜಿ ಇಟ್ಟುಕೊಳ್ಳತಕ್ಕಂಥ, ಪ್ರಾಮಾಣಿಕವಾಗಿ ಜನಸೇವೆಯನ್ನು ಮಾಡಬೇಕು ಎನ್ನುವಂತಹ ಮೌಲ್ಯಗಳನ್ನು ಮೈಗೂಡಿಸಿಕೊಂಡಂತಹ ಒಂದು ಹಿನ್ನೆಲೆಯಿಂದ ಬಂದಂತಹವರು. ಆ ಕಾರಣಕ್ಕಾಗಿ ಇವರ ಆಡಳಿತ ಮತ್ತು ಇವರ ನಡವಳಿಕೆಗಳು, ಇವರು ಬದುಕಿನಲ್ಲಿ ರೂಪಿಸಿಕೊಂಡಂತಹ ಮೌಲ್ಯಗಳು ನಮಗೆ ಆದರ್ಶಗಳಾಗಬೇಕಾಗುತ್ತದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. 1978ನೇ ಇಸವಿಯಲ್ಲಿ ಜನತಾ ಪಾರ್ಟಿಯಲ್ಲಿ, ಅವರ ಪರವಾಗಿ ಓಟು ಕೇಳುವುದಕ್ಕೆ ಹೋದಂತಹವರು

ಬಹಳ ಜನ ಇಲ್ಲಿದ್ದೇವೆ. ನಂತರ ಕಾಂಗ್ರೆಸ್‌ನಲ್ಲಿ ಅವರು ಇಂದಿರಾಗಾಂಧಿ ಜೊತೆಯಲ್ಲಿ ಚುನಾವಣೆಗೆ ನಿಂತು ಮತ್ತೆ ಅವರ ಕ್ಯಾಬಿನೆಟ್‌ನಲ್ಲಿ ಮಂತ್ರಿಗಳಾಗಿದ್ದು ಕೂಡ ಇವತ್ತು ಇತಿಹಾಸವಲ್ಲಿ ಇದೆ. ಅದನ್ನು ಕೂಡ ನಾವು ನೆನಪಿಸಿಕೊಳ್ಳುತ್ತೇವೆ. ಆದರೆ ಏನೇ ಆಗಿರಲಿ, ಇವರು ಒಬ್ಬ ದಕ್ಷ ಆಡಳಿತಗಾರರಾಗಿದ್ದರು, ಪ್ರಾಮಾಣಿಕವಾಗಿ ನಡೆದುಕೊಂಡಿದ್ದರು, ಸಭ್ಯ ಸುಸಂಸ್ಕೃತರು ಎನ್ನುವುದನ್ನು ನಾವೆಲ್ಲರೂ ಹೇಳಬೇಕಾಗುತ್ತದೆ. ಹಾಗೂ ಈ ವಿಚಾರಗಳು ರಾಜಕೀಯದಲ್ಲಿ ಯುವ ಪೀಳಿಗೆಗೆ ಮಾರ್ಗದರ್ಶನವಾಗುತ್ತದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಮಾಜಿ ಸದಸ್ಯರಾದ ರಾಜಾ ತಿಮ್ಮಯ್ಯನವರು ಪರಿಚಯವಿದ್ದರು. ನಮ್ಮ ಮನೆಗೆ ಆಗಾಗ ಬರುತ್ತಿದ್ದರು. ಬೇರೆ ಬೇರೆ ವಿಚಾರಗಳಿಗೂ ಭೇಟಿಯಾಗುತ್ತಿದ್ದರು. ಅವರು ಹಿಂದುಳಿದ ಜನಾಂಗಕ್ಕೆ ಸೇರಿದವರಾಗಿದ್ದರು. ಯಾವಾಗ ಸಿಕ್ಕಿದರೂ ಗಲ್ಲ ಹಿಡಿದುಕೊಂಡು ರಾಜಾ ಎಂದು ಕರೆಯುತ್ತಿದ್ದರು. ಒಂದು ರೀತಿಯ ಒಳ್ಳೆಯತನ ಅವರಲ್ಲಿ ಬಹಳ ಇತ್ತು. ಅವರು ಹಿಂದುಳಿದವರ ಬಗ್ಗೆ ಬಹಳ ಕಳಕಳಿ ಇಟ್ಟುಕೊಂಡಿದ್ದು, ಅವರ ಅಭಿವೃದ್ಧಿಯಾಗಬೇಕು ಎನ್ನುವ ಮಾತನ್ನು ಆಡುತ್ತಿದುದ್ದನ್ನು ನಾನು ನೋಡಿದ್ದೆ. ಅವರು ಇವತ್ತು ನಮ್ಮನ್ನಗಲಿ ಹೋಗಿದ್ದಾರೆ. ಅದರ ಜೊತೆಗೆ ಮಾನ್ಯ ಭಾಸ್ಕರ ನಾಯ್ಡು, ಹಮೀದ್‌ಷಾ, ಲೀಲಾವತಿ ಅವರುಗಳು ನಮ್ಮನಗಲಿ ಹೋಗಿದ್ದಾರೆ. ಮಾನ್ಯ ವೀರೇಂದ್ರ ಪಾಟೀಲ್‌ರು 1952ನೇ ಇಸವಿಯಿಂದ ಶಾಸಕರಾಗಿ 45-46 ವರ್ಷಗಳ ದೀರ್ಘಕಾಲ ರಾಜಕಾರಣವನ್ನು ಮಾಡಿದಂತಹವರು, ಹಾಗೂ ಈ ರಾಜ್ಯಕ್ಕೆ, ಈ ದೇಶಕ್ಕೆ ಸೇವೆಯನ್ನು ಸಲ್ಲಿಸಿರತಕ್ಕಂಥವರು. ಇವರೆಲ್ಲರನ್ನು ಕೂಡ ಇವತ್ತು ನೆನಪಿಸಿಕೊಳ್ಳುತ್ತಾ, ಇವರ ಸಾವಿನಿಂದ ಆಗಿರತಕ್ಕಂಥ ನಷ್ಟ ಮತ್ತು ದುಃಖವನ್ನು ಭರಿಸತಕ್ಕಂಥ ಶಕ್ತಿಯನ್ನು ಇವರುಗಳ ಕುಟುಂಬದವರಿಗೆ ಕೊಡಲೆಂದು ದೇವರನ್ನು ಪ್ರಾರ್ಥಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) : ಈಗಾಗಲೇ ನಮ್ಮ ನಾಯಕರು ಮತ್ತು ವಿರೋಧ ಪಕ್ಷದ ನಾಯಕರು ಮತ್ತು ಅನೇಕ ಹಿರಿಯ ಸದಸ್ಯರು ಶ್ರದ್ಧಾಂಜಲಿ ಕುರಿತು ಮತ್ತು ನಮ್ಮನ್ನಗಲಿ ಹೋದ ಗಣ್ಯರ ಬಗ್ಗೆ ಮಾತನಾಡಿದ್ದಾರೆ. ಅದನ್ನೇ ಪುನರಪಿ ಮಾಡತಕ್ಕಂಥ ಪ್ರಶ್ನೆ ಇಲ್ಲ. ನಮ್ಮ ರಾಜಕೀಯ ಅನುಭವದಲ್ಲಿ ಅವರು ಹೆಚ್ಚು ಸಂಪರ್ಕಕ್ಕೆ ಬಂದಿದ್ದು ಇತ್ತೀಚಿನ ದಿನಗಳಲ್ಲಿ, ಅಂದರೆ ನಾವೆಲ್ಲ 1977ರ ನಂತರ ಬಂದಿರತಕ್ಕಂಥದ್ದು. ಆದರೆ ವ್ಯಕ್ತಿಗತವಾಗಿ ಅವರಲ್ಲಿ ಒಬ್ಬಿಬ್ಬರನ್ನು ಬಿಟ್ಟರೆ ಹೆಚ್ಚು ಗೊತ್ತಿರುವಂಥ ಮಾತದು. ಆದರೆ ಇಲ್ಲಿ ನಮ್ಮ ರಾಜಕೀಯ ವ್ಯವಸ್ಥೆ ಮತ್ತು ಮನುಷ್ಯನ ಸಹಜ ದೌರ್ಬಲ್ಯ ಇವುಗಳ ಕುರಿತಾಗಿಯೂ ಕೂಡ ಈ ಸಂದರ್ಭದಲ್ಲಿ ಯೋಚನೆ ಮಾಡಬೇಕಾಗುತ್ತದೆ. ಒತ್ತಡಗಳಿಗೆ ಸಿಲುಕಿ ಕಾರ್ಯನಿರ್ವಹಿಸುವಂತಹ ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ನಾವು ನಂಬಿದ ನಂಬಿಕೆಗಳಿಗೆ ಅನುಗುಣವಾಗಿ ಒಂದೊಂದು ಸಂದರ್ಭದಲ್ಲಿ ಇರಲಿಕ್ಕೆ ಸಾಧ್ಯವಾಗುತ್ತಿದೆಯೇ? ಒಂದು ಕಡೆಗೆ ಸಂಘಟನಾ ರಹಿತವಾಗಿರುವಂಥ ಒಬ್ಬ ವ್ಯಕ್ತಿ ತಾನು ನಂಬಿದ ನಂಬಿಕೆಗಳನ್ನು ಎಷ್ಟು ದೂರ ತೆಗೆದುಕೊಂಡು ಬಂದು ಹೋರಾಟ ಮಾಡಬಲ್ಲ ಎನ್ನುವಂಥ ಪ್ರಶ್ನೆಗಳು ಕೂಡ ಬರುತ್ತವೆ. ಒಮ್ಮೆ ಅಲ್ಲಿಯ ವಾಸ್ತವದ ಜೊತೆಗೆ ರಾಜಿ ಮಾಡಿಕೊಂಡಿರತಕ್ಕಂಥ ಒಬ್ಬ ವ್ಯಕ್ತಿ ಧೂರ್ತನಾಗಿಲ್ಲದೆ ಇದ್ದರೆ ಅನಿವಾರ್ಯತೆ ಬಂದಾಗ ಹೆಚ್ಚು ಪ್ರಿಯನಾಗತಕ್ಕದ್ದನ್ನು ಕೂಡ ನಾವು ಕಾಣುತ್ತೇವೆ. ಈ ರೀತಿಯಾಗಿ ನಮ್ಮ ಅವ್ಯವಸ್ಥೆಯ ಬಗ್ಗೆ ನಾವು ಹೆಚ್ಚು ಪರಿಶೀಲನೆ ಮಾಡತಕ್ಕಂಥದ್ದು

ಎಷ್ಟರಮಟ್ಟಿಗೆ ಅಪೇಕ್ಷಣೀಯವೋ ಹಾಗೆಯೇ ಅಂತಹ ವಿಚಾರಗಳ ಬಗ್ಗೆ ಮಾನವೀಯವಾದಂತ ಒಂದು ನಿರ್ಣಯ ತೆಗೆದುಕೊಳ್ಳತಕ್ಕಂಥಾದ್ದು ಮತ್ತು ಅದರ ಜೊತೆಗೆ ಸಹಜವಾಗಿರತಕ್ಕಂತ ಪ್ರವೃತ್ತಿಯನ್ನು ಬಳಸಿಕೊಳ್ಳುವುದು ಕೂಡ ಅಗತ್ಯ. ಆ ದೃಷ್ಟಿಯಿಂದ ವೀರೇಂದ್ರ ಪಾಟೀಲ್‌ರವರು ನವ ಹಿಂದಿನ ತಲೆಮಾರಿನವರು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಈ ದಿವಸ ನಮ್ಮ ಸಚಿವ ಸಂಪು ಸಭೆಯಲ್ಲಿ ಸುಮ್ಮನೆ ಆ ಎಲ್ಲಾ ಮುಖ್ಯಮಂತ್ರಿಗಳ ಫೋಟೋಗಳನ್ನು ನೋಡುತ್ತಾ ಇದ್ದೆ. ಅದರಲ್ಲಿ ಏಳ ಜನ ಈಗ ನಮ್ಮೊಡನೆ ಇಲ್ಲ ಮತ್ತು ಉಳಿದ 7 ಜನ ಮಾತ್ರ ನಮ್ಮ ಜೊತೆಗೆ ಇದ್ದಾರೆ. ಅದನ್ನು ಸುಮ್ಮ ಕುತೂಹಲಕ್ಕಾಗಿ ನಾನು ನೋಡತಕ್ಕಂತಹ ಸಂದರ್ಭದಲ್ಲಿ ನಮ್ಮಲ್ಲಿ ಇತಿಹಾಸದಲ್ಲಿ ದಾಖಲೆಯಾ ತಮ್ಮ ಹೆಜ್ಜೆ ಗುರುತುಗಳನ್ನು ಬಿಟ್ಟು ಹೋಗಿದ್ದಾರೆ. ಅದರಲ್ಲಿ ಎಷ್ಟು ಗಟ್ಟಿಮುಟ್ಟಾಗಿ ಆ ಹೆಜ್ಜೆಗಳ ಗುರುತುಗಳು ಉಳಿಯುತ್ತಾವೆ ಅಥವಾ ಅವು ಇರುವುದಿಲ್ಲ ಎನ್ನತಕ್ಕಂಥಾದ್ದು ಬೇರೆ ಬೇರೆ ವಿಷಯ ಮಾನ್ಯ ವಾಟಾಳ್ ನಾಗರಾಜ್ ಅವರು ನಮ್ಮಲ್ಲಿ ಬಹಳ ಜನ ನಿರಭಿಮಾನಿಗಳಿದ್ದಾರೆ, ಆದ್ದರಿಂದ ನಾವ ದೊಡ್ಡ ಸಂಖ್ಯೆಯಲ್ಲಿ ಅವರನ್ನು ಗುರುತಿಸಲಿಕ್ಕೆ ಆಗಿಲ್ಲ ಎನ್ನುವಂಥ ಮಾತು ಹೇಳಿದರು. ಅದು ಮೇಲ್ನೋಟಕ್ಕೆ ಸರಿಯೆನಿಸಿದರೂ ಕೂಡ ಕನ್ನಡ ನಾಡಿನ ಒಂದು ಸಂಸ್ಕೃತಿ ಅಥವಾ ಇಲ್ಲಿ ಜನಗಳ ಒಟ್ಟು ಅಭಿಪ್ರಾಯದಲ್ಲಿ ಒಂದು ಸಂಕುಚಿತ ಅನ್ನುವುದಕ್ಕಿಂತ ಸಂಕೋಚಿತ ಸ್ವಭಾವ, ತಮಿಳು ನಾಡಿನಲ್ಲಿ ತಮ ದುಃಖವನ್ನು ತತ್‌ಕ್ಷಣದಲ್ಲಿ ಪ್ರತಿಕ್ರಿಯೆಯನ್ನು ತೋರಿಸತಕ್ಕಂಥವರಾಗಿರುತ್ತಾರೆ. ಮತ್ತು ಅದು ಒಂದೊಂದು ಸಂದರ್ಭದಲ್ಲಿ ತೀರಾ ಅಸಹ್ಯ ಎನ್ನುವಂಥ ಮಟ್ಟಕ್ಕೂ ಕೂಡ ಹೋಗುವಂಥಾದ್ದು ಇದೆ. ಆದರೆ ಕನ್ನಡ ನಾಡಿನಲ್ಲಿ ಜನ ಅದನ್ನು ಬೇರೆ ದೃಷ್ಟಿಕೋನದಿಂದ ನೋಡುತ್ತಿರುವುದರಿಂದ ವೀರೇಂದ್ರ ಪಾಟೀಲ್‌ರನ್ನು ಎಲ್ಲರೂ ಬಹಳ ಗೌರವ ಮತ್ತು ಪ್ರೀತಿಯಿಂದ ಕಂಡಿರತಕ್ಕಂಥವರು, ಅವರ ಪ್ರೀತಿಯ ಗುರುತಾಗಿ ಇವತ್ತು ಅನೇಕರು ರಾಜಕೀಯದಲ್ಲಿ ಭಿನ್ನಾಭಿಪ್ರಾಯಗಳು ಇದ್ದರೂ ಕೂಡ ಅವರ ಬೇರೆ ಮುಖವನ್ನು ಕುರಿತು ವರ್ಣನೆ ಮಾಡಿದ್ದಾರೆ. ಅಂತಹ ಒಬ್ಬ ಸತ್ಯನಾದಂತಹ ಮತ್ತು ಸಾಧಾರಣ ಕಳಕಳಿ ಇಟ್ಟುಕೊಂಡಿರತಕ್ಕಂಥವರ ಬಗ್ಗೆ ಈ ಸಂದರ್ಭದಲ್ಲಿ ಎರಡು ವಿಚಾರಗಳನ್ನು ನಾವು ಯೋಚನೆ ಮಾಡಬೇಕಾದದ್ದು ಇದೆ. ಒಬ್ಬ ಜನನಾಯಕನಾಗಿ, ಮುಖ್ಯಮಂತ್ರಿಯಂತಹ ಸ್ಥಾನ ಅಥವಾ ಸಚಿವ ಸ್ಥಾನವನ್ನು ಪಡೆದಿರತಕ್ಕಂಥವರು ಎಷ್ಟರಮಟ್ಟಿಗೆ ಅವರು ಒಳ್ಳೆಯ ಆಡಳಿತಗಾರರಾಗಿರಬೇಕು ಮತ್ತು ಒಳ್ಳೆಯ ಆಡಳಿತಗಾರ ಎನ್ನುವಂತಹ ಸಂದರ್ಭಗಳಲ್ಲಿ ಈ ಪ್ರಜಾಪ್ರಭುತ್ವ ಅವರನ್ನು ಎಷ್ಟರಮಟ್ಟಿಗೆ ಸೈರಿಸಬಲ್ಲದು, ಅವರಿಗೆ ಕೊಡಬೇಕಾಗಿರತಕ್ಕಂತಹ ಸ್ವತಂತ್ರ್ಯದ ಬಗ್ಗೆ ನಾವು ಎಷ್ಟರಮಟ್ಟಿಗೆ ಯೋಚನೆ ಮಾಡಿದ್ದೇವೆ ಎನ್ನುವುದನ್ನು ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ. ಈಗ ಅಧ್ಯಕ್ಷೀಯ ಸಂಸತ್ತಿನ ವ್ಯವಸ್ಥೆ ಇರತಕ್ಕಂಥ, ಪ್ರಜಾಪ್ರಭುತ್ವದ ವ್ಯವಸ್ಥೆ ಇರುವಂತಹ ಅಮೆರಿಕಾದ ದೇಶದಲ್ಲಿ ಸಂಪೂರ್ಣವಾಗಿ ಅಧ್ಯಕ್ಷ ಯಾರಿಗೂ ಜವಾಬ್ದಾರಿ ಇಲ್ಲದೇ ಇರತಕ್ಕ ಸಂದರ್ಭದಲ್ಲಿ ಜನತೆಗೆ ನೇರವಾಗಿ ಜವಾಬ್ದಾರಾಗಿರುತ್ತಾರೆ. ಆದರೆ ಇಲ್ಲಿ ಒಬ್ಬ ಮುಖ್ಯಮಂತ್ರಿ ಇವತ್ತಿನ ರಾಜಕೀಯ ಸಂಸ್ಕೃತಿಯಲ್ಲಿ ಎಲ್ಲಾ ವಿಚಾರಗಳನ್ನೂ ಕೂಡ ನಾವು ತುಲನಾತ್ಮಕವಾಗಿ ನೋಡಿದಾಗ, ಮಾ[illegible]ಯರು ಮುಖ್ಯಮಂತ್ರಿಗಳಾಗಿದ್ದಾಗ ಅವತ್ತು ವರ್ಗಾ-ವರ್ಗಿಗಳು ಕೂಡ ಇರುತ್ತ[illegible] ಇರ[illegible]ಲ್ಲ ಎನ್ನುವಂತಹ ಮಾತಿನಿಂದ ನಾವು ಅವರಿಗೆ ಶಹಭಾಸ್‌ಗಿರಿಯನ್ನು ಕೊಟ್ಟರೂ ಕೂಡ ಅವರು ಎಂ.ಎಲ್.ಎ.ಗಳ ಮುಲಾಜಿನಲ್ಲಿ ಇರಬೇಕಾದಂತಹ

ರಾಜಕೀಯ ಪರಿಸ್ಥಿತಿ ಆ ದಿವಸ ಇರಲಿಲ್ಲ. ಅಲ್ಲಿ ಒಬ್ಬ ಮಹಾ ನಾಯಕಿಯ ಆಶೀರ್ವಾದ ಒಂದಿದ್ದರೆ ಅವರು ಎಲ್ಲಾ ಕಠಿಣವಾದ ನಿರ್ಣಯಗಳನ್ನು ತೆಗೆದುಕೊಳ್ಳತಕ್ಕಂಥ ಸಾಧ್ಯತೆಗಳು ಕೂಡ ಇದ್ದವು. ಆದರೆ ಇಲ್ಲಿ ಇರುವಂತಹ ವಾತಾವರಣದಲ್ಲಿ, ನಾವು ಶ್ರದ್ಧಾಂಜಲಿಯನ್ನು ಅರ್ಪಿಸತಕ್ಕಂಥ ಈ ಸಂದರ್ಭದಲ್ಲಿಯೂ ಕೂಡ ನಮ್ಮ ವ್ಯವಸ್ಥೆ ಬಗ್ಗೆಯೂ ಕೂಡ ನಾವು ಯೋಚನೆಯನ್ನು ಮಾಡಿದರೆ, ಒಬ್ಬ ನಾಯಕನಿಗೆ ಇರಲೇಬೇಕಾದಂಥ ಒಂದು ಸ್ವಾತಂತ್ರ್ಯವನ್ನು ಕೊಡತಕ್ಕಂಥ ರೀತಿಯಲ್ಲಿಯೂ ಕೂಡ ನಮ್ಮ ನೀತಿಯನ್ನು ರೂಪಿಸಬೇಕಾದಂಥ ಅಗತ್ಯವಿದೆ. ಚುನಾವಣೆಯ ಜನಪ್ರಿಯತೆಗಾಗಿ ಒಂದು ಓಟನ್ನು ಗಳಿಸಿ ಗೆದ್ದೇ ತಿರಬೇಕೆಂಬ ಕಾರಣಗಳಿಗಾಗಿಯೂ ಕೂಡ ನಾವು ಎಷ್ಟರಮಟ್ಟಿಗೆ ರಾಜೀಯಾಗ ಬೇಕಾಗಿದೆ ಎನ್ನುವಂಥ ಅನಿವಾರ್ಯ ಸ್ಥಿತಿಯನ್ನು ಕಂಡಾಗ ನಮ್ಮಲ್ಲಿ ಇರುವಂತಹ ಅನೇಕ ಮಹಾನ ನಾಯಕರುಗಳು ಕೂಡ ಇತಿಹಾಸದಲ್ಲಿ ದಾಖಲೆ ಆಗಲಾರದಂತೆ ಉಳಿಯುವಂಥ ಪರಿಸ್ಥಿತಿಗಳೂ ಕೂಡ ಇವೆ. ಇಂತಹ ಸಂದರ್ಭದಲ್ಲಿ ಮಾನ್ಯ ವೀರೇಂದ್ರ ಪಾಟೀಲ್‌ರು ಕಾಲಕಾಲಕ್ಕೆ ಪ್ರಚಲಿತವಾದಂಥ ವಿಷಯಗಳ ಬಗ್ಗೆ ಯಾವಾಗಲೂ ಕೂಡ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತಿದ್ದರು. ಅದು ನಿಜವಾಗಿಯೂ ಕೂಡ ಒಬ್ಬ ಸೋತಂಥ, ದೈಹಿಕವಾಗಿ ರೋಗಗ್ರಸ್ತನಾಗಿರತಕ್ಕಂಥ ಒಬ್ಬ ಮನುಷ್ಯ ಪ್ರಚಲಿತವಾಗಿ ತನ್ನ ಮಾನಸಿಕ ಅನುಭವಗಳನ್ನು ಮತ್ತು ಬೌದ್ಧಿಕ ವಿಚಾರಗಳನ್ನು ಅವರು ಯಾವ್ಯಾವ ಸಂದರ್ಭಗಳಲ್ಲಿ ಹೇಳಿರತಕ್ಕಂಥಾದನ್ನು ಕಂಡಾಗ ಜನತೆ ಬಗ್ಗೆ ಅವರು ಇಟ್ಟುಕೊಂಡಿದ್ದಂಥ ಕಳಕಳಿ ಪ್ರತಿಕ್ರಿಯೆ ತೋರಿಸಲೇಬೇಕೆನ್ನುವಂಥಾ ವಾದ ಮತ್ತು ಅದಕ್ಕಾಗಿ ಅವರು ಯಾವಾಗಲೂ ಕೂಡ ರಾಜೀಯಾಗದೇ ಇರತಕ್ಕಂಥಾದ್ದು. ಅವರು ಆಸ್ಪತ್ರೆಗೆ ಸೇರಿದ್ದಾರೆ ಎಂದು ಗೊತ್ತಾದ ತಕ್ಷಣ ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಹೋಗಿದ್ದೆವು. ಅಲ್ಲಿ ಅವರು, ತಮ್ಮ ಕೊನಲುಸಿರು ಎಳೆಯುವಂಥ ಸ್ಥಿತಿಯಲ್ಲಿ ಇದ್ದು ಅವರು ಇನ್ನೇನು ಪ್ರಾಯಶಃ clincially alive ಎನ್ನುತ್ತಾರಲ್ಲ ಆ ತರಹದಲ್ಲಿ ಅವರು ಬದುಕಿದ್ದರೇ ವಿನಾಃ ಅವರು ಆಗಲೇ ಕೊನೆ ಉಸಿರು ಎಣಿಸತಕ್ಕಂಥ ಪರಿಸ್ಥಿತಿ ಅವರಿಗೆ ಇತ್ತು. ಅದಕ್ಕಿಂತ ಪೂರ್ವದಲ್ಲಿ ನಾವೆಲ್ಲಾ ಹೋದಾಗ ಒಬ್ಬ ವ್ಯಕ್ತಿಯ ಎತ್ತರದ ಬಗ್ಗೆ ಮಾನವೀಯ ವಿಚಾರಗಳ ಬಗ್ಗೆ ಯೋಚನೆ ಮಾಡುವುದಾಗಿದ್ದರೆ ಬಹಳ ಜನ ಇಲ್ಲಿರತಕ್ಕಂತಹ ಅನೇಕ ಹಿರಿಯರು ಕಂಡಾಗ ಗೊತ್ತಾಗಿರಬಹುದು, ಅವರು ಸುಮ್ಮನೆ ಆಳುತ್ತಿದ್ದರು. ತೀರಾ ಅಭಿಮಾನಿಗಳಾದವರು ಅವರನ್ನು ಕಂಡಾಗ ತಕ್ಷಣದಲ್ಲಿ ಅವರ ಪ್ರತಿಕ್ರಿಯೆ ಎನ್ನುವುದಾದರೆ ಅವರ ಅವೊತ್ತಿನ ಪರಿಸ್ಥಿತಿ ದೈಹಿಕವಾಗಿರತಕ್ಕಂಥ ನೋವಿಗಿಂತಲೂ ಹೆಚ್ಚಾಗಿ ಆಗಿರುವಂತಹ ವ್ಯವಸ್ಥೆ ಬಗ್ಗೆ ಮತ್ತು ಏನಾಗಿದ್ದೇನೆ ಎನ್ನುವಂತಹ ವಿಚಾರಗಳ ಬಗ್ಗೆ ಅದು ಕಂಡಾಗ ಹೆಚ್ಚು ಪ್ರಿಯವಾಗಲಿಕ್ಕೆ ಸಾಧ್ಯತೆ ಇದೆ. ಯಾರೂ ಕೂಡ Super human beings ಆಗಿರಲಿಕ್ಕೆ ಸಾಧ್ಯವಿಲ್ಲ. ಆ ರೀತಿಯಾದಂತಹ ಅವರ ನಡವಳಿಕೆಗಳು ನಮಗೆಲ್ಲರಿಗೂ ಕೂಡ ಬಹಳ ಪ್ರಿಯವಾಗಿದ್ದವು. ಮತ್ತು ಅನೇಕ ಸಂದರ್ಭಗಳಲ್ಲಿ ನಾವು ಅವರ ಜೊತೆಗಿದ್ದಾಗ, ಒಬ್ಬ ಮುಖ್ಯಮಂತ್ರಿ ನಡೆದುಕೊಳ್ಳುವಂತಹ ರೀತಿಯನ್ನು ನಾವು ಅವರಲ್ಲಿ ಕಂಡಿದ್ದವು. ನಮ್ಮಲ್ಲಿ ಯಾವುದಾದರೂ ಕಾರ್ಯಕ್ರಮಕ್ಕೆ ಬಂದಂಥ ಸಂದರ್ಭಗಳು ಇರಬಹುದು ಅಥವಾ ಬೇರೆ ಬೇರಯವರನ್ನು ಹೆಸರು ಹಿಡಿದು ಕರೆಸಿರತಕ್ಕಂಥಾದ್ದು, ಮಾತನಾಡುವುದು ಮತ್ತು ಪಕ್ಷದ ರಾಜಕಾರಣಕ್ಕೆ ಮಾತ್ರ ಸೀಮಿತಗೊಳ್ಳದೇ ಇರತಕ್ಕ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದರು. ಇವೆಲ್ಲವನ್ನೂ ಕಂಡಾಗ ಅವರಿಗೆ ನಿಜವಾಗಿಯೂ ಕೂಡ

ಸ್ವತಂತ್ರವಾದಂಥ ಅಭಿಪ್ರಾಯವನ್ನು ಅಭಿವ್ಯಕ್ತಿಗೊಳಿಸತಕ್ಕಂತಹ ಸಾಮರ್ಥ್ಯ ಕೂಡ ಇತ್ತು, ಅದು ನಿಮಗೆಲ್ಲಾ ಗೊತ್ತಿರಬಹುದು. ಮತ್ತೆ ಅಷ್ಟೇ ಬೇರೆ ಬೇರೆ ಗಣ್ಯರೂ ಸಹ ಇವತ್ತು ಲೀಲಾವತಿ ಮಾಗಡಿ ಅವರು, ಅವತ್ತು ತೆಗೆದುಕೊಂಡಿರತಕ್ಕಂತಹ ನಿರ್ಣಯ ಏನಿತ್ತು, ಸ್ವಾತಂತ್ರ್ಯ ಸಂಗ್ರಾಮದ ಹೋರಾಟದಲ್ಲಿ ಮಹಿಳೆಯರು ಎಷ್ಟು ದೊಡ್ಡವರಾಗಿರುತ್ತಿದ್ದರು. ಮತ್ತು ಅದಕ್ಕಿಂತಲೂ ಹೆಚ್ಚು ನನಗೆ ಏನು ಅನ್ನಿಸುತ್ತದೆ ಎಂದರೆ, ಒಬ್ಬ ನಾಯಕ ಮನುಷ್ಯ ಸಹಜವಾಗಿ ಅವನು ಒಳ್ಳೆಯವನಾಗಿರುತ್ತಾನೆ ಮತ್ತು ಒಳ್ಳೆಯದನ್ನು ಮಾಡಬೇಕು ಎನ್ನುವಂತಹ ಒಂದು ನಿಶ್ಚಿತ ಅಭಿಪ್ರಾಯ ಕೂಡ ಇರುತ್ತದೆ. ಆದರೆ ಒಳ್ಳೆಯತನವನ್ನು ಪ್ರೇರಿಪಿಸುವಂತಹ ಮತ್ತು ಅದಕ್ಕಾಗಿ ಆಂದೋಲನಕ್ಕೆ ಪುಟ ಕೊಡತಕ್ಕಂತಹ ಒಬ್ಬ ಮಹಾನ್ ವ್ಯಕ್ತಿ ನಮ್ಮ ನಾಯಕತ್ವವನ್ನು ತೆಗೆದುಕೊಂಡರೆ ಎಂತೆಂಥ ಜನಗಳು ಕೂಡ ಆ ಸ್ಪರ್ಶದಿಂದ ಅವರು ಪುರುಷ ಮಣಿಗಳಾಗಲಿಕ್ಕೆ ಸಾಧ್ಯತೆ ಇದೆ ಎನ್ನುವುದು ಕಂಡು ಬರುವುದಾಗಿದ್ದರೆ, ಒಂದು ಕಡೆ ಒಂದು ಸೇಯಿಂಗ್ ಇದೆ. When Napolean was alive, every French soldier was a Napolean. ಗಾಂಧೀಜಿಯವರು ಇದ್ದಾಗ, ಹಳ್ಳಿಕೇರಿ ಅಂತವರು ಗಾಂಧೀಜಿಯವರು ಆದನಂತರ ಆಗಿರತಕ್ಕಂಥ ಪರಿವರ್ತನೆ, ಇವುಗಳನ್ನು ಕಂಡಾಗ ಗಾಂಧೀಜಿಯಂತಹ ಒಬ್ಬ ವ್ಯಕ್ತಿ ಇದ್ದಾಗ ಅಂತರ್ ವಿವಾಹ ಆಗಿರಬಹುದು, ವಿಧವಾ ವಿವಾಹಕ್ಕೆ ಸಂಬಂಧಪಟ್ಟಿರತಕ್ಕಂಥಾದ್ದು ಆಗಿರಬಹುದು, ಖಾದಿ ನೇಯುವಂಥ ವಿಚಾರ ಆಗಿರಬಹುದು, ಜೀವನದ ಕಡೆಯವರೆವಿಗೂ ಕೂಡ ಕೆ.ಎಸ್. ಪಾಟೀಲ್‌ರಂತಹವರು, ಲೀಲಾವತಿ ಮಾಗಡಿ ಅಂತವರು ತೋರಿಸಿರತಕ್ಕಂಥ ಸಂಘಟನಾ ಚಾತುರ್ಯ ಮತ್ತು ನಂಬಿದ ನಂಬಿಕೆಗಳು ಏನಿವೆ ಅವು, ಅವೊತ್ತಿನ ಕಾಲದಲ್ಲಿ ಒಬ್ಬ ದೊಡ್ಡ ಮಹಾನ್ ನಾಯಕನ ಒಂದು ಪ್ರೇರಣೆಯಿಂದ ತೆಗೆದುಕೊಂಡಿರತಕ್ಕಂಥ ಒಂದು ದೀಕ್ಷೆ ಎಂದು ಹೇಳಿದರೆ ತಪ್ಪಾಗಲಾರದು. ಅಂತಹ ದೀಕ್ಷೆ ಕೊಡತಕ್ಕಂತಹ ಮತ್ತು ನಮ್ಮನ್ನೆಲ್ಲಾ ಪ್ರೇರೇಪಿಸುವಂತಹ ನಾಯಕತ್ವವನ್ನು ಹೊಂದಿರತಕ್ಕಂಥ ನಾಯಕರನ್ನು ನಾವು ಇವತ್ತು ಕಾಣುತ್ತಾ ಇಲ್ಲ. ಅದಕ್ಕಾಗಿ, ಇತ್ತೀಚಿನ ದಿನಗಳಲ್ಲಿ ಒಂದು ಲೇಖನವನ್ನು ಕೂಡ ಎಲ್.ಸಿ. ಜೈನ್ ಅವರು ಬರೆದರು. Sky without stars ಎಂಬ ಒಂದು ಲೇಖನವನ್ನು ಬರೆದಿದ್ದಾರೆ. ಇವತ್ತು ನಕ್ಷತ್ರಗಳಿಲ್ಲದ ಆಕಾಶದ ನಡುವೆ ನಾವೆಲ್ಲ ಬದುಕುತ್ತಿರುವುದರಿಂದ ನಮಗೆ ಗೊತ್ತು ಗುರಿಗಳು ಇಲ್ಲದೇ ಹೋಗುತ್ತಿದೆ. ಆ ಗೊತ್ತು ಗುರಿಗಳನ್ನು ಪಡೆಯುವಂಥ ವ್ಯವಸ್ಥೆಯಾದರೆ ಯಾರ್‍ಯಾರು ಎಷ್ಟು ದೊಡ್ಡ ಎತ್ತರಕ್ಕೆ ಏರಲಿಕ್ಕೆ ಸಾಧ್ಯತೆ ಇದೆ ಎನ್ನುವಂಥಾದ್ದು ಕೂಡ ಮಾಗಡಿಯವರು, ಕೆ.ಎಸ್. ಪಾಟೀಲರು ಇವರುಗಳ ಜೀವನದಲ್ಲಿ ನಾವೆಲ್ಲಾ ಕಾಣುತ್ತೇವೆ. ಮತ್ತೆ ತಿಮ್ಮಯ್ಯನವರ ಬಗ್ಗೆ ಹೆಚ್ಚು ನಮಗೆ ಗೊತ್ತಿರಲಿಲ್ಲ. ಆದರೆ ನೀವೇ ಅವರನ್ನು ಪರಿಚಯ ಮಾಡಿಕೊಟ್ಟಿದ್ದೀರಿ. ಎಷ್ಟು ಸಲ ಅವರು ನಿಮ್ಮ ಗಲ್ಲವನ್ನು ಸವರಿ ಹೋಗಿದ್ದಾರೋ ನಮಗೆ ಗೊತ್ತಿಲ್ಲ. ಈ ತರಹ ಇರುತ್ತಾರೇನೋ ಎಂದು ನಂಬಿಕೆ ಇರಲಿಲ್ಲ. ಇವರು ಮತ್ತು ರಘುಪತಿಯವರು ಅವರ ಬಗ್ಗೆ ನಮಗೂ ಮತ್ತು ಜಯಪ್ರಕಾಶ್ ಹೆಗ್ಗಡೆಯವರಿಗೆ ವಿಷಯ ಹೇಳದೇ ಇದ್ದಿದ್ದರೆ ನಿಜವಾಗಿಯೂ ಕೂಡ ನಂಬಲಿಕ್ಕೆ ಸಾಧ್ಯವಾಗುತ್ತಾ ಇರಲಿಲ್ಲ. ಆ ರೀತಿ ಇರಲಿಕ್ಕೆ ಸಾಧ್ಯವಿಲ್ಲ ಎನ್ನುತ್ತಿದ್ದೆವು. ಆದರೆ ಅವರ ಪರಿಚಯವನ್ನು ಮಾಡಿಕೊಟ್ಟರು. ಅವರು ಆ ತರಹ ವ್ಯಕ್ತಿ. ಅವರ ಜೊತೆಗೆ ನಮ್ಮ ಜಿಲ್ಲೆಯವರಾದಂಥ ಮಾನ್ಯ ಭಾಸ್ಕರ್ ನಾಯ್ಡು ಅವರು ವೈಯಕ್ತಿಕವಾಗಿ ಮತ್ತು ರಾಜಕೀಯವಾಗಿ ನಾವು ಹತ್ತಿರ ಇದ್ದಂತಹವರೇನೂ

ಅಲ್ಲ. ಆದರೆ ಸಹಜವಾಗಿ ಅವರು ಶಾಸಕರಾಗಿ ಯಾವಾಗಲೂ ಕೂಡ ಬರುತ್ತಲೇ ಇರುತ್ತಿದ್ದರು ಮತ್ತೆ ನಮ್ಮ ಶಾಸಕರ ದಿನಾಚರಣೆ ಸಂದರ್ಭದಲ್ಲಿ ಕೂಡ ಕ್ರಿಕೆಟ್ ಕಾಮೇಟ್ರಿ ಕೂಡ ಮಾಡುತ್ತಿದ್ದರು. ಆಗ ರಾಮಕೃಷ್ಣ ಹೆಗಡೆಯವರು, ಎಸ್.ಆರ್. ಬೊಮ್ಮಾಯಿಯವರು ಪಟೇಲರು, ನಾವು ಇನ್ನೂ ಅಧಿಕಾರದಲ್ಲಿ ಇಲ್ಲದೆ ಇರತಕ್ಕಂತಹ ಸಂದರ್ಭದಲ್ಲಿ, ಬಳ್ಳಾರಿ ಜಿಲ್ಲೆಯ ಕಾರ್ಯಕ್ರಮಗಳಿಗೆ ಅವರು ಬಂದರೆ ಅವರನ್ನು ವೈಯಕ್ತಿಕವಾಗಿ ಕಂಡು ಅವರನ್ನು ಆಹ್ವಾನಿಸುವಂಥಾದ್ದು, ಅತಿಥಿಗಳಾಗಿ ಕರೆದುಕೊಂಡು ಹೋಗುವಂಥಾದ್ದು ಏನಿತ್ತು ಅದು ನಿಜವಾಗಿಯೂ ಕೂಡ ಒಂದು ಒಳ್ಳೆಯ ಸತ್ಸಂಪ್ರಾದಾಯದ ವ್ಯಕ್ತಿ ಆಗಿದ್ದರು. ರಾಜಕೀಯ ಭಿನ್ನಾಭಿಪ್ರಾಯಗಳನ್ನು ಮರೆತು ಅವರು ನಿಲುವುಗಳು ಏನೇ ಆಗಿದ್ದರೂ ಕೂಡ, ಅವರು ರಾಜಕೀಯವಾಗಿ ವಿರೋಧವಾಗಿರತಕ್ಕಂಥ ಕಾರ್ಯರ್ಕಮಗಳಿಗೆ ಬಂದಾಗಲೂ ಕೂಡ ಕರೆದುಕೊಂಡು ಹೋಗತಕ್ಕಂಥ ದೊಡ್ಡ ಸೌಜನ್ಯವನ್ನು ತೋರಿಸತಕ್ಕಂತಹ ವ್ಯಕ್ತಿ ಮತ್ತು ಒಬ್ಬ ಒಳ್ಳೆಯ ಮಾತುಗಾರ ಕೂಡ ಆಗಿದ್ದರು. ಇತ್ತೀಚಿನ ದಿನಗಳಲ್ಲಿ ಅವರಿಗೆ ಮಧುಮೇಹ ರೋಗದಿಂದ ಹೆಚ್ಚು ಕಾಯಿಲೆಯಾಗಿತ್ತು, ಸಕ್ರೀಯವಾಗಿರಲಿಲ್ಲ. ಅಂಥವರೆಲ್ಲರಿಗೂ ಕೂಡ ನಮ್ಮ ಹಿರಿಯರು, ಗೌರವವನ್ನು ಸಲ್ಲಿಸಿದ್ದಾರೆ, ಶ್ರದ್ಧಾಂಜಲಿಯನ್ನು ಸಲ್ಲಿಸಿದ್ದಾರೆ. ನಾನೂ ಕೂಡ ಅದರಲ್ಲಿ ಭಾಗಿಯಾಗುತ್ತಿದ್ದೇನೆ, ಸಹಮತವನ್ನು ವ್ಯಕ್ತಪಡಿಸುತ್ತಿದ್ದೇನೆ ಎಂದು ಹೇಳಿ, ನಮ್ಮ ಸಣ್ಣತನದ ಅರಿವನ್ನು ಅದರ ಮೂಲಕವಾಗಿ ಕಂಡುಕೊಳ್ಳುವ ಪ್ರಯತ್ನ ನಾವು ಮಾಡುತ್ತೇವೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೇಂದ್ರ ಪಾಟೀಲ್‌ರು ಮತ್ತು ಇನ್ನಿತರ ಹಿರಿಯ ಚೇತನಗಳ ಬಗ್ಗೆ ನಾವು ಶ್ರದ್ಧಾಂಜಲಿಯನ್ನು ಅರ್ಪಿಸಲಿಕ್ಕೆ ಇಲ್ಲಿ ನಿಂತಂಥ ಸಂದರ್ಭದಲ್ಲಿ ಅನೇಕ ಹಿರಿಯರು ಈ ಸದನದಲ್ಲಿ ಮಾನ್ಯ ವೀರೇಂದ್ರಪಾಟೀಲರು ಮತ್ತು ಉಳಿದ ಹಿರಿಯ ನಾಯಕರ ವಿಚಾರದಲ್ಲಿ, ಒಂದು ರೀತಿ ಅವರುಗಳು ನಡೆದುಕೊಂಡು ಬಂದಂತಹ ಆದರ್ಶದ ಬಗ್ಗೆ ಬಹಳ ಚೆನ್ನಾಗಿ ಮಾತನಾಡಿದ್ದಾರೆ. ನಾನು ಹೆಚ್ಚು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುವುದಿಲ್ಲ. ಮಾನ್ಯ ವೀರೇಂದ್ರ ಪಾಟೀಲರಿಗೆ ಬಹಳ ನಿಕಟವಾಗಿ ನಾನು ಯಾವಾಗ ಬಂದದ್ದು ಎಂದು ಹೇಳಿದರೆ, 1989ರಲ್ಲಿ ನಮ್ಮ ಕಾಂಗ್ರೆಸ ಪಕ್ಷದ ಶಾಸಕಾಂಗ ಪಕ್ಷದ ನಾಯಕನಾಗಿ ಅವರನ್ನು ಆಯ್ಕೆ ಮಾಡತಕ್ಕಂಥ ಸಂದರ್ಭದಲ್ಲಿ ನಾನು ಅವರ ಹೆಸರನ್ನು ಸೂಚನೆ ಮಾಡಿದೆ. ಅಂದಿನಿಂದ ನಾನು ಅವರ ಮಂತ್ರಿಮಂಡಲದಲ್ಲಿ ಕಾನೂನು ಮಂತ್ರಿಯಾಗಿ, ಯೋಜನಾ ಮಂತ್ರಿಯಾಗಿ ಮತ್ತು ಇನ್ನಿತರ ಕೆಲವು ಖಾತೆಗಳನ್ನು ನಿರ್ವಹಿಸಿದಂಥ ಕೆಲವೇ ಅನುಭವಗಳನ್ನು ನಾನು ಹೇಳಲಿಕ್ಕೆ ಅಪೇಕ್ಷೆ ಪಡುತ್ತಿದ್ದೇನೆ. ಮಾನ್ಯ ವೀರೇಂದ್ರ ಪಾಟೀಲರವರು ಒಬ್ಬ ಅತ್ಯಂತ ಶ್ರೇಷ್ಠ ಮೇಧಾವಿ, ಮುತ್ಸದ್ಧಿ ಮತ್ತು ಬಹಳ ಸೂಕ್ಷ್ಮಗ್ರಾಹಿಯಾಗಿದ್ದರು. ಏಕೆಂದರೆ ನಾವು ಬಹಳ ಹೊತ್ತು ಅವರ ಹತ್ತಿರ ಚರ್ಚೆ ಮಾಡಬೇಕಾದಂಥ ಅವಶ್ಯಕತೆ ಇರಲಿಲ್ಲ, ವಿಷಯವನ್ನು ಸ್ಪಷ್ಟವಾಗಿ ತಿಳಿದುಕೊಂಡು ಗ್ರಹಿಸತಕ್ಕಂಥ ಒಬ್ಬ ಮಿಷನರಿ ಆಗಿದ್ದರು. ಮುಖ್ಯವಾಗಿ ಆಡಳಿತಕ್ಕೆ ಸಂಬಂಧಪಟ್ಟಂಥ ಯಾವುದೇ ಒಂದು ವಿಷಯ ಬಂದರೂ ಕೂಡ ಅದರ ಬಗ್ಗೆ ಸ್ಪಷ್ಟವಾದಂಥ ಮಾಹಿತಿ, ಅಭಿಪ್ರಾಯ, ಪರಿಣಾಮಗಳನ್ನು ತಿಳಿದುಕೊಳ್ಳತಕ್ಕಂಥ ಶಕ್ತಿಯುಳ್ಳಂಥ ಒಬ್ಬ ಶ್ರೇಷ್ಠ ಆಡಳಿತಗಾರರಾಗಿದ್ದರು ಎಂದು ಹೇಳಿದರೆ ಅದನ್ನು ಎಲ್ಲರೂ ಒಪ್ಪಿಕೊಳ್ಳತಕ್ಕ ಮಾತು. ತಮಗೆ ಗೊತ್ತಿರುವ ಹಾಗೆ ಕೊಂಕಣ ರೈಲ್ವೆ ಆಗುವಾಗ, ಈ

ವಿಷಯವನ್ನು ಯಾರೂ ಪ್ರಸ್ತಾಪ ಮಾಡಲಿಲ್ಲ. ಕೊಂಕಣ ರೈಲ್ವೆ ಮಾಡಬೇಕು ಎಂದು ಹೇಳಿದಾಗ ಮುಖ್ಯವಾಗಿ ಆ ಬಗ್ಗೆ ಇನಿಷಿಯೇಟಿವ್ ಬಂದದ್ದೇ ಕರ್ನಾಟಕದಿಂದ. ನನಗೆ ಈಗಲೂ ನೆನಪಿದೆ, ನಮ್ಮ ಕರ್ನಾಟಕ ಭವನದಲ್ಲಿ ಜಾರ್ಜ್ ಫರ್ನಾಂಡೀಸ್‌ರವರನ್ನು ಕರೆಸಿ, ಉಳಿದ ಕೇರಳದ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಗಳನ್ನು ಕರೆಸಿ ಮಾತನಾಡಿದರು. ಅಲ್ಲಿ ನಾನೂ ಕೂಡ ಯೋಜನಾ ಮಂತ್ರಿಯಾಗಿ ಹಾಜರಾಗಿದ್ದೆ. ಆಗ ಈ ಯೋಜನೆ ಕೇಂದ್ರ ಸರ್ಕಾರದಿಂದ ಆಗುವುದಿಲ್ಲ, ರಾಜ್ಯಸರ್ಕಾರಗಳು, ರೈಲ್ವೆ ಮಂತ್ರಿಮಂಡಲ ಇದು ಎರಡೂ ಸೇರಿ ಒಂದು ಸಂಯುಕ್ತ ಕಾರ್ಪೊರೇಷನ್ ಮಾಡಿ ತನ್ಮೂಲಕ ಅನುಷ್ಠಾನ ಮಾಡಬೇಕೆಂದು ಹೇಳಿ ತಕ್ಷಣ ಈ ಬಗ್ಗೆ ಕಾರ್ಯೋನ್ಮುಖರಾಗುವುದಕ್ಕೆ ವೀರೇಂದ್ರ ಪಾಟೀಲ್‌ರು ಕಾರಣರಾದರು. ಇವತ್ತು ಕೊಂಕಣ ರೈಲ್ವೆ ಆಗಿದ್ದರೆ ಆ ಬಗ್ಗೆ ಮಾನ್ಯ ವೀರೇಂದ್ರಪಾಟೀಲ್‌ರ ಪಾತ್ರ ಸಿಂಹಪಾಲು ಎಂದು ಹೇಳಿದರೆ ಅದು ಅತಿಶಯೋಕ್ತಿ ಆಗಲಿಕ್ಕಿಲ್ಲ. ಬಹುಶಃ ಬೇರೆ ಯಾರೇ ಮುಖ್ಯಮಂತ್ರಿಯಾಗಿದ್ದರೂ ಕೂಡ ಅದು ತಕ್ಷಣ ಆಗುತ್ತಾ ಇರಲಿಲ್ಲ. ಆ ವಿಚಾರವನ್ನು ತಕ್ಷಣ ಪಾಟೀಲರು ಗ್ರಹಿಸಿ ನಮ್ಮ ರಾಜ್ಯ ಸರ್ಕಾರದ ಕೊಡುಗೆಯನ್ನು ಕೂಡ ನಿಷ್ಕರ್ಷೆ ಮಾಡಿ ತಕ್ಷಣ ಅದಕ್ಕೆ ಒಂದು ರೂಪರೇಷೆಯನ್ನು ಕೊಟ್ಟಂಥ ದೊಡ್ಡ ಕೆಲಸವನ್ನು ಮಾನ್ಯ ವೀರೇಂದ್ರ ಪಾಟೀಲ್‌ರು ಮಾಡಿದ್ದರು ಎಂದು ಹೇಳಿದರೆ ಬಹುಶಃ ದಕ್ಷಿಣ ಭಾರತದ ಸಂಪೂರ್ಣ ಆರ್ಥಿಕ ಮುನ್ನಡೆಗೆ ಒಂದು ಚಾಲನಾ ಶಕ್ತಿಯಾಗಿ ಈ ಒಂದು ಕೊಂಕಣ ರೈಲ್ವೆ ಆಗಿದೆ ಎಂದು ಹೇಳಿದರೆ ಅದು ಅತಿಶಯೋಕ್ತಿ ಆಗಲಿಕ್ಕಿಲ್ಲ. ಇನ್ನು ಮುಖ್ಯವಾಗಿ ಹೈದರಾಬಾದ್- ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ನ ಬಗ್ಗೆ ಹೇಳುವುದಾದರೆ ಆಗ ಮಾನ್ಯ ರಾಮಕೃಷ್ಣ ಹೆಗಡೆಯವರು ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದರು, ನಾನು ಆ ಯೋಜನಾ ಆಯೋಗದ ಚರ್ಚೆಗೆ ಹೋದಾಗ ಯೋಜನಾ ಆಯೋಗದವರು ನಿಮಗೆ ಈ ಯೋಜನೆಗೆ ಪ್ರತ್ಯೇಕವಾಗಿ 40 ಕೋಟಿ ರೂಪಾಯಿಗಳನ್ನು ಇಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದರು. ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಲಿಗೆ ಒಂದು ಚಾಲನೆಯನ್ನು ಕೊಟ್ಟು ಅದು ಆಗತಕ್ಕಂಥ ಪರಿಸ್ಥಿತಿಗೂ ಕೂಡ ಮಾನ್ಯ ವೀರೇಂದ್ರ ಪಾಟೀಲ್‌ರೇ ಕಾರಣರಾಗಿದ್ದರು. ಅವರಿಗೆ ಒಂದು ಪ್ರಾದೇಶಿಕ ಸಮತೋಲನ ಈ ರಾಜ್ಯದಲ್ಲಿ ಆಗಬೇಕು, ಕರ್ನಾಟಕದ ಏಕೀಕರಣ ಏನು ಆಗಿದೆ, ಆ ಸಮಗ್ರತೆ ಬಹುಶಃ ಭೌಗೋಳಿಕವಾಗಿ ಆದರೆ ಸಾಲದು, ಅದು ಆರ್ಥಿಕವಾಗಿ ಮತ್ತು ಒಂದುರೀತಿಯ ಭಾವೈಕ್ಯತೆಯನ್ನು ಒಳಗೊಂಡಂಥ ಒಂದು ಏಕೀಕರಣ ಆಗಬೇಕೆಂಬ ಸಿದ್ಧಾಂತದಲ್ಲಿ ಸಂಪೂರ್ಣವಾಗಿ ವಿಶ್ವಾಸ ಇಟ್ಟಂಥ ಒಬ್ಬ ಹಿರಿಯ ಮೇಧಾವಿ, ಒಬ್ಬ ಸ್ಟೇಟ್ಸ್‌ಮನ್ ಆಗಿದ್ದರು. ಮುಖ್ಯವಾಗಿ ಹೇಳಬೇಕಾದರೆ, ಗುಲ್ಬರ್ಗಾ ವಿಶ್ವವಿದ್ಯಾಲಯ ಬಹಳ ಮುನ್ನಡೆದಿರಲಿಲ್ಲ ಎನ್ನುವುದು ತಮಗೆ ಗೊತ್ತಿದೆ. ಆ ಸಂದರ್ಭದಲ್ಲಿ 7 ಕೋಟಿ ರೂಪಾಯಿಗಳನ್ನು ಹೆಚ್ಚಕಡಿಬಿಯಲ್ಲಿ ವೀರೇಂದ್ರ ಪಾಟೀಲ್‌ರು ಕೊಟ್ಟರು. ಗುಲ್ಬರ್ಗಾ ವಿಶ್ವವಿದ್ಯಾನಿಲಯ ಇವೊತ್ತು ಅತ್ಯಂತ ಆದರ್ಶ ವಿಶ್ವವಿದ್ಯಾಲಯ ಆಗಿ ನಿಂತಿದ್ದರೆ ಇದಕ್ಕೆ ವೀರೇಂದ್ರ ಪಾಟೀಲ್‌ರು ಕೊಟ್ಟಂಥ ವಿಶೇಷವಾದ ಕೊಡುಗೆಯೇ ಕಾರಣ ಎನ್ನಬಹುದು. ಮಾನ್ಯ ಮುಖ್ಯಮಂತ್ರಿಯವರು ಒಂದು ವಿಚಾರ ಹೇಳಿದರು, ಅದು ಸ್ಮಾರಕದ ವಿಚಾರ. ನೀವು ಒಳ್ಳೆಯ ಸ್ಮಾರಕ ಮಾಡುವುದಿದ್ದರೆ, ಮಾಡುವುದು ಬಿಡುವುದು ತಮ್ಮ ನಿರ್ಧಾರಕ್ಕೆ ಬಿಟ್ಟಿದ್ದು ಅದಕ್ಕೆ ನಾನು ಒತ್ತಾಯ ಮಾಡುತ್ತಿಲ್ಲ. ಮೈಸೂರಿನಲ್ಲಿ

ಕೆ.ಆರ್.ಎಸ್.ನ ನೀರಾವರಿ ಸಂಶೋಧನಾ ಸಂಸ್ಥೆ ಇದೆ, ನೀರಾವರಿಯ ಬಗ್ಗೆ ವಿಶೇಷವಾದ ಕಳಕಳಿಯನ್ನಿಟ್ಟಿದ್ದರು. ಅದು ಕೃಷ್ಣಾ ಜಲಾನಯನ ಇರಬಹುದು ಅಥವಾ ಕಾವೇರಿ ಜಲಾನಯನ ಇರಬಹುದು ಅಥವಾ ಇನ್ನಿತರ ನೀರಾವರಿ ಪ್ರಾಜೆಕ್ಟ್‌ಗಳೇ ಇರಬಹುದು. ಏಕೆಂದರೆ, ಅನೇಕಬಾರಿ ನಾವು ಕರ್ನಾಟಕದ ಏಕೀಕರಣದ ಬಗ್ಗೆ ಈ ನಾಯಕರು, ರಾಜಕೀಯ ದಿಗ್ಗಜಗಳು ಎಂದು ಅವರನ್ನು ಆಯಾಯ ಏರಿಯಾಕ್ಕೆ ಸೀಮಿತಗೊಳಿಸಿ ಎಂದು ಹೇಳುತ್ತೇವೆ. ಆದರೂ ಈ ನಾಯಕರನ್ನು ಇಂಟಗ್ರೇಟ್ ಮಾಡುವುದಕ್ಕೂ ಕೂಡ ನಾವು ಏನೂ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ಈಗ ನೀವು ಮೈಸೂರಿನಲ್ಲಿ ಇರತಕ್ಕಂಥ ಸಂಶೋಧನಾ ಸಂಸ್ಥೆಗೆ ತಾವು ಬಹುಶಃ ವೀರೇಂದ್ರಪಾಟೀಲ್‌ರ ಹೆಸರನ್ನು ಇಟ್ಟರೆ ಬಹಳ ಯುಕ್ತ ಆಗುತ್ತದೆ. ಏಕೆಂದರೆ ಪ್ರತಿಮೆ ಅದು ಇದೂ ಎಂದು ಹೇಳಿದ್ದಾರೆ, ಅರ್ಥ ಇಲ್ಲ. ಆದರೆ ಯಾವ ಒಂದು ನೀರಾವರಿಯಾಗಲಿ, ನಮ್ಮ ಜಲದ ಒಂದು ರಕ್ಷಣೆಗಾಗಿ ಯಾವ ಒಂದು ಹೋರಾಟವನ್ನಾಗಲಿ ಒಂದುರೀತಿಯ ಕಳಕಳಿಯನ್ನಾಗಲಿ, ಅದಕ್ಕೆ ಒಂದು ಚಾಲನೆಯನ್ನು ಕೊಟ್ಟಿದ್ದಾರೆ. ಆ ಒಂದು ಹೆಗ್ಗಳಿಕೆ ಇವೊತ್ತು ಮಾನ್ಯ ವೀರೇಂದ್ರ ಪಾಟೀಲರಿಗೆ ಸಲ್ಲುತ್ತದೆ. ಇದು ಅವರಿಗೆ ಸರಿಯಾದಂಥ ಒಂದು ಸ್ಮಾರಕ ಆಗುತ್ತದೆ. ಮತ್ತು ಗುಲ್ಬರ್ಗಾ ವಿಶ್ವವಿದ್ಯಾಲಯ ನೀರಾವರಿಯ ಸಂಶೋಧನೆಯ ಬಗ್ಗೆ, ಕೃಷಿ ಮತ್ತು ಇನ್ನಿತರ ಚಟುವಟಿಕೆಗಳಿಗೆ ಒಂದು ಪೀಠವನ್ನು ಸ್ಥಾಪನೆ ಮಾಡಿದರೂ ಕೂಡ ಬಹುಶಃ ಅವರಿಗೆ ಸೂಕ್ತವಾದಂಥ ಸ್ಮಾರಕ ಆಗಲಿಕ್ಕೆ ಸಾಧ್ಯವಿದೆ ಎಂಬ ಒಂದು ವೀರೇಂದ್ರಪಾಟೀಲ್‌ರು ಎಷ್ಟುಬೇಕೋ ಅಷ್ಟು ಮಾತನಾಡುತ್ತಿದ್ದರು, ಅಂದರೆ ಮಿತಭಾಷಿ ಮಾತ್ರವಲ್ಲ ಯಾವುದೇ ಒಂದು ಸಂದರ್ಭ ಬಂದರೂ ಕೂಡ ಸೂಕ್ಷ್ಮತೆಯಿಂದ ಒಂದು ವಿಚಾರದ ಬಗ್ಗೆ ಪ್ರತಿಕ್ರಿಯಿಸತಕ್ಕಂಥವರಾಗಿದ್ದರು. ಅವರು ಬರೀ ಒಬ್ಬ ಪೊಲಿಟೀಷಿಯನ್ ಆಗಿರಲಿಲ್ಲ, ಪೊಲಿಟಿಕ್ಸ್‌ಗಾಗಿ ಆಡಳಿತ ಇರಲಿಲ್ಲ, ಆಡಳಿತಕ್ಕಾಗಿ ರಾಜಕೀಯವನ್ನು ಸರಿದೂಗಿಸಿಕೊಂಡು ಹೋಗತಕ್ಕಂಥ ಒಬ್ಬ ಶ್ರೇಷ್ಠ ಮುತ್ಸದ್ದಿಯಾಗಿದ್ದರು. ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುವುದರಲ್ಲಿ ನಾನೂ ಕೂಡ ನನ್ನ ಧ್ವನಿಗೂಡಿಸಿ ಉಳಿದಂಥ ಏನು ಹಿರಿಯ ಚೇತನಗಳಿದ್ದಾರೆ ಅವರೂ ಕೂಡ ನಮ್ಮ ರಾಜ್ಯದ ಬೆಳವಣಿಗೆಗೆ ಮತ್ತು ಶಾಸಕಾಂಗದಲ್ಲಿ ಅವರು ಕೊಟ್ಟಂಥ ಕೊಡುಗೆಯನ್ನು ನಾನು ವಿಶೇಷವಾಗಿ ಸ್ಮರಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಧರ್ಮಸಿಂಗ್(ಜೇವರ್ಗಿ) : ಸನ್ಮಾನ್ಯ ಅಧ್ಯಕ್ಷರೆ, ದಿವಂಗತ ವೀರೇಂದ್ರಪಾಟೀಲ್‌ರು ಮತ್ತು ಇತರ ಮಾಜಿ ಮಂತ್ರಿಗಳು, ಶಾಸಕರೂ ಕೂಡ ನಿಧನ ಹೊಂದಿದ್ದಾರೆ. ಅವರ ಬಗ್ಗೆ ತಾವು ತಂದಂಥ ಸಂತಾಪಸೂಚನೆಯನ್ನು ನಾನು ಅನುಮೋದನೆ ಮಾಡುತ್ತಿದ್ದೇನೆ. ದಿವಂಗತ ವೀರೇಂದ್ರ ಪಾಟೀಲ್‌ರ ಆಗಲಿಕೆಯಿಂದ ಸಾಕಷ್ಟು ಮಾತುಗಳು ಈ ಸದನದಲ್ಲಿ ಬರುತ್ತಾ ಇವೆ. ನನಗೆ ತಿಳಿದಮಟ್ಟಿಗೆ ಅವರು ಅಧಿಕಾರದಿಂದ ಬಹಳ ದಿವಸ ದೂರ ಇದ್ದಮೇಲೆ, ನಮ್ಮಿಂದ ಅಗಲಿ ಹೋದ ಮೇಲೆ ರಾಷ್ಟ್ರದ ಮತ್ತು ರಾಜ್ಯದ ಜನತೆ ಏನನ್ನೋ ಕಳೆದಕೊಂಡಂತಾಗಿದೆ. ಅಧಿಕಾರದಿಂದ ಬಹಳ ದೂರವಾದಮೇಲೆ ಜನರು ಮರೆಯತಕ್ಕಂಥದ್ದು ಉಂಟು.

2.00 ಪಿ.ಎಂ.

ಮಾನ್ಯ ಪಾಟಾಳ್ ನಾಗರಾಜ್‌ರವರು ಹೇಳಿದಂತಹ ರೀತಿಯಲ್ಲಿ ಕರ್ನಾಟಕ ರಾಜ್ಯದ ಜನರು ಮರೆತುಹೋಗಿದ್ದಾರೆನ್ನುವಂತಹ ಮಾತನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ವೀರೇಂದ್ರ ಪಾಟೀಲ್‌ರವರು ದಿನಾಂಕ : 14-3-97 ರಂದು ಬೆಳಗಿನ ಜಾವ ನಿಧನ ಹೊಂದಿದರೆಂಬ ವಾರ್ತೆ ತಿಳಿದ ಮೇಲೆ ಕರ್ನಾಟಕ ರಾಜಧಾನಿಯಲ್ಲಿಯೂ ಕೂಡ ಜನಸ್ತೋಮ ಅವರ ಅಂತಿಮ ದರ್ಶನವನ್ನು ಪಡೆಯಲು ಬಂದಿದ್ದರು. ಅದೇ ರೀತಿಯಲ್ಲಿ ಚಿಂಚೋಳಿಯಲ್ಲೂ ಕೂಡ ಜನರು ಬಂದಿದ್ದರು, ತಾವು ಕೂಡ ಬಂದಿದ್ದೀರಿ, ಕರ್ನಾಟಕ ಅವರ ಜೀವನದಲ್ಲಿ ಅಧಿಕಾರದಲ್ಲಿದ್ದಾಗ, ಮಾಡಿದಂತಹ ಕೆಲಸ ಕಾರ್ಯಗಳನ್ನು ನಾವು ನೆನಪಿಕೊಳ್ಳಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು ಹೇಳಿದಂತೆ ಫಿಲಾಸಫಿ ಆಫ ದಿ ಲೈಫ ಅಂದರೆ ಯಾವಾಗಲೂ ಮನುಷ್ಯ ಹುಟ್ಟುತ್ತಾನೆ, ಸಾಯುತ್ತಾನೆ, ಮತ್ತೆ ಅದನ್ನು ನಾವು ಮರೆಯುವಂಥಾದ್ದು ಕೂಡ ಜೀವನದಲ್ಲಿ ಇದೆ. ನಾವು ಅದನ್ನು ಮರೆಯದೇ ಹೋದರೆ ನಾವು ಜೀವನವನ್ನು ಸಾಗಿಸುವುದಕ್ಕೆ ಆಗುವುದಿಲ್ಲವೆನ್ನುವಂತಹ ಮಾತನ್ನು ಕೂಡ ಹೇಳಿದ್ದಾರೆ. ಆದರೆ ಅವರು ತಮ್ಮ ಜೀವನದಲ್ಲಿ ಏನು ಕೆಲಸಕಾರ್ಯಗಳನ್ನು ಮಾಡಿದ್ದಾರೆ, ಸಾಧನೆಗಳನ್ನು ಮಾಡಿದ್ದಾರೆ, ಅವುಗಳನ್ನು ನಾವು ಜೀವನದಲ್ಲಿ ಅನುಕರಣೆಗೆ ತರುವಂಥಾದ್ದನ್ನು ಕೂಡ ಮಾಡಬೇಕಾಗುತ್ತದೆ. ಸನ್ಮಾನ್ಯ ವೀರೇಂದ್ರ ಪಾಟೀಲ್‌ರವರನ್ನು ನಾನು ನಲವತ್ತು ವರ್ಷಗಳಿಂದಲೂ ಬಲ್ಲೆ, ಅವರನ್ನು ಬಹಳಷ್ಟು ಸಮೀಪದಲ್ಲಿ ಅಂದರೆ ವಿದ್ಯಾರ್ಥಿ ಜೀವನದಿಂದ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಕೆಲಸ ಮಾಡಿದಂತಹ ಸಂದರ್ಭದಲ್ಲಿ ನಾನು ಕೂಡ ಸೇವಾದಳದಲ್ಲಿ ಕೆಲಸ ಮಾಡುತ್ತಿದ್ದೆ. ಸ್ವಾಮಿ ರಮಾನಂದ ತೀರ್ಥರವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದಂತಹ ಸಂದರ್ಭದಲ್ಲಿ ಪ್ರಪ್ರಥಮ ಬಾರಿಗೆ ನಾಸಲ್ ನಗರದಲ್ಲಿ ಅಧಿವೇಶನ ನಡೆದಾಗ ಶ್ರೀ ವೀರಶೆಟ್ಟಿ ಕುಸನೂರ್ ಮತ್ತು ನಾನು ಸೇವಾ ದಳದಲ್ಲಿ ವಾಲೆಂಟೀಯರ್ ಆಗಿ ಕೆಲಸ ಮಾಡುತ್ತಿದ್ದಂಥವರು ಹತ್ತಿರದಿಂದ ಅವರನ್ನು ನೋಡಿದ್ದೇವೆ. ಮಾನ್ಯ ಜೆ.ಬಿ. ನರಸಿಂಗರಾವರವರು ಕಾಂಗ್ರೆಸ ಪಕ್ಷದ ಅಧ್ಯಕ್ಷರಾದ ಮೇಲೆ ಅವರು ಕಾಂಗ್ರೆಸ ಪಕ್ಷದ ಕಾರ್ಯದರ್ಶಿಯಾಗಿ ಕೂಡ ಕೆಲಸ ಮಾಡಿದ್ದಾರೆ. ಅವರಿಗೆ ಚಿಂಚೋಳಿ ಕ್ಷೇತ್ರದಿಂದ ಪ್ರಪ್ರಥಮ ಬಾರಿ ಟಿಕೇಟ ಸಿಗಲಿಲ್ಲ. ಆಗ ಶ್ರೀ ಬಿ. ರಾಮಚಾರಿಯವರು ವೆಟರನ್ ಫ್ರೀಡಮ್ ಫೈಟರ್ ಇದ್ದರು. ಆಗ ಪ್ರಸ್ತುತ ಇರುವಂತಹ ಶ್ರೀಮಾನ್ ಮಲ್ಲಪ್ಪ ಕೊಲ್ಲೂರ್ ಅವರು ಮೊದಲ ಸಲ ಇವರಿಗೆ ಬಿಟ್ಟು ಕೊಡುವುದಕ್ಕಾಗುವುದಿಲ್ಲವೆಂದಾಗ ಅವರು ಆಳಂದ ಕ್ಷೇತ್ರದಿಂದ ಆರಿಸಿ ಬಂದರು. ಈ ರೀತಿಯಾಗಿ ರಾಜ್ಯ ಮತ್ತು ರಾಷ್ಟ್ರಮಟ್ಟದ ರಾಜಕಾರಣದಲ್ಲಿ ಅವರು ಒಳ್ಳೆಯ ಆಡಳಿತಗಾರರಾಗಿ ಕೆಲಸ ಮಾಡಿದ್ದಾರೆ. 1978ರಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಸ್ಪರ್ಧೆಯಲ್ಲಿ ಬಂದಮೇಲೆ, ಮತ್ತೆ 1989ರಲ್ಲಿ ಕಾಂಗ್ರೆಸ್‌ಗೆ ಪುನಃ ವಾಪಸ್ಸು ಬಂದಮೇಲೆ ಪ್ರಪ್ರಥಮ ಬಾರಿಗೆ ಮಾನ್ಯ ಗುಂಡೂರಾವ್‌ರವರು ಮುಖ್ಯಮಂತ್ರಿಗಳಾದ ಮೇಲೆ ನಾನು ಮಾನ್ಯ ಗುಂಡೂರಾವರವರು ಮತ್ತು ಮಾನ್ಯ ಎಫ್.ಎಂ. ಖಾನ್ ರವರು ಮೈಸೂರಿನ ಪ್ರವಾಸದಲ್ಲಿ ಇದ್ದೆವು. ಆಗ ಶ್ರೀಮತಿ ಇಂದಿರಾಗಾಂಧಿಯವರು ಮಾನ್ಯ ಗುಂಡೂರಾವ್‌ರವರಿಗೆ ಹೇಳಿ ಕಳುಹಿಸಿದರು. ಅವರು ಮಾನ್ಯ ವೀರೇಂದ್ರಪಾಟೀಲ್‌ರವರನ್ನು ಕೇಂದ್ರದ ಮಂತ್ರಿಗಳನ್ನಾಗಿ ಮಾಡುತ್ತಿದ್ದೇನ ಎಂದು ಹೇಳಿದರು. ತಮಗೆಲ್ಲಾ ಗೊತ್ತಿರುವಂತೆ ಶ್ರೀಮತಿ ಇಂದಿರಾಗಾಂಧಿಯವರ ಮಾತಿಗೆ ಮಾನ್ಯ ಗುಂಡೂರಾವ್‌ರವರು ಒಪ್ಪಿಗೆಯನ್ನು ಸೂಚಿಸುತ್ತಿದ್ದರು.

ಆಯಿತು ನೀವು ಅವರನ್ನು ಮಂತ್ರಿಗಳನ್ನಾಗಿ ತೆಗೆದುಕೊಳ್ಳಬೇಕು ಎಂದು ಆಗ ಹೇಳಿದ್ದರು. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಅವರಲ್ಲಿ ಏನು ಪ್ರತಿಭೆ ಇತ್ತು, ಅದನ್ನು ಉಪಯೋಗಿಸಿಕೊಳ್ಳಲು ಶ್ರೀಮತಿ ಇಂದಿರಾಗಾಂಧಿಯವರು ಅವರಿಗೆ ಒಳ್ಳೆಯ ಅವಕಾಶವನ್ನು ಕೊಟ್ಟರು. ಅದೇ ರೀತಿಯಲ್ಲಿ ಮಾನ್ಯ ರಾಜೀವ್ ಗಾಂಧೀಜಿಯವರ ಮಂತ್ರಿಮಂಡಲದಲ್ಲೂ ಕೂಡ ಅವರು ಕೆಲಸಕಾರ್ಯಗಳನ್ನು ಮಾಡಿದ್ದಾರೆ. ಒಟ್ಟಾರೆ ರಾಜ್ಯದಲ್ಲೂ ಕೂಡ ಎರಡು ಬಾರಿ ಮುಖ್ಯಮಂತ್ರಿಗಳಾಗಿ ಕೆಲಸವನ್ನು ಮಾಡಿದ್ದಾರೆ. ಗುಲ್ಬರ್ಗಾ ವಿಶ್ವವಿದ್ಯಾನಿಲಯವಾಗಲಿ, ಅಪ್ಪರ್ ಕೃಷ್ಣ ಪಾಜೆಕ್ಟ್‌ಗಾಗಲಿ ಇವರೆಡೂ ಕೂಡ ನನ್ನ ಜೀವನದ ಕನಸುಗಳು ಎನ್ನುವಂಥ ರೀತಿಯಲ್ಲಿ ಮೆಥಾಡಿಕಲ್ ಆಗಿ ಕೆಲಸ ಮಾಡುವಂತಹ ಪ್ರವೃತ್ತಿ ಅವರಲ್ಲಿತ್ತು, ಅದನ್ನು ಈಗಲೂ ಕೂಡ ಜನರು ನೆನಪಿಸಿ ಕೊಳ್ಳುತ್ತಿದ್ದಾರೆ. ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದಂತೆ ಯಾವಾಗಲೂ ವಿಂಡಿಕ್ಟೀವ್ ಇರಲಿಲ್ಲ. ಅವರು 1979ರಲ್ಲಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಮೇಲೆ ಕರ್ನಾಟಕ ಭವನಕ್ಕೆ ಫೋನ್ ಮಾಡಿ, ನೀವು ಏಕೆ ಬಂದಿದ್ದೀರಿ ಎಂದಾಗ ನಾವು ನಾಮಿನಿ ಟಿಕೇಟ್‌ಗೆ ಬರಲಿಲ್ಲ ಎಂದಾಗ ತಮಗೆ ಏನಾದರೂ ಸಲಹೆ ಸೂಚನೆಗಳು ಬೇಕಾದರೆ ಕೇಳಿ ಹೋಗಿ ಕೆಲಸ ಕಾರ್ಯಗಳನ್ನು ಮಾಡಿ ಎಂದು ಹೇಳಿದರು. ಅವರು ಬೇರೆ ಕ್ಷೇತ್ರದ ಬಗ್ಗೆ ಕೂಡ ನಮ್ಮೊಂದಿಗೆ ಸಮಾಲೋಚನೆ ಮಾಡುತ್ತಿದ್ದರು. ಅವರು ಮುಖ್ಯಮಂತ್ರಿಗಳಾದ ಮೇಲೆ ನಮ್ಮ ಕ್ಷೇತ್ರದಲ್ಲಿ ಅಂದಿನಿಂದ ಇಂದಿನವರೆಗೂ ಇಂದು ಅವರು ತೀರಿ ಕೊಂಡಿದ್ದಾರೆ. ಅಂದರೆ ನಾನು ಪ್ರಸ್ತಾಪ ಮಾಡುವಂಥಾದ್ದು, ಅವರು ಎಂದೂ ನಮ್ಮ ಕ್ಷೇತ್ರಕ್ಕೆ ಬರುವಂತಹ ಅಭಿವೃದ್ಧಿ ಕೆಲಸ ಕಾರ್ಯಗಳಲ್ಲಿ ಇಂಟರ್‌ಫೀಯರ್ ಆಗುತ್ತಿರಲಿಲ್ಲ. ಆ ಒಂದು ರೀತಿಯಲ್ಲಿ ಕೆಲಸ ಮಾಡುವಂತಹ ಮತ್ತು ವಿಚಾರ ಮಾಡುವಂಥಾದ್ದೆ ಬೇರೆಯಾಗಿತ್ತು. ಇವತ್ತು ಅವರು ನಮ್ಮನ್ನು ಅಗಲಿ ಹೋದ ಮೇಲೆ ಕರ್ನಾಟಕ ರಾಜ್ಯಕ್ಕೆ, ರಾಷ್ಟ್ರಕ್ಕೆ ಕೂಡ ಒಂದು ದೊಡ್ಡ ಹಾನಿಯಾಗಿದೆ. ಮಾನ್ಯ ಸೀತಾರಾಂ ಕೇಸರಿಯವರು 15ನೇ ಡಿಸೆಂಬರ್‌ನಲ್ಲಿ ರಾಜ್ಯಕ್ಕೆ ಬಂದಿದ್ದಾಗ ನನಗೆ ಫೋನ್ ಮಾಡಿ ಮಾನ್ಯ ವೀರೇಂದ್ರ ಪಾಟೀಲ್‌ರವರ ಮನೆ ಎಲ್ಲಿದೆ ಎಂದು ಕೇಳಿದರು. ಆಗ ನಾನು ಡಾ|| ಜವಳಿಯವರನ್ನು ಕರೆಯಿಸಿ ಕೇಳಿ, ನಂತರ ನಾನು ಮತ್ತು ಮಾನ್ಯ ಸೀತಾರಾಂ ಕೇಸರಿಯವರು ಅವರ ಮನೆಗೆ ಹೋದಾಗ ಅವರು ಊಟ ಮಾಡುತ್ತಿದ್ದರು. ಆಗ ನಾವು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಮನೆಗೆ ಊಟಕ್ಕೆ ಹೋಗುತ್ತಾ ಇದ್ದೆವು. ಆಗ ಮಾನ್ಯ ಸೀತಾರಾಂ ಕೇಸರಿಯವರು ಅವರನ್ನು ಅಲ್ಲಿಗೆ ಕರೆಸಿದರು. ಆಗ ಅವರು ನೀವು ಒಳ್ಳೆಯ ಯುವಕನನ್ನು ಅಧ್ಯಕ್ಷನನ್ನಾಗಿ ಮಾಡಿದ್ದೀರಿ. ಇಲ್ಲಿ ನಿಮ್ಮ ಮೇಲೂ ಕೂಡ ಬಹಳಷ್ಟು ಜವಾಬ್ದಾರಿ ಇದೆ ಎಂದು ಹೇಳಿದರು. ರಾಷ್ಟ್ರಮಟ್ಟದಲ್ಲಿ ಸಮಾಲೋಚನೆ ಮಾಡಿದರೆ ಮಾನ್ಯ ಸೀತಾರಾಂ ಕೇಸರಿಯವರು ಫೋನ್ ಮಾಡಿದ ಮೇಲೆ ನಾವು ಆ ದಿವಸ ಹೋಗಿದ್ದು ಚೆನ್ನಾಯಿತು ಎನ್ನುವಂಥಾದ್ದನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಈ ರೀತಿಯಾಗಿ ಇವತ್ತು ಒಬ್ಬ ರಾಷ್ಟ್ರಮಟ್ಟದ ವ್ಯಕ್ತಿಯನ್ನು ಮತ್ತು ಆ ಭಾಗದಿಂದ ಅಷ್ಟು ಎತ್ತರದ ಮಟ್ಟದಲ್ಲಿದ್ದಂತಹ ನಾಯಕನನ್ನು ನಾವು ಮತ್ತೆ ಕಾಣುವಂತಹ ಅವಕಾಶವಿರಲಾರದು. ಅದರಲ್ಲೂ ವಿಶೇಷವಾಗಿ ಗುಲ್ಬರ್ಗಾ ಜಿಲ್ಲೆಯ ಜನರಿಗೆ ಎನ್ನುವಂಥಾದ್ದು ಅಲ್ಲಿನ ಜನರ ಅನುಭವಕ್ಕೆ ಬಂದಿದೆ. ಅಂತಹ ಒಬ್ಬ ನಾಯಕನನ್ನು ನಾವು ಕಳೆದುಕೊಂಡಿದ್ದೇವೆ. ಅದಕ್ಕಾಗಿ ತಾವು ಇವತ್ತು ಈ ಸದನದಲ್ಲಿ ತಂದಿರತಕ್ಕಂಥ ಸಂತಾಪ ಸೂಚನೆಯನ್ನು

ಅನುಮೋದನೆ ಮಾಡುತ್ತಿದ್ದೇನೆ. ಅದೇ ರೀತಿಯಲ್ಲಿ ಶ್ರೀಮತಿ ಲೀಲಾದೇವಿ ವೆಂಕಟೇಶ್ ಮಾಗಡಿಯವರು, ಶ್ರೀ ಪಿ. ತಿಮ್ಮಯ್ಯನವರು, ಶ್ರೀ ಹಮೀದ್‌ಷಾರವರು ನಮ್ಮೊಡನೆ 1972ರಲ್ಲಿ ಶಾಸಕರಾಗಿದ್ದರು. ಮತ್ತೆ ಶ್ರೀ ಭಾಸ್ಕರ್ ನಾಯ್ಡುರವರು ನಮ್ಮೊಡನೆ ಬಹಳಷ್ಟು ಆತ್ಮೀಯತೆಯಿಂದ ಇದ್ದರು. ಇವತ್ತು ನಾನು ಇಲ್ಲಿಗೆ ಬಂದಮೇಲೆ ಅವರು ಆಗಲಿ ಹೋಗಿದ್ದಾರೆಂದು ತಿಳಿಯಿತು. ಅವರೂ ಸಹ ಲೌವಬಲ್ ಪರ್ಸನ್ ಆಗಿದ್ದರು. ಅಂತಹ ಸಹೋದ್ಯೋಗಿಗಳನ್ನು ಕಳೆದುಕೊಂಡಿದ್ದಕ್ಕಾಗಿ ಅವರ ಎಲ್ಲಾ ಪರಿವಾರದ ಜನರಿಗೆ ತಾವು ಏನು ಸಂತಾಪ ಸೂಚನೆಯನ್ನು ಕಳುಹಿಸುತ್ತಿದ್ದೀರಿ. ಅದರಲ್ಲಿ ನಾನು ಕೂಡ ಭಾಗಿಯಾಗಿದ್ದೇನೆ ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು ಮಾನ್ಯ ಮುಖ್ಯಮಂತ್ರಿಯವರು ಸ್ಮಾರಕ ಮಾಡುವಂತಹ ವಿಚಾರವಾಗಿ ಚಿಂಚೋಳಿಯಲ್ಲಿ ಪತ್ರಕರ್ತರ ಮುಂದೆ ಹೇಳಿದ್ದಾರೆ. ತಾವು ಅದನ್ನು ಮಾಡುವಂತಹ ಸಂದರ್ಭದಲ್ಲಿ ಎಲ್ಲಾ ಪಕ್ಷದ ಜನರನ್ನು ಮತ್ತು ಸಾರ್ವಜನಿಕರ ಸಲಹೆ ಸೂಚನೆಗಳನ್ನು ಪಡೆದುಕೊಂಡು ಒಳ್ಳೆಯ ಪರಿಣಾಮಕಾರಿಯಾಗಿ ಮಾಡಬೇಕೆಂದು ಕೇಳಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ವೈ. ರಾಮಕೃಷ್ಣ (ಆನೇಕಲ್) : ಮಾನ್ಯ ಅಧ್ಯಕ್ಷರೆ, ಮಾನ್ಯ ವೀರೇಂದ್ರ ಪಾಟೀಲ್‌ರವರು ಇಷ್ಟು ಶೀಘ್ರವಾಗಿ ಇತಿಹಾಸದ ಪುಟಗಳನ್ನು ಸೇರುತ್ತಾರೆಂದು ನಾವು ಭಾವಿಸಿರಲಿಲ್ಲ. ಇದು ಅತ್ಯಂತ ದುರ್ದೈವದ ಸಂಗತಿ ಎಂದು ಹೇಳುತ್ತೇನೆ. ದಿನಾಂಕ 14-3-97 ಬಹಳ ಚಿಂತೆಗೀಡು ಮಾಡಿರುವಂಥಾದ್ದು ಬಹುಶಃ ಮಾನ್ಯ ಮುಖ್ಯಮಂತ್ರಿಯವರಿಗೂ ಗೊತ್ತಿದೆ. ನನ್ನ ಮತ್ತು ಮಾನ್ಯ ವೀರೇಂದ್ರಪಾಟೀಲರವರ ಸಂಪರ್ಕ ಇಂದಿಗೆ ನಲವತ್ತು ವರ್ಷಗಳಾಯಿತು. ಅಂದರೆ ನಾವು 1957ನೇ ಇಸವಿಯಲ್ಲಿ ಸೇರಿದ್ದು ಈಗ 1997ರಲ್ಲಿ ಆಗಲಿದ್ದೇವೆ. ಈ ಸಂದರ್ಭದಲ್ಲಿ ನಾನು ವೈಯಕ್ತಿಕವಾಗಿ ರಾಜಕೀಯದಲ್ಲಿ ಒಂದು ಸ್ಥಾನಮಾನಗಳನ್ನು ಗಳಿಸಿಕೊಳ್ಳುವುದರಲ್ಲಾಗಲೀ, ಮಾರ್ಗದರ್ಶನ ಕೊಡುವುದರಲ್ಲಾಗಲಿ, ಇದನ್ನು ನಾನು ನನ್ನ ಜೀವಿತಾವಧಿಯಲ್ಲಿ ಎಂದೂ ಮರೆಯುವ ಹಾಗೆ ಇಲ್ಲ. ಅದು ಯಾವ ರೀತಿಯಲ್ಲಿ ಇತ್ತೆಂದರೆ ಒಬ್ಬ ದೊಡ್ಡ ಸಹೋದರನು ಚಿಕ್ಕ ಸಹೋದರನನ್ನು ಕರೆದುಕೊಂಡು ಹೋಗುವ ರೀತಿಯಲ್ಲಿ ನನ್ನನ್ನು ಕೈ ಹಿಡಿದುಕೊಂಡು ಹೋಗುವ ರೀತಿಯಲ್ಲಿ ನನ್ನನ್ನು ಕರೆದುಕೊಂಡು ಹೋದರು. ಕಾಂಗ್ರೆಸ್ ಪಕ್ಷ ಇಬ್ಭಾಗವಾದಂತಹ ಸಂದರ್ಭದಲ್ಲಿ (ಒ) ಕಾಂಗ್ರೆಸ್ ಆಯಿತು. ಆಗ ಅವರು ಅಧ್ಯಕ್ಷರಾದರು, ನನ್ನನ್ನು ವೈಸ್‌ಪ್ರೆಸಿಡೆಂಟ್ ಮಾಡಿದರು. ಅದೇ ರೀತಿಯಲ್ಲಿ ಜನತಾ ಪಾರ್ಟಿ ಎಂದು ಕಟ್ಟಿದರು, ಆಗ ಅವರು ಮೊದಲ ಸಲ ಕ್ಯಾಬಿನೆಟ ಸಚಿವರಾದಾಗ ಅವರು ಮಂತ್ರಿಗಳಾಗಿದ್ದರು, ನಾನು ಉಪ ಮಂತ್ರಿಯಾಗಿದ್ದೆ. ಈ ರೀತಿಯಾಗಿ ಒಂದು ದಿವಸವಾದರೂ ಕೂಡ ನಾವು ಬಿಟ್ಟು ಅಗಲಿದವರಲ್ಲ. ಇಷ್ಟು ವರ್ಷಗಳು ಅಂದರೆ ಈ ನಲವತ್ತು ವರ್ಷಗಳ ದೀರ್ಘಾವಧಿಯಲ್ಲಿ ನಾನು ಕಿಂಚಿತ್ತು ಏನಾದರೂ ಕಲಿತಿರಬೇಕೆಂದರೆ ಅವರು ರಾಜಕೀಯಕ್ಕೋಸ್ಕರ ಎಂದೂ ಹಂಬಲಿಸಿದವರಲ್ಲ. ರಾಜಕೀಯಕ್ಕೋಸ್ಕರ ರಾಜಕೀಯ ಮಾಡಬೇಕೆಂದು ಹೇಳಿದವರಲ್ಲ. ಓಟು ಗಳಿಕೆಗಾಗಿ ರಾಜಕೀಯ ಮಾಡಬೇಕನ್ನುವ ವಿಚಾರ ಅವರ ಕನಸಿನಲ್ಲೂ ಕೂಡ ಇರಲಿಲ್ಲ. ಅವರು ಯಾವಾಗಲೂ ನನಗೆ ಏನು ಹೇಳುತ್ತಿದ್ದರೆಂದರೆ ನಾವು ಒಳ್ಳೆಯ ಕೆಲಸವನ್ನು ಮಾಡಿದರೆ ಜನರು ನಮಗೆ ಓಟು ಕೊಡುತ್ತಾರೆಂದು, ಕೆಟ್ಟ ಕೆಲಸವನ್ನು ಮಾಡಿದರೆ ಮನೆಗೆ ಕಳುಹಿಸುತ್ತಾರೆನ್ನುವ ಮಾತನ್ನು ಹೇಳುತ್ತಿದ್ದರು. ನಾವು ಒಳ್ಳೆಯ ಕೆಲಸಗಳನ್ನು

ಮಾಡಿದರೆ ಜನರು ನಮಗೆ ಓಟು ಕೊಡುತ್ತಾರೆ. ಅದಕ್ಕೆ ನಾವು ಏಕೆ ಯೋಚನೆ ಮಾಡಬೇಕೆಂದು ಬಹಳ ಸಾಧಾರಣವಾಗಿ ಹೇಳುತ್ತಿದ್ದರು. ನಾನು ಮತ್ತೊಂದು ವಿಚಾರವನ್ನು ತಮ್ಮಗಮನಕ್ಕೆ ತರುವುದೇನೆಂದರೆ, ಅವರಿಗೆ ಓದುವುದರಲ್ಲಿ ಹೆಚ್ಚಿನ ಆಸಕ್ತಿ ಇತ್ತು. ಎಷ್ಟೇ ದೊಡ್ಡ ವ್ಯಕ್ತಿಗಳು ಬರಲಿ, ಅವರು ಓದುತ್ತಲೇ ಅವರ ಜೊತೆಯಲ್ಲಿ ಮಾತನಾಡುತ್ತಿದ್ದರು. ನಮಗೆ ಇವರ ಬಗ್ಗೆ ಅನೇಕ ಜನರು ಹೇಳುತ್ತಿದ್ದುದೇನೆಂದರೆ ಮಾನ್ಯ ವೀರೇಂದ್ರ ಪಾಟೀಲ್‌ರವರು ಯಾವಾಗ ಹೋದರೂ ಓದಿಕೊಂಡೇ ಇರುತ್ತಾರೆ, ಅವರು ನಮ್ಮ ಕಡೆ ನೋಡುವುದಿಲ್ಲವೆಂದು ಹೇಳುತ್ತಿದ್ದರು. ಅದು ಅವರ ಸ್ವಭಾವವಾಗಿತ್ತು, ಅವರು ಅದನ್ನು ಆ ರೀತಿ ಬೆಳೆಸಿಕೊಂಡಿದ್ದರು. ಕರ್ನಾಟಕ ರಾಜ್ಯದಲ್ಲಿ ಅವರಿಗೆ ಅತ್ಯಂತ ನಿಕಟವರ್ತಿಗಳೆಂದರೆ ಮಾನ್ಯ: ಬಾಳೆಕುಂದ್ರಿಯವರು ಅವರು ಕೃಷ್ಣ ಪ್ರಾಜೆಕ್ಟ್, ಇತರ ಎಲೆಕ್ಟ್ರಿಕ್ ಪ್ರಾಜೆಕ್ಟ್‌ಗಳ ಬಗ್ಗೆ ಎಷ್ಟು ಅಧ್ಯಯನ ಮಾಡಿ ಅವರಿಗೆ ಹೇಳುತ್ತಿದ್ದರೆಂದರೆ ನಾನು ಅದನ್ನು ಹೇಳುವುದಕ್ಕೆ ಅಸಾಧ್ಯವಾಗುತ್ತದೆ. ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಅನ್ನು ತೆಗೆದುಕೊಂಡಾಗ ಅವರ ಮನಸ್ಸಿನಲ್ಲಿದುದ್ದನ್ನು ಮನ ಬಿಚ್ಚಿ ಹೇಳುತ್ತಿದ್ದರು. ಅವರು ಬೇರೆ ರಾಜ್ಯಗಳಲ್ಲಿ ಏನು ಆಯಿತೆಂಬ ಬಗ್ಗೆ ಹೇಳುತ್ತಿದ್ದರು. ಹೀಗೆ ಇವರು ಅಧ್ಯಯನ ಮಾಡುತ್ತಿದ್ದುದ್ದು ಅವರ ಜೀವನವೇ ಒಂದು ಅಧ್ಯಯನವಾಗಿತ್ತು. ಅವರನ್ನು ರಾಜಕಾರಣಿ ಎನ್ನುವುದಕ್ಕಿಂತ ಒಂದು ಅಧ್ಯಯನದ ಜೀವನವನ್ನು ನಡೆಸುತ್ತಿದ್ದರು ಎಂದು ಹೇಳಬಹುದು. ರಾಜ್ಯದ ಸರ್ವತೋಮುಖವಾದ ಒಂದು ಅಭಿವೃದ್ಧಿಗೆ ಪಾತ್ರರಾದರು. ಅನೇಕ ವಿಚಾರಗಳನ್ನು ಇಲ್ಲಿ ಹೇಳಬಾರದು ಎಂದು ನನಗೆ ಅನಿಸುತ್ತದೆ. ಆದರೆ, ಒಂದೇ ಒಂದು ವಿಚಾರವನ್ನು ಹೇಳಿಬಿಡುತ್ತೇನೆ. ಅವರಿಗೂ ಮತ್ತು ಶ್ರೀಮತಿ ಇಂದಿರಾಗಾಂಧಿಯವರಿಗೂ ವೈಮನಸ್ಸು ಬಂದಾಗ, ಬಹುಶಃ ಹೆಚ್ಚಿನ ಪಾತ್ರ ವಹಿಸಿದವನು ನಾನು. ಅವರನ್ನು ಕರೆದುಕೊಂಡುಹೋಗಿ ಪ್ರಧಾನಮಂತ್ರಿಗಳ ಹತ್ತಿರ ಬಿಟ್ಟು, ಮಧುರ ಸಂಬಂಧವನ್ನು ಕಲ್ಪಿಸಿಕೊಟ್ಟು ಪುನಃ ಅವರನ್ನು ಈ ರಾಜ್ಯಕ್ಕೆ ಪ್ರೆಸಿಡೆಂಟ್ ಮತ್ತು ಮುಖ್ಯಮಂತ್ರಿಗಳನ್ನಾಗಿ ಮಾಡುವುದಕ್ಕೆ ಹೆಚ್ಚಾಗಿ ಶ್ರಮಪಟ್ಟೆ. ಇದನ್ನು ನಾನು ಏತಕ್ಕೆ ಹೇಳುತ್ತೇನೆಂದರೆ, ನನ್ನ ಆತ್ಮಕ್ಕೂ ಒಂದು ಸಂತೋಷವಾಯಿತು. ಇಂತಹವರ ಜೊತೆಯಲ್ಲಿದ್ದೆ, ಇಂತಹವರ ಜೊತೆಯಲ್ಲಿದ್ದು ನಾನು ಈ ರೀತಿ ನಡೆದುಕೊಂಡೆ, ಈ ರೀತಿ ಮಾಡಿದೆ ಎಂಬ ಸಮಾಧಾನ. ನಾನು ಆರೋಗ್ಯ ಮಂತ್ರಿಯಾಗಿದ್ದೆ. ಮೊದಲು, ಅವರು ನನ್ನನ್ನು ಆರೋಗ್ಯ ಮಂತ್ರಿಯನ್ನಾಗಿ ಮಾಡಿದರು. ನಾನು ಅದನ್ನು ಮರೆಯುವುದಕ್ಕಾಗುವುದಿಲ್ಲ. ಬೆಂಗಳೂರು ಯೂನಿವರ್ಸಿಟಿ ಸಂಸ್ಥಾಪನೆಗೆ ಮೊದಲು, ಮೈಸೂರು ಸೆನೆಟ್‌ಗೆ ನನ್ನನ್ನು ಹಾಕಿದಾಗ ಒಂದೇ ಒಂದು ಸಿಟಿಂಗ್ ಮಾಡಿದೆ. ಬೆಂಗಳೂರಿನಿಂದ, ಮೈಸೂರಿನವರೆಗೆ ಬಂದು ಇರತಕ್ಕ ಒಂದೇ ಒಂದು ಯೂನಿವರ್ಸಿಟಿಗೆ ಏಕೆ ಮಾಡಬೇಕು. ಸ್ವಾಮಿ ದಯವಿಟ್ಟು ಇಲ್ಲಿಯೇ ಒಂದು ಯೂನಿವರ್ಸಿಟಿ ಮಾಡಬೇಕೆಂದು ಹೇಳಿದಾಗ, ಅವರು ಅತ್ಯಂತ ಸಂತೋಷದಿಂದ ಈ ವಿಷಯವನ್ನು ತೆಗೆದುಕೊಂಡು, ಈ ಕೆಲಸ ಮಾಡಿದರು. ಆಗ ಶ್ರೀಮಾನ್ ಕಂಠಿಯವರೂ ಇದ್ದರು. ಅವರಿಗೆ ಹೇಳಿ, ಮಾನ್ಯ ನಿಜಲಿಂಗಪ್ಪನವರಿಗೆ ಹೇಳಿ, ಬೆಂಗಳೂರಿನಲ್ಲಿ ಯೂನಿವರ್ಸಿಟಿ ಮಾಡಿದರು. ಕ್ಯಾನ್ಸರ ಇನಸ್ಟಿಟ್ಯೂಟ್, ಇದರ ಬಗ್ಗೆ ಅವರು ಬಹಳ ತಲೆ ಕೆಡಿಸಿಕೊಂಡವರು. ಚಾಟಿಯಲ್ಲಿ ಹೊಡೆದರ ಏನಾಗುತ್ತದೆಯೋ, ಆ ರೀತಿ ನನಗೆ ಹೊಡೆಯುತ್ತಿದ್ದರು. ಏನಾಯಿತು ಕ್ಯಾನ್ಸರ್ ಇನ್‌ಸ್ಟಿಟ್ಯೂಟ್ ವಿಚಾರ, ಡೆಲ್ಲಿಗೆ ಹೋಗಿದ್ದಿರಾ, ಸಂಶೋಧಕರನ್ನು ಕರೆಸಿಕೊಂಡು ಬಂದೆಯಾ ಎಂದು ಕೇಳುತ್ತಿದ್ದರು. ಹಾಗೆಯೇ ಆ

ಆಯುರ್ವೇದ ಮತ್ತು ಹೋಮಿಯೋಪತಿ ಬಗ್ಗೆಯೂ ಅತಿ ಹೆಚ್ಚಿನ ಕಾಳಜಿ ವಹಿಸಿದ್ದರು. ಸನ್ಮಾನ್ಯ ಶ್ರೀ ಬಸವಣ್ಣನವರು ಇಲ್ಲಿದ್ದಾರೆ. ಅವರ ಸಚಿವ ಸಂಪುಟದಲ್ಲಿ, ಇವರು ಡೆಪ್ಯೂಟಿ ಮಿನಿಸ್ಟರಾಗಿದ್ದರು. ಅವರಿಗೆ ಇದು ಗೊತ್ತಿತ್ತು. ಪೋಸ್ಟ್ ಗ್ರಾಜುಯೇಟ್ ಇನ್‌ಸ್ಟಿಟ್ಯೂಟನ್ನು ಮೈಸೂರು ಮತ್ತು ಬೆಂಗಳೂರಿನಲ್ಲಿ ತರುವುದಕ್ಕೆ ಪ್ರಯತ್ನಪಟ್ಟರು. ಜೊತೆಗೆ ಮೊದಲಬಾರಿಗೆ ಹೋಮಿಯೋಪತಿ ಕಾಲೇಜನ್ನು ಅವರೇ ಸ್ಥಾಪನೆ ಮಾಡಿದರು. ಬಳ್ಳಾರಿ ಮೆಡಿಕಲ್ ಕಾಲೇಜಿನಲ್ಲಿ ಗಲಾಟೆಯಾಗಿ ಸ್ವಾಮಿ ಫೈರಿಂಗ್ ಆಗಿತ್ತು. ಅವರು ಅಂದು ಇಲ್ಲಿರಲಿಲ್ಲ, ಫಾರಿನ್‌ನಲ್ಲಿ ಎಲ್ಲೋ ಇದ್ದರು. ಅಲ್ಲಿಂದ ನನಗೆ ಫೋನ್ ಮಾಡಿ ಕೇಳಿದರು. ಅಂದರೆ ಅವರು ಆಡಳಿತದಲ್ಲಿ ಎಷ್ಟು ಮಿಟಿಕ್ಯುಲಸ್ ಆಗಿ ಕೇರ್ ತೆಗೆದುಕೊಳ್ಳುತ್ತಿದ್ದರು ಎಂಬುದಕ್ಕೆ ಹೇಳಿದರೆ ಅದನ್ನು ನಾವು ವರ್ಣನೆ ಮಾಡುವುದಕ್ಕೆ ಸಾಧ್ಯವಿಲ್ಲ. He is a man of simple living and high thinking. ಇದು ನಾನು ಅವರ ಜೀವನದಲ್ಲಿ ಕಂಡಂಥ ಒಂದು ದೊಡ್ಡ ದೃಶ್ಯ. He is a man of simple living and high thinking. ಯಾರನ್ನೂ ಕೂಡ ಅನಾವಶ್ಯಕವಾಗಿ ಟೀಕೆ ಮಾಡುತ್ತಾ ಇರಲಿಲ್ಲ. ಯಾವ ಸಂದರ್ಭದಲ್ಲೂ ಕೂಡ ಟೀಕೆ ಮಾಡುತ್ತಿರಲಿಲ್ಲ. ಅವರಿದ್ದಂಥ ಸ್ಟಿಫ್‌ನೆಸ್‌ನ್ನು ಇದುವರೆಗೂ ಯಾರಲ್ಲೂ ನಾನು ನೋಡಿಲ್ಲ. ಬಹುಶಃ ಹಿಂದೆ ಸನ್ಮಾನ್ಯ ಶ್ರೀ ಸಿದ್ದವೀರಪ್ಪನವರು, ಸನ್ಮಾನ್ಯ ಶ್ರೀ ಗೋಪಾಲಗೌಡರು, ಸನ್ಮಾನ್ಯ ಶ್ರೀ ಚನ್ನಬಸಪ್ಪನವರು ಹೀಗೆ ಅನೇಕ ಮಂದಿ ಸ್ವಾಲ್‌ವರ್ಟ್ಸ್ ಇದ್ದರು ಅವರು ಅನ್ನುವುದನ್ನೆಲ್ಲಾ ಅಂದರು. ಆದರೆ, ಇವರು ಮಾತ್ರ ಎದ್ದುನಿಂತುಕೊಂಡು ಚಕಾರ ಶಬ್ದ ಎತ್ತಲಿಲ್ಲ. ನಿಮ್ಮ ಮನಸ್ಸಿಗೆ ಸಂತೋಷವಾಗುವುದಿದ್ದರೆ ಆ ಮಾತನಾಡಿ ಎಂದು, ಇದೊಂದು ಮಾತು ಮಾತ್ರ ಹೇಳುತ್ತಿದ್ದರು. ನಿಮ್ಮ ಮನಸ್ಸಿಗೆ ಶಾಂತಿ ಸಮಾಧಾನ ತರುವುದಿದ್ದರೆ ನೀವು ಅಂದುಕೊಳ್ಳಿ ಎಂದು ಅಷ್ಟು ಮಾತ್ರ ಹೇಳುತ್ತಿದ್ದರು ಅಷ್ಟು ಶಾಂತಿಪ್ರಿಯತೆ ಬಹುಶಃ ನಮ್ಮ ಪಟೇಲ್‌ರಿಗೆ ಇಲ್ಲ, ಅದಕ್ಕೋಸ್ಕರ ಹೇಳುತ್ತಿದ್ದೇನೆ. ಇವರು ಅದನ್ನು ಕಾಪಾಡಿಕೊಳ್ಳಬೇಕು. ಅವರಿಗೆ ಒಂದು ಸ್ಮಾರಕ ಕಟ್ಟಿಸಬೇಕೆಂದು ಎಂದು ಹೇಳಿದ್ದಾರೆ. ನೀವು ಸ್ಮಾರಕ ಕಟ್ಟಿಸಿ, ತಾವು ಅವರ ಒಡನಾಡಿಗಳಾಗಿ, ಅವರ ಜೊತೆಯಲ್ಲಿ ಅನೇಕ ವರ್ಷಗಳ ಕಾಲ ಕೆಲಸ ಮಾಡಿದ್ದೀರಿ. ರಾಜಕೀಯದ ಈ ಅನುಭವದ ಜೊತೆಗೆ, ಪಾರ್ಟಿಯಲ್ಲಿದ್ದಂಥ ಅನುಭವ ಬಹಳ ಅಪಾರವಾದುದು, ಪಾರ್ಟಿಗಳನ್ನು ಕಟ್ಟುವುದರಲ್ಲಿ, ಬಡ ಜನರನ್ನು ಪ್ರೀತಿಸುವುದರಲ್ಲಿ. ಒಂದೇ ಒಂದು ಸಣ್ಣ ಘಟನೆ ಈ ಸಂದರ್ಭದಲ್ಲಿ ಜ್ಞಾಪಕಕ್ಕೆ ಬರುತ್ತದೆ. ಸನ್ಮಾನ್ಯ ಶ್ರೀ ಜಗಜೀವನ್‌ರಾಮ್‌ರವರು ಬಂದಿದ್ದರು. ನಾನು ಬಿ. ರಾಚಯ್ಯನವರು ಮತ್ತು ಜಗಜೀವನರಾಮ ರವರು ಅವರ ಮನೆಯಲ್ಲಿ ಊಟ ಮಾಡುತ್ತಾ, ಇದ್ದಾಗ, ಅವರು ಒಂದು ಮಾತು ಹೇಳಿದರು.Mr. Patil, you have to confer some social status on Scheduled Caste people ಪಾಟೀಲರು ಹೇಗೆ ಎಂದು ಕೇಳಿದರು. Atleast grant two acres land to each Scheduled Caste family because in India it is only the land that confers status on individuals. Atleast you must confer two acres of land. ಎಂದು ಹೇಳಿದ್ದನ್ನೂ ಅವರು ಎಷ್ಟು ಜ್ಞಾಪಕವಿಟ್ಟುಕೊಂಡಿದ್ದರೆಂದರೆ, ಇವತ್ತು ಆ ಪುಸ್ತಕವನ್ನು ದಯವಿಟ್ಟು ತೆಗೆಯಿರಿ. ಲ್ಯಾಂಡ್ ರಿಫಾರಮ್ಸ್ ಇನ್ ಇಂಡಿಯಾ ಎಂಬ ಪುಸ್ತಕ ತೆಗೆಯಿರಿ. ನಾವು ಲ್ಯಾಂಡ್ ರಿಫಾರಮ್ಸ್ ಆಕ್ಟ್‌ನಲ್ಲಿ ಎಷ್ಟು ಭೂಮಿಯನ್ನು ಹರಿಜನ ಗಿರಿಜನರಿಗೆ ಕೊಟ್ಟೆವೋ ಅದಕ್ಕಿಂತ ಹೆಚ್ಚಿನ ಭೂಮಿಯನ್ನು ವೀರೇಂದ್ರ

ಪಾಟೀಲ್‌ರು ಕೊಟ್ಟರು ಎಂದು ಹೇಳಿದರೆ, ತಪ್ಪಾಗಲಾರದು. ಸದ್ದಿಲ ಇಲ್ಲ, ಗೊಂದಲ ಇಲ್ಲ, ಪ್ರಚಾರ ಇಲ್ಲ, ಚಪ್ಪಾಳೆ ಇಲ್ಲ, ಹೂವಿನ ಹಾರ ಇಲ್ಲ. ಎಷ್ಟು ಭೂಮಿ ಇದೆ, ಅದನ್ನು ಹಂಚಿ ಎಂದು ಹೇಳುತ್ತಿದ್ದರು. ಅದರಲ್ಲೂ ಮೈಸೂರು ಜಿಲ್ಲೆಯಲ್ಲಿ ಬಿಳಿಗಿರಿರಂಗನಬೆಟ್ಟದಿಂದ ಹಿಡಿದು ಸುಮಾರು ಚಾಮರಾಜನಗರದ ತನಕ ಕೊಟ್ಟಂಥ ಲಕ್ಷಾಂತರ ಎಕರೆ ಭೂಮಿ ಇವತ್ತು ನನಗೆ ಜ್ಞಾಪಕಕ್ಕೆ ಬರುತ್ತದೆ. ಅವರು ಅದು ಯಾವುದನ್ನೂ ತೋರ್ಪಡಿಸಿಕೊಳ್ಳುತ್ತಾ ಇರಲಿಲ್ಲ, ಅವರ ಹೃದಯ ದೊಡ್ಡದಾಗಿತ್ತು. ಅವರ ಮೂರ್ತಿ ಚಿಕ್ಕದಾಗಿದ್ದರೂ, ಹೃದಯ ಮಾತ್ರ ದೊಡ್ಡದಾಗಿತ್ತು. ಇಂದು, ಅವರು ನಮ್ಮನ್ನು ಆಗಲಿದ್ದಾರೆ, ಅವರಿಂದ ನಾವು ಕಲಿಯಬೇಕಾದಂಥ ಪಾಠ ಬಹಳ ಇದೆ. ಬಹುಶಃ ಅದನ್ನು ನಾವು ಕಲಿತಿದ್ದೇ ಆದರೆ, ಅದೇ ಒಂದು ದೊಡ್ಡ ಸ್ಮಾರಕವಾಗುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ. ಅವರ ಜೊತೆಗೆ ಇನ್ನೂ 4 ಜನ ಮಹನೀಯರು ಸತ್ತಿದ್ದಾರೆ. ಅವರ ಜೊತೆಯಲ್ಲಿ ಒಡನಾಡಿಯಾಗಿ ಕೆಲಸ ಮಾಡತಕ್ಕಂಥ ಅವಕಾಶ ಸಿಕ್ಕಿತ್ತು. ಇವರೆಲ್ಲರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕೊಡಲೆಂದು ಪ್ರಾರ್ಥಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

+ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) : ಸನ್ಮಾನ್ಯ ಅಧ್ಯಕ್ಷರೇ, ನಾನು ಯೋಚನೆ ಮಾಡಿಕೊಂಡು ಕುಳಿತಿದ್ದೆ. ಡಿ.ವಿ.ಜಿ ಯವರ ಒಂದು ಕವನ ನೆನಪಿಗೆ ಬಂತು. ತೊಟ್ಟಿಲುಗಳೆಷ್ಟೋ ಮಸಣಗಳಷ್ಟು ಧರೆಯೊಳಗೆ, ತೊಟ್ಟಿಲಿಗೆ ಹಬ್ಬ, ಮಸಣವು ತಿಂದುತೇಗುತಿರು, ಆದರೆ ಹುಟ್ಟುವರೆಲ್ಲಾ ಸಾಯದೇ, ಹೊಸದಾಗಿ ಹುಟ್ಟುವರಿಗೆ ಎಡೆಯಲ್ಲೋ ಮಂಕುತಿಮ್ಮ. Birth is accidental, death is inevitable. ಒಂದು ಸಾರಿ ಅದೂ ಯೋಚನೆ ಮಾಡುತ್ತೇನೆ. ಸತ್ತವರ ಮನೆಯಲ್ಲಿ ಕೆಟ್ಟವರ್‍ಯಾರು ಎಂದು ನಮ್ಮ ಹಳ್ಳಿಕಡೆ ಗಾದೆ ಹೇಳುತ್ತಾರೆ. ದ.ರಾ. ಬೇಂದ್ರೆಯವರು ಒಂದು ಮಾತು ಹೇಳಿದ್ದಾರೆ. ನಾಲ್ಕು ಜನರ ಹೆಗಲ ಮೇಲೆ, ಮುಂದೆ ಹೆಣ, ಹಿಂದೆ ಹೆಣ್ಣು. ತೀರಾ ನೋವಾಗುವುದು ತಾಯಿಗೆ. ಇಷ್ಟಿದ್ದರೂ ಕೂಡ, ಕೆಲವರು ಸತ್ತಾಗ ನಾವು ಸಾರ್ವಜನಿಕವಾಗಿ ದುಃಖ ಹಂಚಿಕೊಳ್ಳುತ್ತೇವೆ. ಇದಕ್ಕೆ ಕಾರಣ ಏನು ? ಒಬ್ಬ ವ್ಯಕ್ತಿ ಸೃಷ್ಟಿಯಾಗಬೇಕಾದರೆ ಅಥವಾ ಕೆಲವಾರು ವ್ಯಕ್ತಿಗಳು ಸೃಷ್ಟಿಯಾಗಬೇಕಾದರೆ, ಕೆಲವಾರು ಕಾರಣಗಳು ಇರುತ್ತವೆ. ತಪಸ್ಸು ಮಾಡಬೇಕು. ಈಗ ಒಬ್ಬ ವಿಜ್ಞಾನಿಯಾಗುತ್ತಾನೆ, ತಪಸ್ಸು, ಒಬ್ಬ ಡಾಕ್ಟರು, ಸರ್ಜನ ಆಗುತ್ತಾನೆ, ತಪಸ್ಸು. ಒಬ್ಬ ಒಳ್ಳೆಯ ಫಿಜಿಷಿಯನ್ ಆಗುತ್ತಾನೆ, ತಪಸ್ಸು. ಒಬ್ಬ ಕವಿ ಆಗುತ್ತಾನೆ, ಅದೂ ಒಂದುರೀತಿಯಲ್ಲಿ ತಪಸ್ಸು. ಈ ರಾಜಕೀಯದಲ್ಲಿ ತಪಸ್ಸು ಮಾಡಿ, ಒಬ್ಬ ಜೆ.ಹೆಚ್. ಪಟೇಲ್‌ರು ಸೃಷ್ಟಿಯಾಗಬೇಕಾದರೆ, ಈ ದಶಕಗಳೇ ಬೇಕಾಗುತ್ತದೆ. ಎಲ್ಲರೂ ಜೆ.ಹೆಚ್.ಪಟೇಲ್ ರಾಗುವುದಕ್ಕಾಗುವುದಿಲ್ಲ. ಹೀಗೆ ಕೆಲವು ವ್ಯಕ್ತಿಗಳು ಸೃಷ್ಟಿಯಾಗಬೇಕಾದರೆ, ಅದೂ ಒಂದು ತಪಸ್ಸು ಇದ್ದಹಾಗೆ ಇರುತ್ತದೆ. ಅಂತಹವರಿಂದ ನಮಗೆ ಅನೇಕ ವಿಚಾರಗಳಲ್ಲಿ ಮಾರ್ಗದರ್ಶನವಾಗುತ್ತದೆ. ಅದಕ್ಕಾಗಿ ಸಾರ್ವತ್ರಿಕವಾಗಿ, ಅವರ ದುಃಖವನ್ನು ಭರಿಸತಕ್ಕ ಶಕ್ತಿಯನ್ನು ಕೊಡಲೆಂದು ಕೇಳಿಕೊಳ್ಳುತ್ತೇವೆ. ಅಂದರೆ ನಮ್ಮ ದುಃಖವನ್ನು ನಾವು ತಡೆದುಕೊಳ್ಳತಕ್ಕಂಥಾದ್ದು. ಒಂದು ವಿಶೇಷ ಏನೆಂದರೆ, ಸ್ವತಂತ್ರ ಬಂದಮೇಲೆ, ಅನೇಕ ರಾಜ್ಯಗಳಲ್ಲಿ, ತಮ್ಮ ತಮ್ಮ ರಾಜ್ಯಗಳನ್ನು ಬಿಟ್ಟು ಹೊರಗೆ ಗೊತ್ತಾಗತಕ್ಕಂಥ ಹೆಸರು ಮಾಡಿದವರು ಕೆಲವೇ ಜನ. ಕರ್ನಾಟಕದ ಬಗ್ಗೆ ಹೇಳುವುದಾದರೆ, ಆಡಳಿತ, ದಕ್ಷತೆ ಎಂದರೆ, ಒಂದೇ ಒಂದು ಹೆಸರು ನೆನಪಿಗೆ ಬರುವುದು, ಅದು ಕೆಂಗಲ ಹನುಮಂತಯ್ಯನವರು. ನಿಜಲಿಂಗಪ್ಪನವರೂ

ಪ್ರಾಮಾಣಿಕರು ಎಂದು ಎಲ್ಲರಿಗೂ ಗೊತ್ತು, ಅದರಲ್ಲೇನೂ ಅನುಮಾನವಿಲ್ಲ. ಗುಂಡೂರಾವ್ ದಕ್ಷತೆಯಿಂದ ಇದ್ದರು. ಎರಡಕ್ಕೂ ಹೆಸರು ಮಾಡಿದವರು ಹನುಮಂತಯ್ಯನವರು. ರಾಜ್ಯದ ಹೊರಗೆ ಅವರ ಹೆಸರು ಗೊತ್ತಾಯಿತು. ಕೇಂದ್ರದಲ್ಲಿದ್ದಾಗಲೂ ಒಳ್ಳೆಯ ಕೆಲಸ ಮಾಡಿ, ಪ್ರಾಮಾಣಿಕರು ಮತ್ತು ದಕ್ಷರು ಎನಿಸಿಕೊಂಡರು. ಹಾಗೆಯೇ ರಾಜ್ಯದಲ್ಲಿಯೂ ಅನಿಸಿಕೊಂಡರು. ಬಹುಶಃ ಇವರಾದ ಮೇಲೆ, ಈ ಎರಡನ್ನೂ ರೂಢಿಸಿ ಆ ದಾರಿಯಲ್ಲಿ ಹೋದವರು ಎಂದು ಹೇಳಿದರೆ, ವೀರೇಂದ್ರ ಪ್ರಾಟೀಲ್‌ರ ಹೆಸರು ಒಂದೇ ನನಗನ್ನಿಸತಕ್ಕಂಥಾದ್ದು. ನನಗೆ ಒಂದೆರಡು ನೆನಪು ಇದೆ. 1971ರ ವಿಚಾರವನ್ನು ಮಾನ್ಯ ಪಾಟಾಳ ನಾಗರಾಜ್‌ರೂ ಹೇಳಿದರು. ಪಾರ್ಲಿಮೆಂಟ್ ಚುನಾವಣೆಯಾಯಿತು, ಮತ್ತು ಅಸೆಂಬ್ಲಿ ಚುನಾವಣೆಯೂ ಆಯಿತು. ಹುಚ್ಚಮಾಸ್ತಿಗೌಡರು, ಘೋರ್ಪಡೆಯವರು ಕುಳಿತಿದ್ದಾರಲ್ಲ, ಅವರ ಪಕ್ಕದ ಸೀಟಿನಲ್ಲಿ ಕುಳಿತಿದ್ದರು. ಅವರೇ ವಿಪ್ ಈ ಕಡೆ. ರಾಜ್ಯಪಾಲರಿಗೆ ಇಲ್ಲಿಯೇ ಸಹಿ ಹಾಕಿಸಿದೆವು. ನಮಗೆ ಈ ಮುಖ್ಯಮಂತ್ರಿಯಲ್ಲಿ ವಿಶ್ವಾಸವಿಲ್ಲ ಎಂದು 119 ಸಹಿ ಹಾಕಿದರು. ಬಹುಶಃ 119ರಲ್ಲಿ ಬಂದವರು ಅವರ ಅಭಿಮಾನಿಗಳು. ಎಷ್ಟುಜನ ಸಹಿ ಹಾಕಿದ್ದಾರೆಂದು ನೋಡುವುದಕ್ಕೆ ಒಂದು ಸಹಿ ಪಟ್ಟಿಯಾಯಿತು. ಹೋಗಿ ಅಲ್ಲಿ ಕಿವಿಯಲ್ಲಿ ಹೇಳಿದರು, 119 ಜನರ ಸಹಿ ಆಗಿದೆ ಎಂದು. ಆಮೇಲೆ, ಏತಕ್ಕೋ ಹೋದಹಾಗೆ ಹೋದರು. ರಾಜಭವನಕ್ಕೆ ಹೋದರು ಎಂದು ಹೇಳಿ, ಅಧ್ಯಕ್ಷರಿಗೆ ಹೌಸ್‌ನ್ನು ಅಡ್ಜರ್ನ್ ಮಾಡಿ ಎಂದು ಹೇಳಿದರು. ಇದೊಂದು ಉದಾಹರಣೆ. ಏಕೆಂದರೆ ಅಷ್ಟೆತ್ತರಕ್ಕೆ ನಡೆದುಕೊಂಡರು. ನಾವು ಈಗ ಹಠ ಮಾಡುತ್ತೇವೆ. ಕಂಪ್ಲಿಟ್ ಮೆಜಾರಿಟಿ ಇಲ್ಲ ಎಂದು ಹೇಳಿದರೆ 8 ದಿವಸ ಕಾಲಾವಕಾಶ ಕೊಡಿ ಎಂದು ಕೇಳುತ್ತೇವೆ. ಹಾರ್ಸ್‌ಟ್ರೇಡ್ ಮಾಡುತ್ತೇವೆ, ಕೊಂಡುಕೊಂಡು ಬರುತ್ತೇವೆ, ಕೋಟಿಗಟ್ಟಲೆ ಕೊಡುತ್ತೇವೆಂದು ಹೇಳುತ್ತಾರೆ. ಆದರೆ, ಅವರು ಆವತ್ತು ಅದೇನನ್ನೂ ಕೇಳಲೇ ಇಲ್ಲ. ಹೊರಗಡೆ ಹೋಗಿ, ನಾನು ರಾಜಭವನಕ್ಕೆ ಹೋಗಿಬರುತ್ತೇನೆಂದು ಹೇಳಿ, ಹೌಸನ್ನು ಅಡ್ಜರ್ನ್ ಮಾಡಿಸಿ ಎಂದು ಹೇಳಿದರು. ಇದೊಂದು ಉದಾಹರಣೆ, ರಾಮರಾಯರು ಇಲ್ಲಿಯೇ ಕುಳಿತಿದ್ದರು. ಎಂ.ಪಿ. ಪ್ರಕಾಶ್‌ರವರು ಕುಳಿತುಕೊಳ್ಳುವ ಸೀಟಿನಲ್ಲಿ ಕುಳಿತುಕೊಳ್ಳುತ್ತಿದ್ದರು. ಮಧುಗಿರಿ ಗಲಾಟೆಯಾಯಿತು, ಅದರ ಬಗ್ಗೆ ಚರ್ಚೆ ನಡೆಯುತ್ತಿತ್ತು. ಚರ್ಚೆ ನಡೆಯುತ್ತಿದ್ದಾಗ ರಾಜೀನಾಮೆ ಕೊಟ್ಟು ಹೋದರು. ಗೋಪಾಲಗೌಡರ ಭಾಷಣಕ್ಕೆ ರಾಜೀನಾಮೆಯನ್ನೇ ಕೊಟ್ಟು ಹೊರಟುಹೋದರು. ಅದೇನು, ಮಧುಗಿರಿಯಲ್ಲಿ ಪೋಲೀಸ್ ಎಕ್ಸಸ್ ಎಂದು. ಇಲ್ಲಿ ಲಾಕಪ್ ಡೆತ್ ಬೇಕಾದಷ್ಟು ಆಗುತ್ತವೆ. ಯಾರೂ ಜವಾಬ್ದಾರಿ ಹೊತ್ತುಕೊಳ್ಳುವುದಿಲ್ಲ. ಮಂತ್ರಿಗಳಿಗೆ ಹೊಡೆದರೂ ಕೇಳುವವರಿಲ್ಲ. ನಿನ್ನೆ ಮಾಜಿಮಂತ್ರಿ ಜೀವಿಜಯ ಅವರಿಗೆ ಆಗುವಷ್ಟು ಜಾಡಿಸಿದ್ದಾರೆ, ಯಾರು ಕೇಳುತ್ತಾರೆ. ಇದು ಮೌಲ್ಯಗಳು ಹೇಗೆ ವ್ಯತ್ಯಾಸಗಳಾಗುತ್ತಾ ಇವೆ ಎಂದು ಹೇಳುತ್ತಿದ್ದೇವೆ. ಈಗ ನಾನೇನು ಹೇಳುತ್ತೇನೆಂದರೆ, ನಾವು ಇಂತಹವರ ಸಂತಾಪ ಸೂಚನೆ ಮಾಡುತ್ತೇವೆ ಮತ್ತೆ ಶ್ರದ್ಧಾಂಜಲಿ ಅರ್ಪಿಸುವುದು ಎಂದರೆ ಏನು. ಏನಾದರೂ ನಾವು ಅವರಿಂದ ಕಲಿತುಕೊಳ್ಳಬೇಕಲ್ಲ. ನೀವು ಕಲಿತುಕೊಳ್ಳಬೇಕು, ನಾವೂ ಕಲಿತಕೊಳ್ಳಬೇಕು. ಸರ್ಕಾರ ನಡೆಸುವವರೂ ಕಲಿತುಕೊಳ್ಳಬೇಕು, ವಿರೋಧಪಕ್ಷದಲ್ಲಿರುವವರೂ ಕಲಿತುಕೊಳ್ಳಬೇಕು. ನೋಡಿ ನಾವು 8 ದಿವಸ ಕುಳಿತಿದ್ದೆವು, ಅದು ಇನಸಿಡೆಂಟಲಿ. ಲ್ಯಾಂಡ್ ರೆವಿನ್ಯೂ ಆಕ್ಟ್‌ಗೆ ಒಂದು ತಿದ್ದುಪಡಿ ತಂದಿದ್ದೆ. ಪ್ರೈವೇಟ್ ಬಿಲ್, ಅದರ ಮೇಲೆ ಗಲಾಟೆಯಾಯಿತು. ನಾವು ೮ ದಿವಸ ಕುಳಿತೆವು. ಎಲ್ಲಾ ಹಿರಿಯರೂ ಇದ್ದರು. ಆಮೇಲೆ ಎ.ಸಿ. ಆಫ್ ಮಾಡಿದರು. ಅದಾಯಿತು, ಇದಾಯಿತು. ಕೆಲವರು ಖಾಯಿಲೆಯೂ ಬಿದ್ದರು;

ಆಸ್ಪತ್ರೆಗೆ ಎಳೆದುಕೊಂಡು ಹೋದರು, ಊಟ ಕೊಡಿಸಲಿಲ್ಲ. ಊಟ ತರುವುದನ್ನೂ ತಪ್ಪಿಸಿದರು. ಕೊನೆಗೆ ವಾಟಾಳ್‌ರು ಯಾರಿಗೋ ಫೋನ್ ಮಾಡಿ, ಹಗ್ಗದಲ್ಲಿ ನೀರು ಸೇದುವಹಾಗೆ ಊಟ ತರಿಸಿಕೊಂಡು ತಿನ್ನುತ್ತಿದ್ದರು. ಹೀಗೆ ಏನೇನೋ ಆಯಿತು. ಅವು, ನಮಗೆ ಹಳೆಯ ನೆನಪುಗಳು. ಈ ಸ್ಮಾರಕದ ಬಗ್ಗೆ ನನಗನಿಸುತ್ತದೆ. ನಾವು ಒಬ್ಬ ವಿಜ್ಞಾನಿಯನ್ನು ನೆನೆದುಕೊಳ್ಳುತ್ತೇವೆ. ಆದರೆ, ರಾಜಕೀಯದಲ್ಲಿಯೂ ಕೆಲವು ಮುತ್ಸದ್ದಿಗಳನ್ನು ನೆನೆದುಕೊಳ್ಳುವುದಕ್ಕೆ ಏನು ಕಷ್ಟ? ಅವರೂ ಒಂದು ಆಸ್ತಿಯಲ್ಲವೆ? ದೊಡ್ಡವರು ಸತ್ತಾಗ, ಹೆಸರು ಮಾಡಿದವರು ಸತ್ತಾಗ ನಾವು ಏಕೆ ಅಳುತ್ತೇವೆಂದರೆ, ಸಮಾಜ ಒಂದು ಆಸ್ತಿಯನ್ನು ಕಳೆದುಕೊಂಡಹಾಗೆ. ಬಹುಶಃ ಇನ್ನೊಂದು 4 ವರ್ಷ ಅಥವಾ 10 ವರ್ಷ ಇದ್ದರೆ, ಅವರಿಂದ ನಮಗೆ ಇನ್ನೂ ಏನೇನೂ ಲಾಭ ಸಿಗುತಿತ್ತು. ಅವರು ಒಂದು ಆಸ್ತಿ ರೂಪಿತವಾಗಿದ್ದಹಾಗೆ. ಈ ದೃಷ್ಟಿಯಲ್ಲಿ ಸ್ಮಾರಕ ಮಾಡುವ ವಿಚಾರವನ್ನು ಮುಖ್ಯಮಂತ್ರಿಗಳು ಗಹನವಾಗಿ ಯೋಜನೆ ಮಾಡಬೇಕು. ಇದೊಂದೇ ವಿಚಾರವೆಂದಲ್ಲ, ಏನಾದರೂ ರೂಪವನ್ನು ಕೊಟ್ಟು, ಈ ರಾಜಕೀಯ ಮುತ್ಸದ್ದಿಗಳು ಸೃಷ್ಟಿಯಾಗಬೇಕಿದ್ದರೆ ಬಹಳ ಕಷ್ಟಪಟ್ಟಿರುತ್ತಾರೆ. ಆದ್ದರಿಂದ ಇದೆಲ್ಲಾ ಮುಂದಿನ ಪೀಳಿಗೆಗೆ ಬೇಕಾಗುತ್ತದೆ. ಈ ಕಾರಣಕ್ಕಾಗಿ ಅದನ್ನು ಯೋಚನೆ ಮಾಡಿ ಎಂದು ಒಂದು ಸಲಹೆಯನ್ನು ಕೊಡುತ್ತೇನೆ. ಆಮೇಲೆ ರಾಜತಿಮ್ಮಯ್ಯನವರಿಗೆ ರಾಜ್ ಎಂದು ಏತಕ್ಕೆ ಹೆಸರು ಬಂತು ಎಂದರೆ, ಇನ್ಷಿಯಲ್ ಹೊರಟು ಹೋಯಿತು ರಾಜ್ ಉಳಿದುಕೊಂಡಿತು. ಎಲ್ಲರ ಗಲ್ಲವನ್ನು ಮುಟ್ಟಿ ಏನೊ ರಾಜ ಎಂದು ಕರೆಯುತ್ತಿದ್ದರು. ಹೆಣ್ಣುಮಕ್ಕಳನ್ನು ಕೂಡ ಗಲ್ಲ ಮುಟ್ಟಿಕೊಂಡು ಏನಪ್ಪ ರಾಜ್ ಎಂದು ಹೇಳುತ್ತಿದ್ದರು. ಅವರು ಬಹಳ ಸಲಿಗೆಯಿಂದ, ಆತ್ಮೀಯವಾಗಿ, ಸರಸವಾಗಿ ನಡೆದುಕೊಳ್ಳುತ್ತಿದ್ದರು, ಯಾರೂ ತಪ್ಪು ತಿಳಿದುಕೊಳ್ಳುತ್ತಿರಲಿಲ್ಲ. ಇಂಥವರೆಲ್ಲಾ ನಮ್ಮನ್ನು ಆಗಲಿದ್ದಾರೆ, ಅವರೆಲ್ಲರ ಆತ್ಮಕ್ಕೆ ದೇವರು ಶಾಂತಿಯನ್ನು ಕೊಡಲೆಂದು ಹಾರೈಸುತ್ತೇನೆ. ಆಮೇಲೆ ಭಾಸ್ಕರ ನಾಯ್ಡುರವರು, ನನ್ನ ಸ್ನೇಹಿತರಾಗಿದ್ದವರು, ನನಗೆ ಬಹಳ ಒಳ್ಳೆಯ ದೋಸ್ತು, ಒಂದು ಸಾರಿ ಅಷ್ಟೇ ವಿರೋಧವೂ ಆಗಿದ್ದರು. ಆದರೂ ಕೂಡ ಬಳ್ಳಾರಿಗೆ ಹೋದರೆ, ನಮ್ಮ ವಿರೋಧವಾಗಿದ್ದಾಗ ಇರಲಿ, ಪರವಾಗಿದ್ದಾಗ ಇರಲಿ ನಮಗೆ ಊಟ ಉಪಚಾರವೆಲ್ಲಾ ಅವರ ಮನೆಯಲ್ಲೇ ಆಗಬೇಕು, ನಮ್ಮದು ಆ ರೀತಿಯ ವಿಶ್ವಾಸ. ರಾಜಕೀಯವಾಗಿ ವ್ಯತ್ಯಾಸಗಳಿದ್ದರೂ ಕೂಡ ಊಟ ಉಪಚಾರಗಳೆಲ್ಲಾ ಅವರ ಮನೆಯಲ್ಲಿ ನಮಗೆ ಆಗಬೇಕು, ನಾವು ಅಲ್ಲೇ ತಂಗಬೇಕು. ನಾವು ಬಳ್ಳಾರಿಗೆ ಹೋದರೆ ಅವರ ಆರೋಗ್ಯ ಸರಿಯಾಗಿ ಇರುವವರೆಗೆ ನಮಗೆ ಟಿ.ಬಿ.ಯಲ್ಲಿ ಇರುವುದಕ್ಕೆ ಬಿಡುತ್ತಿರಲಿಲ್ಲ. ಇನ್ನೂ ಶ್ರೀಮತಿ ಲೀಲಾವತಿ ವೆಂಕಟೇಶ್ ಮಾಗಡಿಯವರು, ಇವರೆಲ್ಲಾ ನಿಧನರಾಗಿದ್ದಾರೆ. ಲೀಲಾವತಿ ವೆಂಕಟೇಶ್ ಮಾಗಡಿಯವರು ನನಗೆ ಕೆ.ಎಫ್. ಪಾಟೀಲ್‌ರ ಮೂಲಕ ನನ್ನ ಜೊತೆ ಅವರ ಹೆಚ್ಚಿನ ಸಂಪರ್ಕ ಹೊಂದಿದ್ದರು ಎಸ್. ಹಮೀದ ಷಾ, ಪಾಪ ಅವರು ಆತ್ಮೀಯರಾಗಿದ್ದರು, ಇವರ ಸಂಸಾರಗಳಿಗೆ ಮುಖ್ಯವಾಗಿ ದೇವರು ಈ ಅಗಲಿಕೆಯನ್ನು ಭರಿಸತಕ್ಕಂಥ ಶಕ್ತಿಯನ್ನು ಕೊಡಲಿ ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಬಿ. ಮುನಿಯಪ್ಪ (ಗಾಂಧಿನಗರ) : ಸನ್ಮಾನ್ಯ ಅಧ್ಯಕ್ಷರೆ, ಈ ಸದನದ ಸದಸ್ಯರಾಗಿದ್ದಂಥ ಭಾಸ್ಕರ್ ನಾಯ್ಡುರವರು, ಎಸ್. ಹಮೀದಷಾರವರು, ಲೀಲಾದೇವಿ ವೆಂಕಟೇಶ್ ಮಾಗಡಿಯವರು ಮತ್ತು ರಾಜ ತಿಮ್ಮಯ್ಯನವರು ಹಾಗೂ ಕರ್ನಾಟಕದ ಹೆಮ್ಮೆಯ ಪುತ್ರರಾಗಿದ್ದಂತ ವೀರೇಂದ್ರಪಾಟೀಲ್‌ರವರ

ಕಣ್ಮರೆಗೆ ತಾವು ತಂದಿರುವ ಸಂತಾಪಸೂಚಕ ನಿರ್ಣಯಕ್ಕೆ ನಾನು ಕೂಡ ಬೆಂಬಲಿಸುತ್ತೇನೆ. ಇವತ್ತು ನಾವು ಸಾಕಷ್ಟು ಅವರ ದೊಡ್ಡತನ ಬಗ್ಗೆ ಹೇಳುವುದಾದರೆ, ಸನ್ಮಾನ್ಯ ವೀರೇಂದ್ರಪಾಟೀಲರವರು ಕರ್ನಾಟಕದಲ್ಲಿ ಒಳ್ಳೆಯ ಆಡಳಿತವನ್ನು ನೀಡಿ, ನಮ್ಮ ರಾಜ್ಯದ ಮುಖ್ಯಮಂತ್ರಿಗಳಾಗಿ, ಕೇಂದ್ರದ ಸಚಿವರಾಗಿ ಒಳ್ಳೆಯ ಆಡಳಿತವನ್ನು ನೀಡಿದ್ದಾರೆ. ಅವರು ಹೈದರಬಾದ್‌ನ ಉಸ್ಮಾನಿಯ ವಿಶ್ವವಿದ್ಯಾಲಯದಲ್ಲಿ ಓದಿದವರು ಎಂದು ನಾನು ಕೇಳಿದ್ದೆ. ಸಾವಿರದ ಒಂಭೈನೂರ ಅರವತ್ತೊಂಭತ್ತರಲ್ಲಿ ಶಿವಾಜಿನಗರ ಕ್ಷೇತ್ರದಲ್ಲಿ ಒಬ್ಬ ಅಬ್ದುಲ್ ಗಫಾರ್ ಎನ್ನುವವರು ರಾಜ್ಯ ಸಚಿವರಾಗಿದ್ದರು. ಅವರು ಮರೆಯಾದ ಮೇಲೆ ಶಿವಾಜಿನಗರಕ್ಷೇತ್ರದಲ್ಲಿ ಉಪ ಚುನಾವಣೆ ಬಂತು. ಆ ಸಂದರ್ಭದಲ್ಲಿ ಸಾವಿರದ ಒಂಭೈನೂರ ಅರವತ್ತೊಂಭತ್ತರಲ್ಲಿ ಬೆಂಗಳೂರಿನ ಗಾಜಿನ ಮನೆಯಲ್ಲಿ ಕಾಂಗ್ರೆಸ್ ಪಕ್ಷ ಒಡೆದು ಎರಡು ಪಕ್ಷಗಳಾಗಿ ಹೋಳಾದ ನಂತರ, ಆಡಳಿತ ಕಾಂಗ್ರೆಸ್ ಹಾಗೂ ಸಂಸ್ಥಾ ಕಾಂಗ್ರೆಸ್ ಎಂದು ಎರಡು ಗುಂಪುಗಳಾಗಿ ಪರಿವರ್ತನೆಯಾದ ಮೇಲೆ ಆ ಶಿವಾಜಿನಗರದ ಉಪಚುನಾವಣೆ ಹಾಗೂ ಹೊಸಪೇಟೆಯ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಪ್ರಪ್ರಥಮವಾಗಿ ಹಸು ಕರುವಿನ ಗುರುತಿನ ಮೂಲಕ ಸ್ಪರ್ಧಿಸಿದಂಥ ಸಂದರ್ಭದಲ್ಲಿ ವೀರೇಂದ್ರಪಾಟೀಲರು ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದರು. ಅವತ್ತು ಆ ಶಿವಾಜಿನಗರ ಕ್ಷೇತ್ರದ ಉಪ ಚುನಾವಣೆಯಲ್ಲಿ ಸಂಸ್ಥಾ ಕಾಂಗ್ರೆಸ್‌ನ ಅಭ್ಯರ್ಥಿಯಾಗಿ ಒಬ್ಬ ನಿವೃತ್ತ ಐಎಎಸ್ ಅಧಿಕಾರಿಯನ್ನು ನಿಲ್ಲಿಸಿ, ಆಡಳಿತ ಪಕ್ಷದ ಅಭ್ಯರ್ಥಿಯಾಗಿ ಶ್ರೀ ಎಸ್. ಹಮೀದ್‌ಷಾರವರು ನಿಂತು, ನಮ್ಮ ಪಕ್ಷದಿಂದಲೂ ಕೂಡ ಒಬ್ಬ ಅಭ್ಯರ್ಥಿಯನ್ನು ನಿಲ್ಲಿಸಿ ಆ ಚುನಾವಣೆಯ ಬಹಿರಂಗ ಸಭೆಯಲ್ಲಿ ಭಾಷಣ ಮಾಡುವ ಸಂದರ್ಭದಲ್ಲಿ ಸನ್ಮಾನ್ಯ ವೀರೇಂದ್ರ ಪಾಟೀಲ್‌ರವರು ಆ ರಸಲ್ ಮಾರ್ಕೆಟ್ ವೃತ್ತದಲ್ಲಿ ಮಾತನಾಡುತ್ತಿದ್ದರು. ಯಾವುದೇ ರಾಜಕೀಯದ ಸಭೆ ಸಮಾರಂಭಗಳು ಆ ವೃತ್ತದಲ್ಲಿ ನಡೆಯುತ್ತಿತ್ತು. ಅವತ್ತು ಅವರ ಸಭೆಗೆ ಬೃಹತ್ ಜನಸಂದಣಿ ಸೇರಿತ್ತು, ಆವತ್ತು ಅವರು ಮಾತನಾಡಿದ ಭಾಷೆ ಕನ್ನಡ ಅಥವಾ ಅಂಗ್ಲ ಭಾಷೆಯಲ್ಲ, ಸಂಪೂರ್ಣವಾಗಿ ತಮ್ಮ ಭಾಷಣವನ್ನು ಉರ್ದು ಭಾಷೆಯಲ್ಲಿ ಮಾಡಿ, ಆ ಸಭೆಯಲ್ಲಿದ್ದು ಆಲಿಸಿದಂಥ ಜನ ಇವರು ಕನ್ನಡಿಗರಾ ಎಂದು ಹೇಳುವುದಕ್ಕೆ ಸಾಧ್ಯವಿಲ್ಲದಿರುವ ಮಟ್ಟಿಗೆ ಒಂದು ಸೊಗಸಾಗಿ, ಸುಂದರವಾಗಿ ಪ್ರತಿಯೊಬ್ಬರೂ ಕೇಳುವ ರೀತಿಯಲ್ಲಿ ಉರ್ದು ಭಾಷೆಯಲ್ಲಿ ಭಾಷಣವನ್ನು ಮಾಡಿದರು. ಮಾತೃಭಾಷೆ ಉರ್ದು ಆಗಿರುವವರೂ ಕೂಡ ಅಷ್ಟು ಸೊಗಸಾಗಿ ಮಾತನಾಡುವುದಕ್ಕೆ ಸಾಧ್ಯವಿಲ್ಲವೇನೊ ಎನ್ನುವ ಮಟ್ಟಿಗೆ ಅಲ್ಲಿ ಸೇರಿದ್ದ ಜನರು ವೀರೇಂದ್ರ ಪಾಟೀಲ್‌ರವರ ಭಾಷಣವನ್ನು ಕೇಳಿದರು. ಸಾವಿರದ ಒಂಭೈನೂರ ಎಪ್ಪತ್ತೊಂದರ ಲೋಕಸಭೆ ಚುನಾವಣೆ, ಸಾವಿರದ ಒಂಭೈನೂರ ಎಪ್ಪತ್ತೆರಡರ ಶಾಸನ ಸಭೆಯ ಚುನಾವಣೆಯ ಸಂದರ್ಭದಲ್ಲಿ ಪ್ರತಿಯೊಂದು ಸಂದರ್ಭದಲ್ಲೂ ಕೂಡ ಅವರು ನೆಲ ಜಲದ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದರು. ಈ ಎರಡು ಚುನಾವಣೆಗಳ ಪೋಸ್ಟರ್‌ಗಳಲ್ಲಿ ಕರ್ನಾಟಕದ ನೆಲವನ್ನು, ಜಲವನ್ನು, ಕಾಪಾಡಲು ಸಂಸ್ಥಾ ಕಾಂಗ್ರೆಸ್‌ಗೆ ಮತವನ್ನು ನೀಡಿ ಎನ್ನುವ ಪೋಸ್ಟರಗಳನ್ನು ಅಂಟಿಸುವಂಥ ಸಂದರ್ಭದಲ್ಲಿ ಆಡಳಿತ ಕಾಂಗ್ರೆಸ್ ಪಕ್ಷದಿಂದ ಟೀಕೆ ಕೂಡ ಬಂತು. ಇವರಿಗೆ ನೆಲ, ಜಲ ಎನ್ನುವ ಈ ಎರಡು ವಿಷಯಗಳು ಬಿಟ್ಟರೆ ಬೇರೇನೂ ಇಲ್ಲವೆನ್ನುವ ಟೀಕೆ ಬಂದರೂ ಕೂಡ ಈ ನೆಲ ಜಲದ ಬಗ್ಗೆ ಅಪಾರವಾದ ಗೌರವವನ್ನು ಯಾವುದೇ ಸಂದರ್ಭದಲ್ಲಿ ಅವರು ರಾಷ್ಟ್ರೀಯ ಪಕ್ಷದಲ್ಲಿದ್ದರೂ ಕೂಡ, ಅವರ ನಾಯಕರುಗಳ ವಿರುದ್ಧ, ಅದು ಹೇಮಾವತಿ ಅಣೆಕಟ್ಟನ್ನು ಕಟ್ಟುವುದಾಗಿರ

ಬಹುದು, ಯಾವುದೇ ವಿಷಯವಾಗಿದ್ದರೂ ಕೂಡ ಅವರು ಆ ಅಣೆಕಟ್ಟೆಯನ್ನು ಕಟ್ಟುವುದಾಗಿರಬಹುದು, ಯಾವುದೇ ವಿಷಯವಾಗಿದ್ದರೂ ಕೂಡ ಅವರು ಈ ರಾಜ್ಯದ ಹಿತವನ್ನು ಕಾಪಾಡುವಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಿದ್ದರು. ಅಂಥ ಒಬ್ಬ ಮಹಾನ್ ವ್ಯಕ್ತಿ ನಮ್ಮಿಂದ ಕಣ್ಮರೆಯಾಗಿದ್ದಾರೆ, ಅವರಿಗೆ ತಾವು ತಂದಿರತಕ್ಕಂಥ ಸಂತಾಪ ಸೂಚಕ ನಿರ್ಣಯ ಏನಿದೆ ಅದನ್ನು ಬೆಂಬಲಿಸುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಅನೇಕ ನಾಯಕರುಗಳು ಸ್ಮಾರಕದ ಬಗ್ಗೆ ಮಾತನಾಡಿದ್ದಾರೆ. ನಾನಾದರೂ ಕೂಡ ಸದನದ ಸಮಿತಿಯನ್ನು ಶೀಘ್ರವಾಗಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಚಿಸಬೇಕು ಎಂದು ಹೇಳುತ್ತೇನೆ. ಇವತ್ತು ಬೆಂಗಳೂರು ಮಹಾನಗರ ಪಾಲಿಕೆಯಲ್ಲ ಬೀದಿಗಳಿಗೆಲ್ಲಾ ಎಷ್ಟೋ ಜನರ ಹೆಸರುಗಳನ್ನಿಟ್ಟಿ ರುವುದನ್ನು ನೋಡಿರುತ್ತೇವೆ. ಆ ರೀತಿಯಲ್ಲದೆ, ಹೊರರಾಜ್ಯಗಳಿಂದ, ಹೊರದೇಶಗಳಿಂದ ಯಾರಾದರೂ ನಮ್ಮರಾಜ್ಯಕ್ಕೆ ಬಂದರೆ ಕರ್ನಾಟಕ ರಾಜ್ಯದಲ್ಲಿ ವೀರೇಂದ್ರಪಾಟೀಲ ಎನ್ನುವ ಒಬ್ಬ ಮುಖ್ಯಮಂತ್ರಿಗಳಿದ್ದರು, ಅವರ ಕಾಲದಲ್ಲಿ ಇಂಥ ಒಳ್ಳೆಯ ಆಡಳಿತವನ್ನು ಕೊಟ್ಟರು, ಅಂಥ ವ್ಯಕ್ತಿಯ ಸ್ಮಾರಕ ಎಲ್ಲಿದೆ ಎಂದು ಹುಡುಕಿಕೊಂಡು ಹೋಗುವ ರೀತಿಯಲ್ಲಿ ಅವರ ಸ್ಮಾರಕವನ್ನು ಮಾಡುವುದಕ್ಕೆ ಸದನದ ಸಮಿತಿಯನ್ನು ರಚಿಸಬೇಕು ಎಂದು ನಾನು ಹೇಳುತ್ತೇನೆ. ಅದೇ ರೀತಿಯಾಗಿ ಅನೇಕ ಜನ ಶಾಸಕರು ಕಣ್ಮರೆಯಾಗಿದ್ದಾರೆ, ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದು ಸೂಕ್ತವೆಂದು ನಾನು ತಿಳಿದು ಕೊಂಡಿದ್ದೇನೆ. ಇವತ್ತು ಯಾರೇ ಈ ಸದನದ ಸದಸ್ಯರಾಗಿದ್ದರೆ, ಅವರು ಮರಣಹೊಂದಿದರೆ, ಅವರ ಬಗ್ಗೆ ಸಂತಾಪ ಸೂಚಿಸಿ, ಇಲ್ಲಿ ನಿರ್ಣಯವನ್ನು ಮಂಡಿಸಿ ಮೌನವನ್ನು ಆಚರಣೆ ಮಾಡಿದರೆ ನಮ್ಮ ಕರ್ತವ್ಯ ಅಲ್ಲಿಗೆ ಮುಗಿಯುತ್ತದೆಂದು ನಾನು ತಿಳಿದುಕೊಂಡಿಲ್ಲ. ಇವತ್ತು ಎಷ್ಟೋ ಜನರು ಈ ರಾಜ್ಯದಲ್ಲಿ ಶಾಸಕರಾಗಿ ಕಣ್ಮರೆಯಾದ ಮೇಲೆ, ಇವತ್ತು ಅವರ ಕುಟುಂಬವರ್ಗದವರು ಬೀದಿಪಾಲಾಗಿದ್ದಾರೆ. ಉದಾಹರಣೆಗೆ ನಾನು ತಮ್ಮ ಬಳಿ ಹಲವಾರು ಹೆಸರುಗಳನ್ನು ಪ್ರಸ್ತಾಪ ಮಾಡಿದ್ದೆ. ಸಾವಿರದ ಒಂಭೈನೂರ ಎಪ್ಪತ್ತೆಂಟರಲ್ಲಿ ನನ್ನ ಗಾಂಧಿನಗರ ಕ್ಷೇತ್ರದಲ್ಲಿ ಒಬ್ಬ ಶಾಸಕರಾಗಿ, ದೊಡ್ಡ ಕೈಗಾರಿಕೆಯನ್ನು ನಡೆಸಿ, ಲಕ್ಷಾಂತರ ರೂಪಾಯಿಗಳ ದಾನಧರ್ಮಗಳನ್ನು ಮಾಡಿ ರಾಜಕೀಯದಲ್ಲಿ ಮೆರೆದಂಥ ವ್ಯಕ್ತಿಯ ಮಡದಿ ಒಮ್ಮೆ ನನ್ನ ಬಳಿ ಬಂದು ಎಪ್ಪತ್ತೈದು. ರೂಪಾಯಿಗಳ ವಿಧವಾ ಮಾಸಾಶನವನ್ನು ನನಗೆ ಮಾಡಿಸಿಕೊಡಬೇಕೆಂದರು. ನನ್ನನ್ನು ಕೇಳುವಾಗ ನಾನು ಆ ವಿಚಾರವನ್ನು ರಾಜ್ಯದ ಮುಖ್ಯಮಂತ್ರಿಗಳು ಹಾಗೂ ಹಲವಾರು ನಾಯಕರುಗಳ ಗಮನಕ್ಕೆ ತಂದಿದ್ದೇನೆ. ಈ ರೀತಿಯಾಗಿ ಶಾಸಕರುಗಳಾಗಿ ಸಾರ್ವಜನಿಕ ಜೀವನದಲ್ಲಿ ದುಡಿದು ಮಡಿದಂಥವರ ಕುಟುಂಬಗಳು ಬೀದಿಪಾಲಾಗುವಾಗ ಅದರಲ್ಲಿ ನಮ್ಮ ಕರ್ತವ್ಯವೂ ಕೂಡ ಇದೆ ಎಂದು ತಿಳಿದು ಕೊಳ್ಳಬೇಕು. ನಾವೆಲ್ಲಾ ಬೆಂಗಳೂರು ಮಹಾನಗರಪಾಲಿಕೆಯ ಸದಸ್ಯರಾಗಿದ್ದಾಗ ಯಾರಾದರೂ ಪಾಲಿಕೆಯ ಸದಸ್ಯರು ಕಣ್ಮರೆಯಾದರೆ ನಮ್ಮ ಒಂದು ಮಾಸಾಶನವನ್ನು, ಗೌರವಧನವನ್ನು, ಲಕ್ಷಾಂತರ ರೂಪಾಯಿಗಳನ್ನು ಶೇಖರಣೆ ಮಾಡಿ ಅವರಿಗೆ ಕೊಟ್ಟು ಸಹಕಾರ ಮಾಡುತ್ತಿದ್ದೆವು. ಆ ರೀತಿ ಹಲವಾರು ಜನ ಮಾಜಿ ಶಾಸಕರುಗಳ ಕುಟುಂಬಗಳು ಇವತ್ತು ಬೀದಿಪಾಲಾಗಿದೆ, ಅಂಥವರಿಗೆ ನಾವು ಯಾವುದಾದರೂ ಸಹಾಯ ಮಾಡುವಂಥ ಯೋಜನೆಯನ್ನು ಸರ್ಕಾರದ ಸನ್ಮಾನ್ಯ ಮುಖ್ಯಮಂತ್ರಿಗಳು, ನಾವು ತೆಗೆದುಕೊಳ್ಳಬೇಕೆನ್ನುವ ಮಾತನ್ನು ಹೇಳಿ ಈ ಒಂದು ಸಂತಾಪ ಸೂಚಕ ನಿರ್ಣಯವನ್ನು ಬೆಂಬಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀಮತಿ . ಲೀಲಾದೇವಿ ಆರ್. ಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಪ್ರವಾಸೋದ್ಯಮ ರಾಜ್ಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಹಿರಿಯ ನಾಯಕರು ಹಾಗೂ ನಮ್ಮನ್ನು ಅಗಲಿ ಹೋಗಿರುವ ವೀರೇಂದ್ರ ಪಾಟೀಲರು ಹಾಗೂ ಇತರರ ಜೊತೆಯಲ್ಲಿ ಅನೇಕ ವರ್ಷ ತಮ ಸಂಪರ್ಕವನ್ನು ಇಟ್ಟುಕೊಂಡು ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಕೆಲಸ ಮಾಡಿರುವವರೆಲ್ಲಾ ಮಾತನಾಡಿದ್ದಾರೆ. ನಾನೂ ಕೂಡ ವೀರೇಂದ್ರ ಪಾಟೀಲ್‌ರವರ ನಿಕಟವರ್ತಿಯಾಗಿ ಕೆಲವು ದಿವಸಗಳ ಕಾಲ ಕೆಲಸ ಮಾಡಿದ್ದೇನೆ ಎನ್ನುವುದನ್ನು ಇಲ್ಲಿ ಜ್ಞಾಪಿಸಿಕೊಳ್ಳುತ್ತಿದ್ದೇನೆ. ಅವರು ನಮ್ಮ ಪಕ್ಷದ ಅಧ್ಯಕ್ಷರಾಗಿದ್ದಾಗ ನಾನು ಸಂಚಾಲಕಿಯಾಗಿ ಕೆಲಸ ಮಾಡಿದಾಗ, 1988ರಲ್ಲಿ ಆವಾಗಲಿ ಹೋರಾಟ ಮಾಡಿ ಮಹಿಳೆಯರಿಗೆ ಹೆಚ್ಚಿನ ಸ್ಥಾನಮಾನಗಳನ್ನು ಕೊಡಬೇಕು, ವಿಧಾನಸಭೆಯಲ್ಲಿ ಹೆಚ್ಚಿನ ಸ್ಥಾನಗಳನ್ನು ಕೊಡಬೇಕೆಂದಾಗ, ಆಗ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ನಮ್ಮ ಪಕ್ಷದಲ್ಲಿದ್ದರು, ಇವರು ಮತ್ತು ನಾವು ಸಂಜೆ ಅವರ ಮನೆಗೆ ಹೋದೆವು. ನೀವು ಬೆಂಗಳೂರಿನಲ್ಲಿ ಕುಳಿತುಕೊಂಡರೆ ಆಗುವುದಿಲ್ಲ, ನೀವು ನಾಳೆ ದೆಹಲಿಗೆ ಬನ್ನಿ ಅಲ್ಲಿ ತೀರ್ಮಾನ ಮಾಡೋಣವೆಂದು ತಮ್ಮ ಜೊತೆಯಲ್ಲಿಯೇ ಆ ಫ್ಲೈಟ್‌ನಲ್ಲಿ ಕರೆದುಕೊಂಡು ಹೋಗಿ, ಅಂದು ಸುಮಾರು ಒಂಭತ್ತರಿಂದ ಹತ್ತು ಜನರಿಗೆ ಮಹಿಳಾ ಅಭ್ಯರ್ಥಿಗಳಾಗುವ ಅವಕಾಶವನ್ನು ಮಾಡಿಕೊಟ್ಟರು, ನಾನು ಅದನ್ನು ಮರೆಯುವುದಿಲ್ಲ. ಬಹುಶಃ ರಾಜಕೀಯದಲ್ಲಿ ವೀರೇಂದ್ರ ಪಾಟೀಲರು ಸನ್ಮಾನ್ಯ ನಿಜಲಿಂಗಪ್ಪನವರಿಗೆ ಬಹಳ ಹತ್ತಿರದವರಾಗಿದ್ದರೆ ನ್ನುವುದು ನಮಗೆಲ್ಲರಿಗೂ ಗೊತ್ತಿದೆ. ಒಂದು ಸಾರಿ ನಿಜಲಿಂಗಪ್ಪನವರಿಗೆ ಹಾಗೂ ವೀರೇಂದ್ರ ಪಾಟೀಲರ ನಡುವೆ ವೈಮನಸ್ಸು ಬಂದಾಗ ಅವರನ್ನು ಹತ್ತಿರ ತರುವುದಕ್ಕೆ ನಾನು ಬಹಳ ಪ್ರಯತ್ನ ಮಾಡಿದೆ, ಅದನ್ನು ನಾನು ಜ್ಞಾಪಿಸಿಕೊಳ್ಳುತ್ತಿದ್ದೇನೆ, ತಾವು ಮಗನಂತೆ ಇದ್ದೀರಿ ಅವರು ತಂದೆಯಂತೆ ಇದ್ದಾರೆ ತಾವು ಒಟ್ಟಿಗೆ ಸೇರಿ ಮಾತನಾಡಬೇಕೆಂದಾಗ, ಅವರು, ನೀನು ಇವತ್ತಿನ ದಿವಸ ಕರೆಯುತ್ತಿದ್ದಿಯಮ್ಮ ನಾನು ಬರುತ್ತೇನೆ, ಅವರ ಆರೋಗ್ಯ ಸರಿಯಿಲ್ಲ ನೋಡುವುದಕ್ಕೆ ಬನ್ನಿ ಎಂದು ನಾನು ವಸಂತನಗರದಲ್ಲಿರುವ ನಿಜಲಿಂಗಪ್ಪನವರ ಮಗನ ಮನೆಗೆ ಸದಾಶಿವನಗರದಿಂದ ಬಹಳ ಬಲವಂತ ಮಾಡಿ ಕರೆದುಕೊಂಡು ಹೋದಾಗ, ಹೊರಗೆ ಬಂದು ಹೇಳಿದರು, ಒಳ್ಳೆಯ ಕೆಲಸವನ್ನು ಮಾಡಿದೆಯಮ್ಮ ಇದು ಹಾಗೆಯೇ ಬಿಟ್ಟು ಹೋಗುತ್ತಿತ್ತು ಇವತ್ತು ನಮ್ಮಿಬ್ಬರನ್ನು ಬಹಳ ಹತ್ತಿರವಾಗಿ ಸೇರಿಸತಕ್ಕಂಥ ಶ್ರೇಯಸ್ಸು ನಿನಗೆ ಹೋಗಬೇಕೆಂದು ಹೇಳಿದ್ದನ್ನು ನಾನು ಜ್ಞಾಪಿಸಿಕೊಳ್ಳುತ್ತಿದ್ದೇನೆ.

2.30 ಪಿ.ಎಂ

ಅವರ ಆಡಳಿತದ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ. ಅವರು ಮುಖ್ಯಮಂತ್ರಿಗಳಾಗಿದ್ದಾಗ ಆಡಳಿತದಲ್ಲಿ ಎಷ್ಟು ಸ್ಟ್ರಿಕ್ಟ್ ಆಗಿ ಇದ್ದರೆಂದರೆ, ನಾವು ಯಾವುದಾದರೂ ಕೆಲಸಕ್ಕೆ ಅವರ ಹತ್ತಿರ ಹೋದಾಗ, ಈ ಕೆಲಸ ಆಗುತ್ತದೆ ಇದನ್ನು ಮಾಡುತ್ತೇನೆ, ಇದು ಆಗುವುದಿಲ್ಲ ಇದರ ಬಗ್ಗೆ ಇನ್ನೊಂದು ಸಲ ಹೇಳಬೇಡಿ ಎನ್ನತಕ್ಕಂಥ ಮಾತನ್ನು ಬಹಳ ನಿಷ್ಠೂರವಾಗಿ ಹೇಳುತ್ತಿದ್ದರು. ನಿಜವಾಗಿಯೂ ಅಂದಿನ ರಾಜಕೀಯದಲ್ಲಿ ಕೆಲಸಮಾಡಿರತಕ್ಕಂಥ ನಮಗೆ ಬಹಳ ನೇರವಾಗಿ ಹೇಳತಕ್ಕಂಥ ವ್ಯಕ್ತಿಗಳಲ್ಲಿ ಮಾನ್ಯ ವೀರೇಂದ್ರ ಪಾಟೀಲರು ಒಬ್ಬರಾಗಿದ್ದರು ಎನ್ನುವುದನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕಲ್ಬುರ್ಗಿಯಲ್ಲಿ ಲೋಕಸಭೆಯ ಉಪಚುನಾವಣೆ ನಡೆಯಿತು. ನಾನು, ಶ್ರೀಯುತರುಗಳಾದ ವೀರೇಂದ್ರ ಪಾಟೀಲರು, ರಾಮಕೃಷ್ಣ ಹೆಗಡೆಯವರು, ದೇವೇಗೌಡರು ಹೀಗೆ ನಾಲ್ಕೈದು ಜನ 21 ದಿವಸಗಳ ಕಾಲ ಅಂದು ಅಲ್ಲಿಗೆ ಪ್ರವಾಸಕ್ಕೆ ಹೋದಾಗ, ನಾವು ನಾಲ್ಕೈದು ಜನರಿಗೆ ಅವರ ಮನೆಯಲ್ಲಿಯೇ ಊಟ ಮಾಡಿಕೊಂಡು ಇರಿ ಎಂದು ನಮಗೆ ಹೇಳಿದರು. ವೀರೇಂದ್ರ ಪಾಟೀಲರು ನಮ್ಮನ್ನೆಲ್ಲ ಅವರ ಮನೆಯಲ್ಲಿಯೇ ಇಟ್ಟುಕೊಂಡು ಇವರು ಚುನಾವಣೆ ಪ್ರಚಾರಕ್ಕೆ ಬಂದಿದ್ದಾರೆ, ಇವರನ್ನು ಚೆನ್ನಾಗಿ ನೋಡಿಕೊಳ್ಳಬೇಕು, ಇವರಿಗೆ ಹಗಲು ರಾತ್ರಿಯೆನ್ನದೆ ಸರಿಯಾದ ವ್ಯವಸ್ಥೆಯನ್ನು ಮಾಡಬೇಕು ಎಂದು ಅವರು ತಮ್ಮ ಮಗಳು ಶಕುಂತಳ ಅವರಿಗೆ ಹೇಳಿದರು. ಇದು ಅವರ ಸೌಜನ್ಯಕ್ಕೆ ಹೆಣ್ಣುಮಕ್ಕಳ ಬಗ್ಗೆ ಅವರಿಗೆ ಇರತಕ್ಕಂಥ ಗೌರವ, ಅದರಗಳನ್ನು ಪ್ರತಿಬಿಂಬಿಸುತ್ತದೆ. ಇದನ್ನು ನಾನು ಅನೇಕ ಬಾರಿ ಗುರುತಿಸಿದ್ದೇನೆ. ಚಿಕ್ಕಮಗಳೂರು ಚುನಾವಣೆಯಾದಮೇಲೆ ಬಹುಶಃ ನನ್ನನ್ನು ಕೂಡ ಪಾರ್ಟಿ ಬಿಟ್ಟು ಹೋಗುವುದಕ್ಕೆ ಅವರ ಸ್ನೇಹಿತರು ಬಹಳ ಜನ ಹೇಳಿಕಳುಹಿಸಿದ್ದರು. ವೀರೇಂದ್ರ ಪಾಟೀಲರೇ ಕಾಂಗ್ರೆಸ್ಸಿಗೆ ಹೋಗಿದ್ದಾರೆ. ನೀವು ಅವರ ಜೊತೆ ಹೋಗುವುದಿಲ್ಲವೆಂದು ಕೇಳಿದಾಗ, ಈ ತರಹ ಆ ಹೆಣ್ಣು ಮಗಳನ್ನು ಬಲವಂತ ಮಾಡಬೇಡಿ, ಬಹಳ ಶಿಸ್ತಿನಿಂದ ಬಂದಿರತಕ್ಕಂಥವರು, ದಯವಿಟ್ಟು ಅವಳನ್ನು ಬಲವಂತವಾಗಿ ಎಳೆಯುವುದು ಬೇಡ ಎಂದು ಹೇಳಿಕಳುಹಿಸಿದ್ದರಂತೆ. ಅದನ್ನು ನಾನು ಯಾವತ್ತೂ ಮರೆಯುವುದಿಲ್ಲ. ನಾನು ವೀರೇಂದ್ರ ಪಾಟೀಲರ ಹತ್ತಿರ ಹೋಗಿ ಏನು ಸರ್, ನಮ್ಮನ್ನೆಲ್ಲ ಬಿಟ್ಟು ಬೇರೆ ಪಕ್ಷಕ್ಕೆ ಹೋಗಿಬಿಟ್ಟಿರಲ್ಲ, ನಿಮ್ಮ ಚುನಾವಣೆಯಲ್ಲಿ ನಾವು ಎಷ್ಟು ಕಷ್ಟಪಟ್ಟು ದುಡಿದಿದ್ದೇವೆಂದು ಹೇಳಿದಾಗ, ಅವರು ನಕ್ಕರೇ ಹೊರತು ಬೇರೆ ಮಾತನಾಡಲಿಲ್ಲ. ಅವರು ನಗುವುದೂ ಸಹ ಬಹಳ ಅಪರೂಪ ಮತ್ತು ಮಾತನಾಡುವುದು ಸಹ ಬಹಳ ಕಡಿಮೆ. ಅವರು ಒಳ್ಳೆಯ ಆಡಳಿತಗಾರರು, ಮಿತಭಾಷಿಗಳು, ಹಾಗೂ ಮುತ್ಸದ್ದಿಗಳು ಎನ್ನುವುದರಲ್ಲಿ ಬೇರೆ ಮಾತಿಲ್ಲ. ಬಹುಶಃ ಕರ್ನಾಟಕದ ಹಿಂದಿನ ಇಂತಹ ಮುಖ್ಯಮಂತ್ರಿಯವರನ್ನು ಕಳೆದುಕೊಂಡಿದ್ದನ್ನು ನಾವೆಲ್ಲ ಒಪ್ಪಬೇಕಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ, ನಮ್ಮಲ್ಲಿ ಒಂದು ಗಾದೆ ಹೇಳುತ್ತಾರೆ. ಪ್ರಸೂತಿ ವೈರಾಗ್ಯ, ಸ್ಮಶಾನ ವೈರಾಗ್ಯ ಹಾಗೂ ಅಭಾವ ವೈರಾಗ್ಯ ಎಂದು. ಯಾವುದೇ ಸ್ಮಾರಕ ಆಗಬೇಕಾದರೂ ಕೂಡ ಇಂತಹ ಒಂದು ದೃಷ್ಟಿಯಲ್ಲಿ ಆ ತರಹ ಆಗಬಾರದು. ಪ್ರಮುಖ ವ್ಯಕ್ತಿ ಅಗಲಿ ಹೋದಾಗ ಇವೆಲ್ಲವನ್ನೂ ಬಹಳ ದೊಡ್ಡದಾಗಿ ಮಾತನಾಡಿ ಮರೆಯತಕ್ಕಂಥದ್ದು ಆಗಬಾರದು. ಮಾನ್ಯ ಮುಖ್ಯಮಂತ್ರಿಗಳು ಸ್ಮಾರಕ ಆಗತಕ್ಕಂಥದ್ದರ ಬಗ್ಗೆ ಹೇಳಿದರು, ಅದರ ಜೊತೆಗೆ ವಿಶೇಷವಾಗಿ ನನ್ನ ಇಲಾಖೆಯಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮಾನ್ಯ ದಿ: ವೀರೇಂದ್ರ ಪಾಟೀಲ್‌ರ ಚರಿತ್ರೆಯ ಬಗ್ಗೆ ಏನಾದರೂ ಮಾಡುವುದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಆದೇಶ ಕೊಟ್ಟಲ್ಲಿ ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆಂದು ಈ ಸಭೆಯಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಶ್ರೀಮತಿ ಲೀಲಾವತಿ ಮಾಗಡಿಯವರ ಬಗ್ಗೆ ಮಾತನಾಡುತ್ತೇನೆ. ತಾವು ಮಾತನಾಡುವಾಗ ಲೀಲಾದೇವಿ ಮಾಗಡಿ ಎಂದು ಹೇಳಿದಿರಿ. ನಾನು 1953ರಲ್ಲಿ ಮದುವೆ ಆದಾಗ ನನ್ನ ಮದುವೆಗೆ ಶ್ರೀಮತಿ ಲೀಲಾವತಿ ಮಾಗಡಿಯವರು ಬಂದಿದ್ದರು. ನನ್ನ ಹೆಸರು ಲೀಲಾವತಿ, ನಿನ್ನ ಹೆಸರನ್ನು ಕೂಡ ಲೀಲಾವತಿ ಎಂದು ಇಟ್ಟುಕೊಳ್ಳಬೇಡ, ನಿನ್ನ ಹೆಸರನ್ನು ಲೀಲಾದೇವಿ ಎಂದು ಮಾಡಬೇಕೆಂದು ಅವತ್ತೇ

1953ರಲ್ಲಿ ನನಗೆ ಹೇಳಿದರು. ಬಹುಶಃ ಹುಬ್ಬಳ್ಳಿಯಲ್ಲಿ ಮಹಿಳಾ ವಿದ್ಯಾಲಯವನ್ನು ಸ್ಥಾಪನೆ ಮಾಡಿರತಕ್ಕಂಥವರು ವೀರಣ್ಣಗೌಡರು, ಅವರ ತಾಯಿ ನಾಗಮ್ಮವರು ಜೀವಂತವಾಗಿದ್ದಾರೆ. ಅವರಿಗೆ 92 ವರ್ಷ ವಯಸ್ಸಾಗಿದೆ. ಇವತ್ತು ಮಹಿಳಾ ವಿದ್ಯಾಲಯವನ್ನು ಸ್ಥಾಪನೆ ಮಾಡಿ ಹೆಣ್ಣುಮಕ್ಕಳಿಗೆ ಸ್ಥಳೀಯವಾಗಿರತ್ತಕಂಥ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಿರತಕ್ಕಂಥ ಕೀರ್ತಿ ಶ್ರೀಮತಿ ಲೀಲಾದೇವಿ ಮಾಗಡಿಯವರು ಹಾಗೂ ಅವರ ತಂದೆಯವರಿಗೆ ಸಲ್ಲುತ್ತದೆಂದು ಹೇಳಿದರೆ ತಪ್ಪಾಗಲಾರದು. ಲೀಲಾವತಿ ಮಾಗಡಿಯವರು ಪ್ರಾಣ ಬಿಡುವ ನಾಲ್ಕೈದು ದಿವಸಕ್ಕೆ ಮೊದಲು 'ನಾನು ನಿನ್ನನ್ನು ನೋಡಬೇಕು, ಹುಬ್ಬಳ್ಳಿಗೆ ಬಂದು ಹೋಗು' ಎಂದು ಹೇಳಿ ಫೋನ್ ನನಗೆ ಮಾಡಿಸಿದ್ದರು. ನಾನು ಮಾರನೆ ದಿವಸವೇ ಎರಡು ಕಾರಣಕ್ಕಾಗಿ ಅವರ ಮನೆಗೆ ಹೋದೆ. ಒಂದನೆಯದು, ಅವರು ಖಾಯಿಲೆಯಿಂದ ಮಲಗಿದ್ದಾರೆ, ಅವರನ್ನು ನೋಡಬೇಕನ್ನುವ ಉದ್ದೇಶದಿಂದ. ಎರಡನೆಯದು ಕಿತ್ತೂರು ಚೆನ್ನಮ್ಮನ ಉತ್ಸವದಲ್ಲಿ ಸ್ವಾತಂತ್ರ್ಯ ಹೋರಾಟಗಾರ್ತಿಯವರಿಗೆ ಸನ್ಮಾನ ಮಾಡಬೇಕೆಂದಾಗ ಅವರನ್ನು ಕರೆದು ಬರಬೇಕೆಂದು ನಾನು ಅವರಲ್ಲಿಗೆ ಹೋಗಿದ್ದೆ. ಆ ದಿನವೇ ಅವರನ್ನು ನಾನು ಕೊನೆಯದಾಗಿ ಮಾತನಾಡಿ ಬಂದಿರುವುದಾಗಿದೆ.

ಆ ದಿನ ನಾನು ಸುಮಾರು ಒಂದು ಗಂಟೆ ಕಾಲ ಅವರ ಜೊತೆಯಲ್ಲಿ ಕಳೆದಾಗ, ಅವರ ಹಿಂದಿನ ಹೋರಾಟ ಹಾಗೂ ಅವರು ನಡೆದು ಬಂದಿರತಕ್ಕಂಥ ದಾರಿ ಬಗ್ಗೆ ಬಹಳ ಆತ್ಮೀಯವಾಗಿ ಮಾತನಾಡಿದರು. ಅಂತಹ ಒಬ್ಬ ಹಿರಿಯ ಸಹೋದರಿಯನ್ನು ಇವತ್ತು ನಾನು ಕಳೆದುಕೊಂಡಿದ್ದೇನೆಂದರೆ ತಪ್ಪಾಗಲಾರದು. ಬಹುಶಃ ಧಾರವಾಡ ಖಾದಿ ಗ್ರಾಮೋದ್ಯೋಗದ ಸ್ಥಾಪನೆಗೆ ಅವರ ಯಜಮಾನರಾದ ಶ್ರೀ ವೆಂಕಟೇಶ್ ಮಾಗಡಿಯವರು, ಲೀಲಾವತಿ ಮಾಗಡಿಯವರು, ಕೆ.ಹೆಚ್.ಪಾಟೀಲ್‌ರು, ಕೆ.ಎಸ್. ಪಾಟೀಲರು, ಬಹಳ ಹತ್ತಿರವಾಗಿ ಕೆಲಸ ಮಾಡಿದಾಗ, ಇವರೆಲ್ಲರ ಜೊತೆಯಲ್ಲಿ ಕೆಲಸಮಾಡತಕ್ಕಂಥ ಅವಕಾಶ ನನಗೆ ಸಿತ್ತಿತು. ಶ್ರೀಮತಿ ಲೀಲಾವತಿ ಮಾಗಡಿಯವರು ಕಿತ್ತೂರು ಚೆನ್ನಮ್ಮ ಉತ್ಸವ ಆಗುವವರೆಗೆ ಜೀವಂತವಾಗಿರಲಿಲ್ಲ ಎನ್ನತಕ್ಕಂಥ ಕೊರಗು ಇವತ್ತು ಕೂಡ ನನಗೆ ಕಾಡುತ್ತಿದೆ. ಇವತ್ತು ವಿಶೇಷವಾಗಿ ಕರ್ನಾಟಕ ರಾಜ್ಯದಿಂದ ಹ್ಯಾಂಡಿಕ್ರಾಫ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನ್ನು ಏನಾದರೂ ಹುಟ್ಟು ಹಾಕಿದ್ದರೆ, ಇವತ್ತು ಮಹಾತ್ಮಗಾಂಧಿಯವರ ಹೆಸರನ್ನು ಎತ್ತಿಹಿಡಿದಿದ್ದರೆ ಅದು ಶ್ರೀಮತಿ ಲೀಲಾವತಿ ಮಾಗಡಿಯವರು ಸಣ್ಣ ಕೈಗಾರಿಕೆಗಳ ಸಚಿವರಾಗಿದ್ದಾಗ ಮಾಡಿದ ಶ್ರಮದ ಫಲವೆಂದು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಅಂದು ಅವರು ಆ ಒಂದು ಹುದ್ದೆಯನ್ನು ಅಲಂಕರಿಸಿದ್ದಾಗ ನಮ್ಮೆಲ್ಲರನ್ನು ಕರೆಸಿ - ಇವತ್ತು ಇದು ಗೋಡೌನ್‌ನಲ್ಲಿದೆ, ಮಹಿಳೆಯರೆ ಇದರ ಮುಂದಾಳತ್ವ ವಹಿಸಿ ಎಂದು ಹೇಳಿದರು. ಹ್ಯಾಂಡಿಕ್ರಾಫ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಆಗಬೇಕೆಂದು ಹೇಳಿಬಿಟ್ಟು ಅಂದು ಅವರು ಪಟ್ಟಿರತಕ್ಕಂಥ ಶ್ರಮ, ಇವತ್ತು ಅದು ಕರ್ನಾಟಕವಷ್ಟೇ ಅಲ್ಲ, ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಕೂಡ ನಮ್ಮ ಕೈಗಾರಿಕೆ ಹಾಗೂ ನಮ್ಮ ಶಿಲ್ಪಕಲೆಯ ವೈಭವವನ್ನು ಕಾಣುತ್ತಿದ್ದರೆ ಅದಕ್ಕೆ ಮೂಲವಾಗಿ ಶ್ರಮ ಪಟ್ಟವರು ನಮ್ಮ ಸಹೋದರಿ ಲೀಲಾವತಿ ಮಾಗಡಿಯವರು ಎಂದರೆ ತಪ್ಪಾಗಲಾರದೆಂದು ಹೇಳುತ್ತಾ ಇವತ್ತು ಅವರನ್ನು ನೆನಪು ಮಾಡಿಕೊಳ್ಳುತ್ತಿದ್ದೇನೆ. ಇಂತಹ ಹಿರಿಯ ವ್ಯಕ್ತಿ ಇವತ್ತು ನಮ್ಮನ್ನಗಲಿದ್ದಾರೆ. ಇನ್ನು ಕಾರ್ಪೊರೇಷನ್‌ನಲ್ಲಿ ಬಹಳ ವರ್ಷ

ನನ್ನೊಟ್ಟಿಗೆ ಕೆಲಸ ಮಾಡಿರತಕ್ಕಂಥ ರಾಜಾ ತಿಮ್ಮಯ್ಯನವರು. ಅವರು ಶಾಸಕರಾದಾಗ 'ಏನಮ್ಮ ನಾನು ಶಾಸಕನಾದೆ, ನೀನು ಹೊರಗೆ ಉಳಿದೆಯಲ್ಲ' ಎಂದು ಅನೇಕ ಬಾರಿ ನನಗೆ ಹೇಳುತ್ತಿದ್ದರು. ನನ್ನ ಜೊತೆಯಲ್ಲಿ ಕಾರ್ಪೊರೇಷನನಲ್ಲಿ ರಾಜಾ ತಿಮ್ಮಯ್ಯನವರು ಕೆಲಸ ಮಾಡುವಾಗ ಎಲ್ಲರೂ ಹೇಳುವ ಹಾಗೆ ಅವರು ಬಹುಶಃ 'ರಾಜಾ' ಎನ್ನತಕ್ಕಂಥದ್ದು - ಮನಸ್ಸಿನಿಂದ 'ರಾಜ' ಕೆಲಸದಲ್ಲೂ 'ರಾಜ' ಹಾಗೂ ನಡೆನುಡಿಯಲ್ಲೂ 'ರಾಜಾ' ತಿಮ್ಮಯ್ಯ ಆಗಿದ್ದರು. ಇವರು ಹನುಮಂತಯ್ಯನವರಿಗೆ ಹೇಳಿದ ಮಾತನ್ನು ನಾನು ಬಹಳ ಸ್ಪಷ್ಟವಾಗಿ ಕೇಳಿದ್ದೇನೆ. ಬೆಂಗಳೂರು ನಗರದಲ್ಲಿ ಹನುಮಂತಯ್ಯನವರು ಚುನಾವಣೆಗೆ ನಿಂತಾಗ ರಾಜಾ ತಿಮ್ಮಯ್ಯನವರು, ನಾವು ಒಟ್ಟಿಗೆ ಕೆಲಸ ಮಾಡುವಾಗ ಬಹುಶಃ ಅವರೊಬ್ಬರೆ ಹನುಮಂತಯ್ಯನವರಿಗೆ ಏಕವಚನದಲ್ಲಿ ಮಾತನಾಡತಕ್ಕಂಥ ಶಕ್ತಿ ಪಡೆದವರು ಎಂದರೆ ತಪ್ಪಾಗುವುದಿಲ್ಲವೆಂದು ನನಗೆ ಗೊತ್ತಿದೆ. ಅಂತಹ ಒಬ್ಬ ಸಾಮಾಜಿಕ ಜೀವನದಲ್ಲಿ ಯಾವಾಗಲೂ ಕಳಕಳಿಯನ್ನು ಪಟ್ಟಿರತಕ್ಕಂಥ ವ್ಯಕ್ತಿ ರಾಜಾ ತಿಮ್ಮಯ್ಯ ಎಂದರೆ ತಪ್ಪಾಗಲಾರದು. ಅವರೂ ಕೂಡ ಇವತ್ತು ನಮ್ಮನ್ನು ಅಗಲಿದ್ದಾರೆ ಈ ಎಲ್ಲ ಅಗಲಿರತಕ್ಕಂಥ ವ್ಯಕ್ತಿಗಳು ಸದನದಲ್ಲಿ ಸದಸ್ಯರಾಗಿ ಸಮಾಜಕ್ಕೆ ಹಾಗೂ ದೇಶಕ್ಕೆ ಮಾಡಿರತಕ್ಕಂಥ ಅವರ ಸೇವೆ ಬಗ್ಗೆ, ಅವರ ಕೀರ್ತಿ, ಅವರು ಬಿಟ್ಟು ಹೋಗಿರತಕ್ಕಂಥ ದಾರಿ ಬಗ್ಗೆ ಚಿಂತನೆ ಮಾಡುವುದಕ್ಕೆ ನಾವೆಲ್ಲರು ಇವತ್ತು ಮುಖ್ಯಮಂತ್ರಿಗಳು ಹೇಳಿದ ಹಾಗೆ ಇದು ಒಂದು ಸರ್ವೇಸಾಮಾನ್ಯವಾಗಿ ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಹೇಳತಕ್ಕಂಥ ಮಾತು ಇದು ರೂಢಿಯಲ್ಲಿ ಬಂದಿರತಕ್ಕಂಥದ್ದು. ಅವರು ಹೇಳಿದ ಹಾಗೆ ಆತ್ಮಕ್ಕೆ ಶಾಂತಿಯೋ, ಅವರು ಮಾಡಿರತಕ್ಕಂಥ ಕೆಲಸಕ್ಕೆ ಶಾಂತಿಯೋ ಅಥವಾ ಅಶಾಂತಿಯನ್ನು ಇವತ್ತು ಅವರು ಯಾವ ರೀತಿಯಲ್ಲಿ ಕಂಡಿದ್ದರು ಎನ್ನುವುದರ ಬಗ್ಗೆ ಅವರ ಜೀವನ, ಇವತ್ತು ಅವರಿಗೆ ಶಾಂತಿ- ಶರಣರ ಅರಿವು ಮರಣದಲ್ಲಿ' ಎಂದು ಹೇಳುವ ಹಾಗೆ, ಆಗಲಿರತಕ್ಕಂಥ ವೀರೇಂದ್ರ ಪಾಟೀಲರು, ಲೀಲಾವತಿ ಮಾಗಿಡಿಯವರು ಇವರೆಲ್ಲರು ಶರಣರ ರೂಪದಲ್ಲಿ ಇವತ್ತ ಅಸುನೀಗಿದ್ದಾರೆ ಎಂದು ಹೇಳುತ್ತಾ, ಅವರೆಲ್ಲರೂ ಕೂಡ ನನ್ನ ಸಂಪೂರ್ಣವಾದಂಥ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ಸಭಾನಾಯಕರು ಆಗಿರತಕ್ಕಂಥ ಮಾನ್ಯ ಜೆ.ಹೆಚ್. ಪಟೇಲರು, ಸದಸ್ಯರಾಗಿರತಕ್ಕಂಥ ಹೆಚ್.ಎನ್.ನಂಜೇಗೌಡರು ಮತ್ತು ಇತರೆ ಕೆಲವು ಹಿರಿಯ ಸದಸ್ಯರುಗಳು ಮಾಡಿರತಕ್ಕಂಥ ಭಾಷಣ, ಇದೊಂದು ಸಂತಾಪಸೂಚಕ ನಿರ್ಣಯ ಆಗಿದ್ದರು ಕೂಡ, ತಮ್ಮ ಅನುಭವ ಮತ್ತು ತಮ್ಮ ಜ್ಞಾಪಕವನ್ನು ಈ ಸದನದಲ್ಲಿ ಮಾಡಿಕೊಂಡನಂತರ - ನಮ್ಮ ಪೀಳಿಗೆಯ ಶಾಸಕರು ನಾವು ಇನ್ನೂ ಕಲಿಯತಕ್ಕಂಥದ್ದು ಬಹಳ ಇದೆ, ನಾವು ಬಹಳ ಸಣ್ಣವರು ಎನ್ನತಕ್ಕಂಥ ಮನೋಭಾವನೆ ಈ ಸಂದರ್ಭದಲ್ಲಿ ನನಗಂತೂ ಬರುತ್ತಿದೆ. ನಾನು ಇಲ್ಲಿ ಮಾತನಾಡುವಾಗ 2 ವಿಚಾರಗಳನ್ನು ಜ್ಞಾಪಿಸಿಕೊಳ್ಳಲಿಕ್ಕೆ ಬಯಸುತ್ತೇನೆ. ಮೊದಲನೆಯದಾಗಿ ಕರ್ನಾಟಕದಲ್ಲಿ 1970ರ ನಂತರ ಶ್ರೀಮತಿ ಇಂದಿರಾಗಾಂಧಿಯವರ ಕಾಂಗ್ರೆಸ್ಸಿನ ಒಂದು ಪ್ರಭಾವಯುತವಾಗಿರತ್ತಕಂಥ ರಾಜಕೀಯ ಪ್ರಾರಂಭವಾದ ಮೇಲೆ ಕರ್ನಾಟಕದಲ್ಲಿ ವಿರೋಧಪಕ್ಷಗಳನ್ನು ಕಟ್ಟಿದವರು, ಬದುಕಿಸಿದವರಲ್ಲಿ ಶ್ರೀಮಾನ್ ನಿಜಲಿಂಗಪ್ಪನವರು, ಶ್ರೀಮಾನ್ ವೀರೇಂದ್ರ ಪಾಟೀಲರು, ರಾಮಕೃಷ್ಣ ಹೆಗಡೆಯವರು, ದೇವೇಗೌಡರು ಬೊಮ್ಮಾಯಿಯವರು, ಪಟೇಲರು ಇವರು ಮಾಡಿರತಕ್ಕಂಥ

ಹೋರಾಟವನ್ನು ನಾವು ಯಾರೂ ಸಹ ಮರೆಯಲಿಕ್ಕೆ ಆಗುವುದಿಲ್ಲ. ಕಾರಣ ತುರ್ತುಪರಿಸ್ಥಿತಿಯಲ್ಲಿ ಶ್ರೀ ವೈ ರಾಮಕೃಷ್ಣ ಅವರು ಈ ಕಡೆ ಇದ್ದರು. ರಾಜಕೀಯವಾಗಿ ವಿಶ್ಲೇಷಣೆ ಮಾಡುವುದಕ್ಕೆ ಆಗದಿರತಕ್ಕಂಥ ವಿಚಾರವಿದು. ಇದಕ್ಕೆ ಕಾರಣಗಳನ್ನು ಸಹಿತ ಕೊಡಲಿಕ್ಕೆ ಆಗುವುದಿಲ್ಲ. ರಾಜಕೀಯವಾಗಿ ವೀರೇಂದ್ರ ಪಾಟೀಲರಿಂದ ವೈಯಕ್ತಿಕವಾಗಿ ಲಾಭ ಪಡೆದಿರತಕ್ಕಂಥವರು ಬಹಳ ಜನ ನಾವು ಈ ಕಡೆ ಇದ್ದೇವೆ. ಆ ಲಾಭ ಪಡೆದವರಲ್ಲಿ ನಾನೂ ಸಹ ಒಬ್ಬನಾಗಿದ್ದೇನೆ. 1977ರಲ್ಲಿ ನಾನು ಜೈಲಿನಿಂದ ಹೊರಗಡೆ ಬಂದಾಗ ಅವರು ಜನತಾ ಪಾರ್ಟಿಯ ಮೊದಲನೆಯ ಅಧ್ಯಕ್ಷರಾಗಿದ್ದರು. ಶ್ರೀ ದೇವೇಗೌಡರು ವಿರೋಧ ಪಕ್ಷದ ನಾಯಕರಾಗಿದ್ದರು. ಶ್ರೀ ರಾಮಕೃಷ್ಣ ಹೆಗಡೆಯವರು ನಮ್ಮ ಕಾರ್ಯದರ್ಶಿಗಳಾಗಿದ್ದರು. ಆಗ ಕಾಗೋಡು ತಿಮ್ಮಪ್ಪನವರು ನನ್ನ ಜೊತೆಯಲ್ಲಿ ಇದ್ದರು. ಆ ಸಂದರ್ಭದಲ್ಲಿ ವೀರೇಂದ್ರ ಪಾಟೀಲರು ನನ್ನನ್ನು ಕರೆಸಿ ಯುವ ಜನತಾ ಅಧ್ಯಕ್ಷನಾಗಿ ರಾಜ್ಯಕ್ಕೆ ನೇಮಕ ಮಾಡುತ್ತೇನೆ ಎನ್ನುವ ಮಾತನ್ನು ಹೇಳಿದ್ದು ನನಗೆ ಜ್ಞಾಪಕವಿದೆ. ದೇವೇಗೌಡರು, ಹೆಗಡೆಯವರು, ಆಳ್ವ ಇವರೆಲ್ಲರು - ನಿನಗೆ ಯುವ ಜನತಾ ಅಧ್ಯಕ್ಷನಾಗಿ ಮಾಡಬೇಕೆಂದಿದ್ದಾರೆ. ಅದರಿಂದ ನನ್ನ ಪರಿಚಯ ನಿನಗಿಲ್ಲ. ನಾನು ನಿನ್ನನ್ನು ಅಧ್ಯಕ್ಷನಾಗಿ ಮಾಡುತ್ತಿದ್ದೇನೆ. ನೀನು ಸ್ವಲ್ಪ ಒರಟು ಎಂದು ಕೇಳಿದ್ದೇನೆ. ಸ್ವಲ್ಪ ತಿದ್ದಿಕೊಳ್ಳಬೇಕು ಎನ್ನತಕ್ಕಂಥ ಮಾತನ್ನು ವೀರೇಂದ್ರ ಪಾಟೀಲರು ನನಗೆ ಹೇಳಿದ್ದರು. ಇವತ್ತೂ ಕೂಡ ಆ ಸ್ವಭಾವವನ್ನು ತಿದ್ದಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಅದು ಏನೇ ಇರಲಿ. ಅವರಿಂದ ಲಾಭ ಪಡೆದವರು ನಾವು. ಆದರೆ ಅವರ ಜೊತೆಯಲ್ಲಿ ನಾವು ಹೋಗಲಿಕ್ಕೆ ಆಗಲಿಲ್ಲ. ಇಲ್ಲಿರತಕ್ಕಂಥ ಕೆಲವು ಮುಖಂಡರುಗಳಿಗೆ ಅವರಿಂದ ರಾಜಕೀಯ ಪ್ರಸಂಗವೂ ಕೂಡ ಇವರಲ್ಲಿ ಅನೇಕರಿಗೆ ಬಂದಿತ್ತು. ಅದು, ಮನಸ್ಸು ಇದ್ದೋ, ಮನಸ್ಸು ಇಲ್ಲದೆಯೋ ಒಟ್ಟಿನಲ್ಲಿ ಆ ರೀತಿಯ ಒಂದು ಸಂದರ್ಭ ಒದಗಿ ಬಂದಿತ್ತು.

ಕರ್ನಾಟಕದಲ್ಲಿ ಇಂದಿರಾ ಕಾಂಗ್ರೆಸ್‌ನ ವಿರುದ್ಧವಾಗಿ ವಿರೋಧಪಕ್ಷಗಳು ಇರಬೇಕಾದರೆ, ಬದುಕುಳಿಯಬೇಕಾದರೆ, ಹೋರಾಟ ಮಾಡಿರಬೇಕಾದರೆ, ವೀರೇಂದ್ರ ಪಾಟೀಲರು ಮಾಡಿರತಕ್ಕ ಕೆಲಸವನ್ನು ನಾವು ಯಾರೂ ಸಹಿತ ಮರೆಯುವುದಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ನಾವು ಜ್ಞಾಪಕ ಮಾಡಿಕೊಳ್ಳಬೇಕಾಗುತ್ತದೆ. ಮತ್ತೊಂದು ಘಟನೆ ನನಗೆ ಜ್ಞಾಪಕಕ್ಕೆ ಬರುತ್ತದೆ, ಮಾನ್ಯ ದೇಶಪಾಂಡೆಯವರು, ಚಂದ್ರೇಗೌಡರು, ವಾಟಾಳ್‌ನಾಗರಾಜ್‌ರವವು ನಾವೆಲ್ಲರೂ ವಿರೋಧ ಪಕ್ಷದಲ್ಲಿ ಕುಳಿತಿದ್ದಾಗ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದರು. ಪಾಪ, ಅವರಿಗೆ ಆರೋಗ್ಯ ಚೆನ್ನಾಗಿರಲಿಲ್ಲ. ಕೃಷ್ಣಾ ಮತ್ತು ಕಾವೇರಿಯ ಜಲವಿವಾದದ ಸಂದರ್ಭ ಅದು. ಅವರು ಆಗತಾನೆ ರೋಗಗ್ರಸ್ಥರಾಗಿದ್ದರು. ಅವರು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಆದರೂ ಸಹಿತ ಮಾನ್ಯ ಸೋಮಣ್ಣನವರು ಕುಳಿತಿರುವ ಜಾಗಕ್ಕೆ ಅವರು ಬಂದು ಕುಳಿತುಕೊಂಡು ಅವರು ಮಾಡಿದ ಭಾಷಣವನ್ನು ನಾವು ಯಾರೂ ಮರೆಯುವುದಕ್ಕೆ ಸಾಧ್ಯವಿಲ್ಲ ಅಷ್ಟು ಬಹಳ ಹೃದಯಸ್ಪರ್ಶಿಯಾಗಿದ್ದಂಥ ಭಾಷಣ ಆದಾಗಿತ್ತು. ಆದರೆ ಇವತ್ತಿನ ರಾಜಕೀಯ ನಡವಳಿಕೆಗಳ ಬಗ್ಗೆ ನಾವು ಅಧಿಕಾರಕ್ಕೋಸ್ಕರ ಇಷ್ಟೊಂದು ಅವಕಾಶವಾದಿಗಳು ಆಗಿದ್ದೇವೆ ಎಂದು ಬಹಳ ಚೆನ್ನಾಗಿ ಹೇಳಿದರು. ಆದಾದನಂತರ ನಡೆದಿರತಕ್ಕಂಥದ್ದು ನಮಗೆಲ್ಲಗೊತ್ತಿದೆ. ಕರ್ನಾಟಕ ರಾಜ್ಯದ ಹೊರಗಡೆ ಇವತ್ತು ದೇವೇಗೌಡರು ಪ್ರಧಾನಿಗಳಾಗಿದ್ದಾರೆ. ಕರ್ನಾಟಕ ರಾಜ್ಯಕ್ಕೆ ಒಂದು ದೊಡ್ಡ ಹೆಸರನ್ನು ತಂದಿದ್ದಾರೆ. ಅವತ್ತಿನ ಕಾಲದಲ್ಲಿ

ನಿಜಲಿಂಗಪ್ಪನವರು, ಕೆಂಗಲ್ ಹನುಮಂತಯ್ಯನವರನ್ನು ಬಿಟ್ಟರೆ ಬೇರೆ ಯಾರೂ ಇರಲಿಲ್ಲ. ಮಾನ್ಯ ವೀರೇಂದ್ರ ಪಾಟೀಲ್‌ರು ಒಬ್ಬ ದಕ್ಷ ಆಡಳಿತಗಾರರೆಂದು ಹೆಸರನ್ನು ತೆಗೆದುಕೊಂಡು ಈ ರಾಜ್ಯಕ್ಕೆ ಒಂದು ದೊಡ್ಡ ಕೀರ್ತಿಯನ್ನು ತಂದಂಥ ಒಬ್ಬ ಮಹಾನ್ ನಾಯಕರಾಗಿದ್ದರು. ನಾನು ಮಾತನಾಡುತ್ತಾ ಇರಲಿಲ್ಲ. ಆದರೆ ನನಗೆ ಆ ಪ್ರಶ್ನೆ ಬಂದದ್ದು, ಅವರಿಂದ ನಾನು ರಾಜಕೀಯವಾಗಿ ಲಾಭ ಪಡೆದಿದ್ದೇನೆ. ಅದನ್ನು ನಾನು ಎಲ್ಲಾದರೂ ಒಂದು ಕಡೆ ಸ್ಮರಿಸಿಕೊಳ್ಳಬೇಕು ಎನ್ನುವ ದೃಷ್ಟಿಯಿಂದಾಗಿ ಇವತ್ತು ಸಮಯದ ಅರಿವು ಇದ್ದರೂ ಸಹಿತ ಎರಡು ಮಾತುಗಳನ್ನು ದೃಷ್ಟಿಯಿಂದಾಗಿ ಇವತ್ತು ಸಮಯದ ಅರಿವು ಇದ್ದರೂ ಸಹಿತ ಎರಡು ಮಾತುಗಳನ್ನು ಹೇಳಿದ್ದೇನೆ. ಅಂಥ ಒಬ್ಬ ದಕ್ಷ ಆಡಳಿತಗಾರರು, ಅನೇಕ ಮುಖಂಡರುಗಳು ಈ ಸದನದಲ್ಲಿ ಕೆಲಸ ಮಾಡಿ ಹೋಗಿದ್ದಾರೆ. ರಾಜ್ಯಕ್ಕೆ ಆದರ್ಶಪ್ರಾಯರಾಗಿ ದುಡಿದು ಹೋಗಿದ್ದಾರೆ. ನಾವು ಹೊಸದಾಗಿ ಬಂದಿರತಕ್ಕಂಥವರು. ಇನ್ನೂ ಏಕೆ ವಯಸ್ಸು ಇರತಕ್ಕಂಥವರು, ಬಹಳ ಕಲಿಯತಕ್ಕಂಥವರು. ಇನ್ನೂ ಎಳೆ ವಯಸ್ಸು ಇರತಕ್ಕಂಥವರು, ಬಹಳ ಕಲಿತಕ್ಕಂಥದ್ದು ಇದೆ ಎಂದು ಈ ಸಂದರ್ಭದಲ್ಲಿ ಹೇಳಿ, ಮಾನ್ಯ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ಅವರ ವ್ಯಕ್ತಿತ್ವದ ಬಗ್ಗೆ ವಿಶ್ಲೇಷಣೆ ಮಾಡಿ ಯಾವ ರೀತಿ ಸ್ಮಾರಕವನ್ನು ಮಾಡಬೇಕೆಂಬುದರ ಬಗ್ಗೆ ಹೇಳಿದ್ದಾರೆ. ಅವರು ಯಾವ ರೀತಿ ಆಡಳಿತ ನಡೆಸಿದರು ಎನ್ನುವುದಕ್ಕೆ ಅವರು ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ, ಮೊದಲನೆ ಬಜೆಟ್‌ನ್ನು ಮಂಡನೆ ಮಾಡಿದರು; ಆಗ ಈ ಆಡಳಿತ ಯಾವ ಮಟ್ಟದಲ್ಲಿ ಬೆಳೆದಿದೆ,ಎಷ್ಟು ದಪ್ಪವಾಗಿದೆ, ಎಷ್ಟೊಂದು ಜನ ಚೀಫ್ ಇಂಜನೀಯರುಗಳು, ಎ.ಡಿ.ಸಿ.ಪಿ.ಗಳು, ಸೆಕ್ರೆಟರಿಗಳು ಇದನ್ನು ಹೇಗೆ ಕಡಿಮೆ ಮಾಡಬೇಕು ಎನ್ನುವುದರ ಬಗ್ಗೆ ಬಹಳ ತೀವ್ರವಾದ ಕಳಕಳಿಯನ್ನು ಇಟ್ಟುಕೊಂಡು ಆಡಳಿತವನ್ನು ಏನಾದರೂ ಮಾಡಿ ಸರಿ ಮಾಡಬೇಕು ಎನ್ನುವ ವಿಚಾರವನ್ನು ಇಟ್ಟುಕೊಂಡಿದ್ದರು. ಅದನ್ನು ಅವರಿಗೆ ಮಾಡುವುದಕ್ಕೆ ಆಗಿರಲಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಏನು ಸ್ಮಾರಕ ಮಾಡುತ್ತೇವೆಂದು ಬಯಸಿದ್ದಾರೆ. ಆ ದೃಷ್ಟಿಯಿಂದ ಅವರು ಮಾಡುತ್ತಾರೆನ್ನುವ ವಿಶ್ವಾಸವನ್ನು ವ್ಯಕ್ತ ಮಾಡುತ್ತೇನೆ. ಮಾನ್ಯ ಭಾಸ್ಕರ ನಾಯ್ಡುರವರು ಬಹಳ ಹಿರಿಯರು. ಹಿಂದುಳಿದ ವರ್ಗದ ಜನಗಳ ಬಗ್ಗೆ ಬಹಳ ಅಭಿಮಾನ ಇಟ್ಟುಕೊಂಡಂಥ ಮುಖಂಡರಾಗಿದ್ದರು. ರಾಜ ಪಿ.ತಿಮ್ಮಯ್ಯ ಅವರು ಕೂಡ ನಮ್ಮನ್ನು ಆಗಲಿ ಹೋಗಿದ್ದಾರೆ. ನಮ್ಮೆಲ್ಲರನ್ನು ಬೆಳೆಸಬೇಕನ್ನುವ ದೃಷ್ಟಿ ಇಟ್ಟುಕೊಂಡಿದ್ದರು, ಅದರಲ್ಲೂ ವಿಶೇಷವಾಗಿ ವೀರೇಂದ್ರ ಪಾಟೀಲರಿಂದ ಬೆಳೆದಂಥ ಜನ ಒಳಪಟ್ಟ, ಈ ಕಡೆ ಭಾಗದಲ್ಲಿ, ಆ ಕಡೆ ಭಾಗದಲ್ಲೂ ಕೆಲವರು ಇದ್ದಾರೆ. ಈಗ ಉದಾಹರಣೆಗೆ ಕೇಂದ್ರದಲ್ಲಿ ಮಂತ್ರಿಗಳಾಗಿರತಕ್ಕಂಥ ಸಿ.ಎಂ. ಇಬ್ರಾಹಿಂರವರು, ಲೋಕಸಭಾ ಸದಸ್ಯರಾಗಿದ್ದ ಶ್ರೀನಿವಾಸ್ ಪ್ರಸಾದ್ ರವರು ಇದ್ದರು. ಹೀಗೆ ಬಹಳಷ್ಟು ಜನ ಸಂಘಟನೆಯಲ್ಲಿ ಎರಡನೆಯ ಒಂದು ಪೀಳಿಗೆಯನ್ನು ಬೆಳೆಸಬೇಕು. ಅವರ ಕೈಗೆ ಆಡಳಿತ ಕೊಡಬೇಕು, ಪಕ್ಷದ ದೃಷ್ಟಿ ಮತ್ತು ರಾಜ್ಯದ ದೃಷ್ಟಿ, ಜನಗಳ ಹಿತದೃಷ್ಟಿ. ಈ ಮೂರನ್ನು ಇಟ್ಟುಕೊಂಡು ಬೆಳೆಸಬೇಕು ಎನ್ನುವ ಒಂದು ದೃಷ್ಟಿಕೋನ ಬಹಳ ಕಡಿಮೆ ನಾಯಕರುಗಳಲ್ಲಿ ಇರತಕ್ಕಂಥದ್ದು. ಅಂಥ ನಾಯಕರುಗಳ ಒಂದು ಸಾಲಿನಲ್ಲಿ ವೀರೇಂದ್ರ ಪಾಟೀಲರು ಸಹಿತ ಇದ್ದರು. ಅವರ ಕುಟುಂಬ ವರ್ಗದವರಿಗೆ ಇವತ್ತು ಆಗಿರತಕ್ಕಂಥ ದುಃಖವನ್ನು ಭರಿಸಲು ಭಗವಂತನು ಶಕ್ತಿಕೊಡಲಿ, ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹೇಳಿ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಸನ್ಮಾನ್ಯ ಅಧ್ಯಕ್ಷರೆ, ಮಾಜಿ ಮುಖ್ಯಮಂತ್ರಿಗಳಾದಂಥ, ಸನ್ಮಾನ್ಯ ವೀರೇಂದ್ರ ಪಾಟೀಲರ ನಿಧನದ ಬಗ್ಗೆ ಹಾಗೂ ಇತರ ನಾಲ್ಕು ಜನ ಸದಸ್ಯರುಗಳ ಬಗ್ಗೆ ತಾವು ಏನು ಸಂತಾಪ ಸೂಚಕ ನಿರ್ಣಯವನ್ನು ತಂದಿದ್ದೀರಿ, ಅದನ್ನು ಬೆಂಬಲಿಸುತ್ತಾ ದಿವಂಗತ ವೀರೇಂದ್ರ ಪಾಟೀಲರ ಜೊತೆಯಲ್ಲಿ ರಾಜಕೀಯವಾಗಿ, ಶಾಸಕನಾಗಿ, ಹತ್ತಿರದ ಬಂಧುವಾಗಿ ಕೆಲಸ ಮಾಡಿದಂಥ ಅನೇಕ ಅನುಭವಗಳನ್ನು ಹೇಳಲಿಕ್ಕೆ ಇವತ್ತು ಸಾಕಷ್ಟು ಸಮಯ ಇಲ್ಲ. ಎಲ್ಲಾ ರೀತಿಯಲ್ಲಿ ಅವರ ಜೊತೆಯಲ್ಲಿ ಓಡಾಡಿರತಕ್ಕ ಕೆಲವು ವ್ಯಕ್ತಿಗಳ ಪೈಕಿ ನಾನೂ ಒಬ್ಬನೆಂದು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಿಜ, ಪ್ರತಿಯೊಬ್ಬರೂ ಅವರ ಬಗ್ಗೆ ಸಾಕಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರ ಅಗಲಿಕೆಯಿಂದ ರಾಷ್ಟ್ರಕ್ಕೆ ಮತ್ತು ರಾಜ್ಯಕ್ಕೆ ಆಗಿರತಕ್ಕಂಥ ನಷ್ಟದ ಬಗ್ಗೆ ಏನು ಮಾತನಾಡಿದ್ದಾರೆ, ಅದೆಲ್ಲವೂ ಸಹ ಸತ್ಯವಾದ ವಿಚಾರ. ನಾವು ಇವತ್ತು ಒಬ್ಬ ದಕ್ಷ ಹಾಗೂ ಪ್ರಾಮಾಣಿಕ ರಾಜಕಾರಿಣಿಯನ್ನು ಕಳೆದುಕೊಂಡಿದ್ದೇವೆ ಎನ್ನುವ ಮಾತು ಒಪ್ಪತಕ್ಕಂಥದ್ದು. ಕೇವಲ ನಾವು ಮಾತ್ರ ಅಲ್ಲ, ಇವತ್ತು ಇಡೀ ದೇಶ ಈ ರಾಜ್ಯದ ಜನ ಜಾತಿಮತಬೇಧ ಇಲ್ಲದೆ ರಾಜಕೀಯ ಪಕ್ಷಗಳ ವ್ಯತ್ಯಾಸ ಇಲ್ಲದೇ ಹಳ್ಳಿಹಳ್ಳಿಯಲ್ಲಿ ಕೂಡ ವೀರೇಂದ್ರ ಪಾಟೀಲರ ಗುರುತು ಪರಿಚಯ ಇಲ್ಲದಿದ್ದರೂ ಕೂಡ ಅವರ ಹೆಸರನ್ನು ಕೇಳಿದವರೂ ಕೂಡ ಇವತ್ತು ಅವರು ತೀರಿಕೊಂಡಿದ್ದು ಸರಿಯಲ್ಲ, ಅವರು ತೀರಿಕೊಂಡು ಬಿಟ್ಟರೇ ಎನ್ನತಕ್ಕಂಥ ಒಂದು ದುಃಖ ವ್ಯಕ್ತಪಡಿಸುವುದನ್ನು ನೋಡಿದರೆ ಅವರ ಜನಪ್ರಿಯತೆಗೆ ಒಂದೇ ಒಂದು ನಿದರ್ಶನವಾಗುತ್ತದೆ. ಅವರ ಆಡಳಿತದ ಬಗ್ಗೆ ನಾನು ಒಂದು ಮಾತನ್ನು ಇಲ್ಲಿ ಹೇಳಬೇಕಾಗುತ್ತದೆ.ಏಕೆಂದರೆ ಇವತ್ತಿನ ರಾಜಕೀಯ ಮತ್ತು ಅವತ್ತಿನ ರಾಜಕೀಯಕ್ಕೆ ಹೋಲಿಸಿ ನೋಡಬೇಕಾದರೆ ನಾನು ಅವರಿಗೆ ಹತ್ತಿರದ ಸಂಬಂಧಿ ಕೂಡ. ನಮ್ಮದೇ ಆದಂಥ ಒಂದು ಕಾಫಿ ಬೆಳೆಗಾರರ ವರ್ಗ ಇದೆ. ಬಹುಶಃ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾದ ಕಾಲದಲ್ಲಿ ಈ ಕಾಫಿ ಬೆಳೆಗಾರರನ್ನು ಕಾಡುತ್ತಿದ್ದಂಥ ಒಂದು ಪರ್‌ಚೇಸ್ ಟ್ಯಾಕ್ಸ್ ಏನು ಇದೆ, ಇದು ಪ್ಲಾಂಟರ್ಸ್‌ಗೆ ಭಾರಿ ದೊಡ್ಡ ಹೊರೆ ಇದೆ. ಇದನ್ನು ತೆಗೆಯಬೇಕೆಂದು ಹೇಳಿ ಕಾಫಿ ಬೆಳೆಗಾರರು ಅನೇಕರು ಸೇರಿ ನಾನು ಭಾರಿ ಹತ್ತಿರದ ಸಂಬಂಧಿ ಇದ್ದುದರಿಂದ ನನ್ನನ್ನು ಮುಖ್ಯಸ್ಥನನ್ನಾಗಿ ಮಾಡಿಕೊಂಡು ಅವರ ಮನೆಗೆ ಭೇಟಿ ಮಾಡಲು ಹೋದರು. ನಮ್ಮ ಸಂಬಂಧ ಎಷ್ಟು ಹತ್ತಿರ ಇದೆ ಎಂದರೆ, ಅವರ ಮೊಮ್ಮಗಳು ಖಾಸಾ ನನ್ನ ತಂಗಿಯ ಸೊಸೆ. ನನ್ನ ಸೊಸೆಯ ಅಕ್ಕ ಅವರ ಸೊಸೆ ಇಷ್ಟು ಹತ್ತಿರದ ಸಂಬಂಧ, ಹಾಗೆ ಇದ್ದ ಮೇಲೆ ಏನೋ ಒಂದು ವ್ಯತ್ಯಾಸ ಆಗಬಹುದು ಎನ್ನುವ ನಿರೀಕ್ಷಣೆ. ಅವರಲ್ಲಿ, ಹೋಗಿ ನಮ್ಮ ಕಷ್ಟ ಸುಖಗಳನ್ನೆಲ್ಲಾ ಹೇಳಿದಾಗ ಅರ್ಧಗಂಟೆ ಕೂಲಂಕುಷವಾಗಿ ಪ್ರತಿಯೊಂದು ಅಂಶವನ್ನೂ ಕೇಳಿದ ನಂತರ ಅವರು ಏನು ಹೇಳಿದರೆಂದರೆ, ನಿಜ ಇದರಿಂದ ನಿಮಗೆ ತುಂಬಾ ತೊಂದರೆ ಇದೆ, ಆದರೆ ನಾನು ಮುಖ್ಯಮಂತ್ರಿಯಾಗಿ ಈ ರಾಜ್ಯದ ಜವಾಬ್ದಾರಿಕೆಯನ್ನು ವಹಿಸಿಕೊಂಡಿದ್ದೇನೆ. ನಮ್ಮ ರಾಜ್ಯ ನೀವು ಏನು ತೊಂದರೆ ಅನುಭವಿಸುತ್ತಿದ್ದೀರಿ ಅದರ ನೂರು ಪಟ್ಟು ತೊಂದರೆ ಇವತ್ತು ಅನುಭವಿಸುತ್ತಿದೆ. ಮೊದಲು ಈ ರಾಜ್ಯದ ಆರೋಗ್ಯವನ್ನು ಸುಧಾರಿಸಿದ ನಂತರ, ಇವರ ಕಷ್ಟವನ್ನು ಬಗೆಹರಿಸಿದ ನಂತರ ನಿಮ್ಮ ಕಷ್ಟದ ಕಡೆಗೆ ಗಮನಕೊಡಲು ನನಗೆ ಅವಕಾಶ ಬರುತ್ತದೆ. ಆದ್ದರಿಂದ ನನಗೆ ಒಂದು ವರ್ಷದವರೆಗೆ ಕಾಲಾವಕಾಶ ಕೊಡಿ ಎನ್ನುವ ಮಾತನ್ನು ಅಲ್ಲಿಗೆ ಹೋದಂಥ ಸಮಿತಿಯ ಮುಂದೆ

ಹೇಳಿದರು. ಸಮಿತಿಯವರು ಹೊರಗೆ ಹೋದ ನಂತರ ನನಗೆ ಒಂದು ಕಿವಿ ಮಾತನ್ನು ಹೇಳಿದರು. ನಾನು ಈ ರೀತಿ ಹೇಳಿದೆನೆಂದು ತಾವು ತಪ್ಪು ತಿಳಿಯಬಾರದು. ರಾಜ್ಯದ ಆರ್ಥಿಕ ಪರಿಸ್ಥಿತಿ ತುಂಬಾ ಕೀಳುಮಟ್ಟದಲ್ಲಿದೆ. ಇದನ್ನು ಸುಧಾರಿಸಿಕೊಂಡು ನೀವೆಲ್ಲರೂ ಸಹಕರಿಸಬೇಕೆಂದು ಹೇಳಿದರು. ಅಂದರೆ ನಾನು ಇಲ್ಲಿ ಏಕೆ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಇವತ್ತು ಏನು ರಾಜಕೀಯದಲ್ಲಿ ಈ ಸ್ವಜನ ಪಕ್ಷಪಾತ ಅಥವಾ ಪಕ್ಷ ಇತರ ಪಕ್ಷಪಾತ ಈ ರೀತಿ ಎಲ್ಲೂ ಯಾವುದಕ್ಕೂ ಒಳಗಾಗದೇ ಇರತಕ್ಕಂಥ ಒಬ್ಬ ದಕ್ಷ ಆಡಳಿತಗಾರರನ್ನು ಇವತ್ತ ನಾವು ಕಳೆದುಕೊಂಡಿದ್ದೇವೆ. ಈ ಬಗ್ಗೆ ನಾವು ಪಕ್ಷಬೇಧ ಮರೆತು ಅವರ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಸದನವ ಹೊರಗಡೆ ಕೂಡ ಅನೇಕರು ಅನೇಕ ರೀತಿಯಲ್ಲಿ ಅದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಒಂದು ವಿಚಾರ ನಾನು ಇಲ್ಲಿ ಪ್ರಸ್ತಾಪ ಮಾಡಿದರೆ ಬಹುಶಃ ತಪ್ಪಾಗಲಾರದೆಂದು ತಿಳಿದುಕೊಂಡು ತಮ್ಮ ಕ್ಷಮಾಪಣೆ ಕೇಳಿ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ನಮ್ಮಲ್ಲಿ ಒಂದು ಗಾದೆ ಮಾತು ಇದೆ "ಸತ್ತ ಎಮ್ಮೆ ಹಾಲು ಜಾಸ್ತಿ" ಸಾಕಿದಂಥ ಎಮ್ಮೆ ಸತ್ತುಹೋದರೆ ಅದರ ಗುಣಗಾನ ಮಾಡಲು ಪ್ರಾರಂಭ ಮಾಡುತ್ತೇವೆ. ಬಹಳ ಒಳ್ಳೆಯ ಎಮ್ಮೆ, ಒಳ್ಳೆಯ ಹಾಲು ಕೊಡುತ್ತಿತ್ತು. ಬಾಗಿ ಬೇಗ ಸತ್ತು ಹೋಯಿತು. ಅದು ಸತ್ತನಂತರ ಈ ರೀತಿ ಎಲ್ಲಾ ಮಾತಾಡುತ್ತೇವೆ. ಅದು ಜೀವಂತವಾಗಿ ಇದ್ದಂಥ ಸಂದರ್ಭದಲ್ಲಿ ಅದರ ಬಗ್ಗೆ ಚಿಂತೆ ಮಾಡುವುದಿಲ್ಲ, ಅದಕ್ಕೆ ಕೊಡಬೇಕಾದ ಆಹಾರದ ಬಗ್ಗೆ, ಅದನ್ನು ಸಾಕುವ ರೀತಿಯ ಬಗ್ಗೆ ಚಿಂತನೆ ಮಾಡುವುದಿಲ್ಲ. ಇವತ್ತು ನಮ್ಮ ವೀರೇಂದ್ರ ಪಾಟೀಲರ ಪರಿಸ್ಥಿತಿ ಕೂಡ ಇಲ್ಲಿಗೆ ಬಂದಿದೆಯೋ ಎಂದು ನನ್ನ ಅನಿಸಿಕೆ. ಕಾರಣ ಏನೆಂದರೆ, ಅವರು ಎರಡನೇ ಬಾರಿ ಈ ರಾಜ್ಯದಲ್ಲಿ ಮುಖ್ಯಮಂತ್ರಿ ಆಗದೆ ಇದ್ದಿದ್ದರೆ ಬಹುಶಃ ಇನ್ನೂ ಕೆಲವು ಕಾಲ ನಮ್ಮೊಂದಿಗೆ ಇರುತ್ತಿದ್ದರು ಎಂದು ನನಗೆ ಅನಿಸುತ್ತಿದೆ. ಅವರು ಈ ರಾಜ್ಯದ ಜವಾಬ್ದಾರಿಯನ್ನು ವಹಿಸಿಕೊಂಡಾಗ ಇದಕ್ಕೆ ಬಡಿದಿದ್ದಂಥ ಪಾರ್ಶ್ವವಾಯುವನ್ನು ಸಂಪೂರ್ಣ ನಿವಾರಣೆ ಮಾಡತಕ್ಕ ಸಂದರ್ಭದಲ್ಲಿ ನಾವು ಎಲ್ಲೋ ತಪ್ಪಿದ್ದೇವೆಂದು ನನ್ನ ಭಾವನೆ. ಬಹುಶಃ ಅವರಿಗೆ ಸರಿಯಾದಂಥ ವ್ಯವಸ್ಥೆ ಆ ಸಂದರ್ಭದಲ್ಲಿ ಆಗಿದ್ದರೆ, ಇದನ್ನು ಅವರು ಅನೇಕ ಸಂದರ್ಭದಲ್ಲಿ ಈ ಸದನದಲ್ಲಿ ಕುಳಿತಿರತಕ್ಕಂಥ ಅನೇಕ ಪ್ರಮುಖರ ಜೊತೆ ಅವರನ್ನು ಭೇಟಿ ಮಾಡಲಿಕ್ಕೆ ಹೋದಾಗ ಅವರು ಪ್ರಸ್ತಾಪ ಮಾಡಿದ್ದಾರೆ. ಅದೇನೆಂದರೆ ಅವರ ನೋವನ್ನು ಅವರು ಹೇಳಿಕೊಂಡಿದ್ದಾರೆ. ಅದು ಅವರಿಗೆ ಅರ್ಥವಾಗಿರಬಹುದು. ಅಷ್ಟು ಅವರ ಮನೋವೇದನೆ ಇತ್ತು. ಬಹುಶಃ ಆ ಮನೋವೇದನೆ ಅವರ ಆರೋಗ್ಯ ಸುಧಾರಿಸಲಿಕ್ಕೆ ಸಾಧ್ಯವಾಗಲಿಲ್ಲ. ಪಾರ್ಶ್ವವಾಯು ಬಡಿದಿರತಕ್ಕಂಥ ಸಾಮಾನ್ಯ ಜನ ಕೂಡ ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಸರಿಯಾದಂಥ ಔಷಧಿ ಸಿಕ್ಕದೇ ಇದ್ದವರೂ ಕೂಡ ತಿರುಗಾಡುವುದನ್ನು ನಾವು ಇವತ್ತು ನೋಡುತ್ತಿದ್ದೇವೆ. ಸಾಮಾನ್ಯ ಅದು ಹಳ್ಳಿಯ ಔಷಧಿಯಲ್ಲೂ ಕೂಡ ತಿರುಗಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆಂದ ಮೇಲೆ ವೀರೇಂದ್ರ ಪಾಟೀಲರಂಥ ಒಬ್ಬ ಮಹಾನವ್ಯಕ್ತಿ ಪಾರ್ಶ್ವವಾಯುನಿಂದ ಹೊರ ಬರಲಿಕ್ಕೆ ಸಾಧ್ಯವಾಗಲಿಲ್ಲ ಎನ್ನುವುದಾದರೆ ಅವರಿಗೆ ಕೊಟ್ಟಂಥ ಆ ಮಾನಸಿಕ ವೇದನೆ ಬಹುಶಃ ಅದನ್ನು ತಡೆದುಕೊಳ್ಳಲಿಕ್ಕೆ ಅವರಿಂದ ಸಾಧ್ಯವಾಗಲಿಲ್ಲ. ಹಾಗಾಗಿ ಅವರು ಅಧಿಕಾರ ಮತ್ತು ಈ ರಾಜಕೀಯ ಲಾಲಸೆಗೆ ತುತ್ತಾಗಿ ಅವರ ಪರಿಸ್ಥಿತಿ ಈ ಮಟ್ಟಕ್ಕೆ ಬಂತು ಎಂದು ಹೇಳಿ ಸಂದರ್ಭದಲ್ಲಿ ಅರ್ಥಮಾಡಿಕೊಳ್ಳಬಹುದು ಎಂದು ನನಗೆ ಅನಿಸುತ್ತದೆ. ಮಾನ್ಯ ಸಭಾಧ್ಯಕ್ಷರೆ, ಮಾನ್ಯ

ವೀರೇಂದ್ರಪಾಟೀಲರು ಇವೊತ್ತು ನಮ್ಮನ್ನು ಆಗಲಿದ್ದಾರೆ. ಆದರೆ ಅವರ ಆದರ್ಶಗಳನ್ನು ಈ ಸ್ಥಳದಲ್ಲಿಯೇ ಬಿಟ್ಟು ಹೋಗಿದ್ದಾರೆ. ಮಾನ್ಯ ಮುಖ್ಯ-ಮಂತ್ರಿಗಳು ಪ್ರಸ್ತಾಪ ಮಾಡಿದಂತೆ ಸಂತಾಪ ಸೂಚಕ ಸಭೆ ಮತ್ತು ಈ ಸ್ಮಾರಕಗಳು ಇವೆಲ್ಲದರ ಬಗ್ಗೆ ನಾವು ಹೆಚ್ಚಿಗೆ ಪ್ರಸ್ತಾಪ ಮಾಡುವುದರ ಬದಲು ಅವರು ಇವೊತ್ತು ಇಲ್ಲಿ ಸದನದಲ್ಲಿ ಏನು ಬಿಟ್ಟು ಹೋಗಿದ್ದಾರೆ ಅದನ್ನು ಕಿಂಚಿತ್ತಾದರೂ ಪಾಲಿಸುವುದರ ಕಡೆ ಪ್ರಯತ್ನ ಮಾಡಿದ್ದೇ ಆದರೆ ಅಧಿಕಾರವನ್ನು ವಹಿಸಿಕೊಂಡಿರತಕ್ಕಂತಹ, ಜವಾಬ್ದಾರಿ ಇರತಕ್ಕಂತಹ ಪ್ರತಿಯೊಬ್ಬರೂ ಆ ಕಡೆ ಗಮನವನ್ನು ಹರಿಸಿದರೆ ಸ್ವಲ್ಪ ಏನಾದರೂ ಅವರ ಆತ್ಮಕ್ಕೆ ಶಾಂತಿ ಎನ್ನುವುದು ಸಿಗುವುದಿದ್ದರೆ ಸಿಗಬಹುದೆಂದು ನನ್ನ ಅನಿಸಿಕೆ. ಹೇಮಾವತಿ ಮತ್ತು ಹಾರಂಗಿ ಬಗ್ಗೆ ಇವೊತ್ತು ಪ್ರಸ್ತಾಪ ಬಂದಿದೆ. ಬಹುಶಃ ನಾವೆಲ್ಲರೂ ಕೇಳಿದ್ದೇವೆ, ಹೇಮಾವತಿ ಮತ್ತು ಹಾರಂಗಿ ಬಗ್ಗೆ ಮಾನ್ಯ ವೀರೇಂದ್ರ ಪಾಟೀಲರು ದಿಟ್ಟ ನಿಲುವನ್ನು ಇಟ್ಟುಕೊಳ್ಳದೇ ಇದ್ದರೆ ಬಹುಶಃ ಈ ಎರಡು ಅಣೆಕಟ್ಟುಗಳು ನಿಂತು ಹೋಗುತ್ತಾ ಇತ್ತು ಬಹುಶಃ ಆಗುತ್ತಾ ಇರಲಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಿರತಕ್ಕಂತಹ ವಿಚಾರ. ಆದರೆ ಇವತ್ತು ಹೇಮಾವತಿ ಹಾರಂಗಿ-ಆ ಸ್ಥಳದ ಯಾವುದೇ ಭಾಗದಲ್ಲಿ ವೀರೇಂದ್ರ ಪಾಟೀಲರ ಹೆಸರು ಕಾಣುವುದಿಲ್ಲ. ಬೇರೆಯವರ ಯಾರದೋ ಹೆಸರುಗಳಿವೆ. ಆ ನಾಲೆಗೆ ಒಂದು ಹೆಸರನ್ನು ಇಟ್ಟಿದ್ದಾರೆ. ಆ ಮೇಲಿನ ನಾಲೆಗೆ ಒಂದು ಹೆಸರನ್ನು ಇಟ್ಟಿದ್ದಾರೆ. ಆದರೆ ಎಲ್ಲಾ ಕಡೆ ಹೆಸರುಗಳು ಇದ್ದರೂ ಕೂಡ ಅಲ್ಲಿ ಮಾನ್ಯ ವೀರೇಂದ್ರ ಪಾಟೀಲರ ಹೆಸರು ಕಾಣುತ್ತಿಲ್ಲ.

ಶ್ರೀ ಹೆಚ್. ಎನ್. ನಂಜೇಗೌಡ : ಅಲ್ಲಿ ಇರುವಂತಹ ಹೆಸರುಗಳಲ್ಲಿ ವಿರೋಧವನ್ನು ಮಾಡಿದವರ ಹೆಸರುಗಳೂ ಸಹ ಇದೆ.

ಶ್ರೀ ಬಿ.ಬಿ. ಶಿವಪ್ಪ : ಆ ನಾಲೆಗೆ ವಿರೋಧವನ್ನು ಮಾಡಿದವರ ಪ್ರತಿಯೊಬ್ಬರ ಹೆಸರುಗಳೂ ಇವೆ. ಆದರೆ ಅದಕ್ಕೆ ಹೋರಾಟವನ್ನು ಮಾಡಿದಂತಹ, ಕೇಂದ್ರ ಸರ್ಕಾರವನ್ನು ಎದುರು ಹಾಕಿಕೊಂಡು ಹೋರಾಟವನ್ನು ಮಾಡಿ, ದಿಟ್ಟ ನಿಲುವನ್ನು ತೆಗೆದುಕೊಂಡು ರಾಜ್ಯ ಸರ್ಕಾರದಲ್ಲಿ ಒಂದು ಉತ್ತಮ ವಾದಂತಹ ಕೆಲಸ ಮಾಡಿದಂತಹ ವ್ಯಕ್ತಿಯ ಹೆಸರು ಯಾವ ಭಾಗದಲ್ಲಿಯೂ ಕಾಣುವುದಿಲ್ಲ. ಅದಕ್ಕೆ ಒಂದು ಸಲಹೆಯನ್ನು ಮಾನ್ಯ ವಾಟಾಳ್ ನಾಗರಾಜ್‌ರವರು ಸೂಚಿಸಿದರು. ಸ್ಮಾರಕ ಯಾವುದೇ ರೀತಿಯಲ್ಲಿ ಇರಲಿ, ಸ್ಮಾರಕ ಮಾಡಬೇಕಾದಂತಹ ನಿರ್ಧಾರವನ್ನು ಸರ್ಕಾರ ತೆಗೆದುಕೊಳ್ಳಲೇಬೇಕು, ಇದು ಕಡ್ಡಾಯ. ಅದು ಯಾವ ರೀತಿ ಆಗಬೇಕು ಎನ್ನುವುದು ತಮಗೆ ಬಿಟ್ಟಿದ್ದುದು.

ತಾವು ಅಥವಾ ಎಲ್ಲರನ್ನು ಸೇರಿಸಿ ತೀರ್ಮಾನವನ್ನು ತೆಗೆದುಕೊಳ್ಳುತ್ತೀರೋ ಅಥವಾ ಜನತೆಯ ಅಭಿಪ್ರಾಯದಂತೆ ತೀರ್ಮಾನವನ್ನು ತೆಗೆದುಕೊಳ್ಳುತ್ತೀರೋ ಅದು ಆಡಳಿತ ಮಾಡತಕ್ಕಂತಹ ತಮ್ಮ ನಿರ್ಧಾರಕ್ಕೆ ಬಿಟ್ಟಿರತಕ್ಕಂತಹ ವಿಚಾರ. ಆದರೆ ಸ್ಮಾರಕ ಅಂತೂ ಆಗಲೇ ಬೇಕು. ಮಾನ್ಯ ವೀರೇಂದ್ರ ಪಾಟೀಲ್‌ರಂತಹ ಮಹಾನ್ ವ್ಯಕ್ತಿಗೆ ಒಂದು ಸ್ಮಾರಕವನ್ನು ಮಾಡದೇ ಹೋದರೆ, ಬಹುಶಃ, ಕೆಂಗಲ್ ಹನುಮಂತಯ್ಯನವರ ಫೋಟೋ ಎದುರುಗಡೆ ಹಾಕಿದ್ದಾರೆ. ಕೆಂಗಲ್ ಹನುಮಂತಯ್ಯನವರು ಈ ವಿಧಾನಸೌಧವನ್ನು ಕಟ್ಟದೇ ಇದ್ದಿದ್ದರೆ, ಪ್ರಪ್ರಥಮವಾಗಿ ನಾವು ವಿಧಾನಸೌಧವನ್ನು ಪ್ರವೇಶ ಮಾಡಿದಂತಹ ಕಾಲದಲ್ಲಿ ನಮಗೆ ಏನೋ ಅನಿಸಿತು. ಇದರೊಳಗೆ ಬಂದ ತಕ್ಷಣ ನಮ್ಮ ಭಾವನೆಗಳೇ ಬದಲಾವಣೆ

ಯಾಯಿತು, ಇದು ಎಂತಹ ಒಂದು ಸದನವಾಗಿದೆ ಅಲ್ವಾ? ಪ್ರಪಂಚದಲ್ಲಿಯೇ ಒಂದನೇ ಹೆಸರನ್ನು ಪಡೆದಿರತಕ್ಕಂತಹ ಈ ಸದನ. ನಮ್ಮ ವಾಟಾಳ್ ನಾಗರಾಜ್‌ರವರು ಹೇಳಿದಂತೆ, ಒಂದೊಂದು ಕಲ್ಲನ್ನೂ ಕೂಡ ಹೇಗೆ ಇಡಬೇಕು ಎಂದು ಹೇಳಿ ಇಡಿಸಿದಂತಹ ಶ್ರೀ ಕೆಂಗಲ್ ಹನುಮಂತಯ್ಯನವರು ಒಂದು ಸೆಕೆಂಡ್ ಕೂಡ ಕುರ್ಚಿಯಲ್ಲಿ ಕುಳಿತುಕೊಳ್ಳುವುದಕ್ಕೆ ಅವಕಾಶ ಆಗಲಿಲ್ಲ; ಇದು ರಾಜಕೀಯ. ಇದಾದಮೇಲೆ ಅವರ ಫೋಟೋ ಮತ್ತು ಪ್ರತಿಮೆಯನ್ನು ಎದುರುಗಡೆ ಇಡದೇ ಇದ್ದರೆ ಬಹುಶಃ ಈ ವಿಧಾನಸೌಧವನ್ನು ಕಟ್ಟಿದವರು ಯಾರು ಎಂದು ಹೇಳಲಿಕ್ಕೂ ಕೂಡ ಗೊತ್ತಾಗುತ್ತಾ ಇರಲಿಲ್ಲ. ವಿಧಾನಸೌಧವನ್ನು ಕಟ್ಟಿದವರು ಯಾರಪ್ಪ ಎಂದು ಕೇಳಿದರೆ, ಅದು ಇರುವುದರಿಂದ ಕೆಂಗಲ್ ಹನುಮಂತಯ್ಯ ಎಂದು ಹೇಳಿಬಿಡುತ್ತಾರೆ. ಆದುದರಿಂದ ಶ್ರೀವೀರೇಂದ್ರ ಪಾಟೀಲರ ಬಗ್ಗೆ ಇವೊತ್ತು ಅನೇಕರು ಪ್ರಸ್ತಾಪ ಮಾಡಿದ್ದಾರೆ. ದಕ್ಷ ಆಡಳಿತದಲ್ಲಿ ಶ್ರೀ ಕೆಂಗಲ್ ಹನುಮಂತಯ್ಯನವರನ್ನು ಬಿಟ್ಟರೆ ಶ್ರೀ ವೀರೇಂದ್ರ ಪಾಟೀಲರು ಎರಡನೆಯ ವ್ಯಕ್ತಿ ಎನ್ನುವಂತಹ ಮಾತನ್ನು ನಾವೆಲ್ಲರೂ ಪ್ರಸ್ತಾಪ ಮಾಡಿದ್ದು ಮಾತ್ರ ಅಲ್ಲ, ನಾವೆಲ್ಲರೂ ಒಪ್ಪಿಕೊಂಡಂತಹ, ಆ ಒಂದು ದಿಟ್ಟ ರೀತಿಯಲ್ಲಿ ಅವರು ಕೆಲಸವನ್ನು ಮಾಡಿರುವುದರಿಂದ ಸ್ಮಾರಕ ಆಗಲೇಬೇಕು. ಅದಕ್ಕೆ ಸಮಿತಿಯನ್ನು ಮಾಡಿ ತೀರ್ಮಾನವನ್ನು ತೆಗೆದುಕೊಳ್ಳುತ್ತೀರೋ ಇಲ್ಲವೇ ನೀವೇ ತೀರ್ಮಾನವನ್ನು ತೆಗೆದುಕೊಳ್ಳುತ್ತೀರೋ ಅದು ನಿಮಗೆ ಬಿಟ್ಟಂತಹ ವಿಚಾರ ಎಂದು ಈ ಸಂದರ್ಭದಲ್ಲಿ ಹೇಳುತ್ತಾ ಮಾನ್ಯ ಅಧ್ಯಕ್ಷರೆ, ಇವೊತ್ತು ಈ ಒಂದು ವಿಚಾರವನ್ನು ತಾವು ಈ ಸದನದಲ್ಲಿ ತಂದು ಇದರ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ. ಅದೇ ರೀತಿಯಲ್ಲಿ ಶ್ರೀ ಹಮೀದ್‌ಷಾ, ಶ್ರೀ ಪಿ. ತಿಮ್ಮಯ್ಯ, ಶ್ರೀಮತಿ ಲೀಲಾದೇವಿ ವೆಂಕಟೇಶ್ ಮಾಗಡಿ ಹಾಗೂ ಶ್ರೀ ಭಾಸ್ಕರ್ ನಾಯ್ಡುರವರ ಬಗ್ಗೆ ನಾನು ಕೇಳಿ ತಿಳಿದಿದ್ದೇನೆಯೇ ಹೊರತು ಅವರ ಒಡನಾಡಿಯಲ್ಲ. ಹಾಗಾಗಿ ಇವರೆಲ್ಲರ ಆತ್ಮಕ್ಕೆ ಭಗವಂತನು ಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

+ಶ್ರೀ ರಾಜೇಂದ್ರನ್ (ಕೆ.ಜಿ.ಎಫ್) : ಮಾನ್ಯ ಅಧ್ಯಕ್ಷರೆ, ಈ ದಿನ ಬಹಳ ನೋವು ತಂದ ದಿನ. It is a great pain to us that we lost a great leader, the respectful, the then Chief Minister of Karnataka State, Mr. Veerendra Patil. He was a value-based politician and his appreciation was great and his purity in politics is great. Every human being has to die one day and death will follow everybody. ಒಬ್ಬ ಮನುಷ್ಯ ಹುಟ್ಟಿದ ಮೇಲೆ ಅವನ ಜೊತೆಯಲ್ಲಿಯೇ, ಅವನ ಹೆಗಲಿನಲ್ಲಿಯೇ ಸಾವನ್ನು ತರುತ್ತಾನೆ. ಅವನು ನನ್ನ ಡೆತ್‌ನ್ನು ನೀವು ಸ್ವಲ್ಪ ಇಟ್ಟುಕೊಳ್ಳಿ ಆಮೇಲೆ ತೆಗೆದುಕೊಳ್ಳುತ್ತೇನೆಂದು ಹೇಳುವುದಕ್ಕಾಗುವುದಿಲ್ಲ. So, the death is always there. Before dying and after his death, we should praise a man about his personality. Here, it is a great pleasure to me to felicitate our respectful great personality and a great Administrator Mr. Veereandra Patil. Why because, in the history we can see every human being used to think 'I am the great'. The great Alexander was thinking "I am the king of the world." Finally

he died. Seeing that death, the France King Nepolean said, "I am the king of France". He also died. Seeing both of them, Hitler said "I am the man going to capture the entire world". He also died next to them. Next Stalin, and everybody died. Every human being has to see the cemetry one day. We should see, greatest men are lying there. But here, after his death, everybody is saying, "we have lost the greatest man". Why? What is the cause for falicitating? Because he has done so many good things. Therefore today we are fecicitating him, the then respectful leader, the than Chief Minister Mr. Veerendra Patil, for what all he has done. I have not seen him.

I have not seen his administration. But I have learnt, I have studied through various sources that he was a great politician. He was the Chief Minister, Central Minister, he held so many administrative positions and he has done no injustice to anybody in this country. We lost such a great man. Why I man bringing this to you is, memories are every green until the blood colour changes. When he was the Chief Minister, he fell ill and he was painful at that time. Our great beloved respectful leader and the then Prime Minister of this country Mr. Rajiv Gandhi visisted him, saw him and left, and along with that our great Chief Minister was not in his seat. Here I can just quote that his pain would be like this. The great Ceasser was in a meeting of the Senate. Everybody stabbed him, he was not able to do anything. Then he came near to his close friend Brutus and he also stabbed him. The greatest man said "you too, Brutus;?" It is simple. Like that, when Mr. Veerendra Patil lost his Chief Minister, he never uttered a single word. We lost such a noble man. I have not seen his administration. But I have loved him. May God bless him and his family to give strength, stamina and endurance to tolerate that pain.

3.00 ಪಿ.ಎಂ.

That is why our great leaders, our respectful Chief Minister spoke about him as a greatman we lost. May his soul rest in peace, along with others. They should get athmashanthi. ಅವರ ಜೊತೆಗೆ ಅಗಲಿರತಕ್ಕ ಎಲ್ಲರಿಗೂ ದೇವರು ಒಳ್ಳೆಯದು ಮಾಡಬೇಕು. ಅವರ ಕುಟುಂಬದಲ್ಲಿರತಕ್ಕವರೆಲ್ಲರಿಗೂ ಅವರ ಅಗಲಿಕೆಯಿಂದ ಉಂಟಾಗಿರತಕ್ಕ ದುಃಖವನ್ನು ಭರಿಸತಕ್ಕ ಶಕ್ತಿ ಕೊಡಬೇಕು. ದೇವರು ಯಾವಾಗಲೂ ಅವರ ಜೊತೆಯಲ್ಲಿ ಇರಬೇಕು. ಅವರ ಆತ್ಮಕ್ಕೆ ಶಾಂತಿ ಕೊಡಬೇಕು ಎಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ನಮಸ್ಕಾರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಮಂಜುನಾಥ ಸಿ. ಕುನ್ನೂರು (ಸಿಗ್ಗಾಂವ್) : ಮಾನ್ಯ ಅಧ್ಯಕ್ಷರೆ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರ ಬಗ್ಗೆ ತಾವು ಮಂಡಿಸಿರತಕ್ಕ ಸಂತಾಪ ಸೂಚಕ ನಿರ್ಣಯವನ್ನು ಬೆಂಬಲಿಸುತ್ತಾ ಒಂದರೆಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಈ ಸದನದಲ್ಲಿ ಅನೇಕ ಹಿರಿಯರು ಶ್ರೀಮಾನ್ ವೀರೇಂದ್ರ ಪಾಟೀಲ್‌ರ ವ್ಯಕ್ತಿತ್ವದ ಬಗ್ಗೆ ಮಾತನಾಡಿದ್ದಾರೆ. ಆ ಮಹಾನ ವ್ಯಕ್ತಿಯ ಬಗ್ಗೆ ಮಾತನಾಡುವುದಕ್ಕೆ ಈ ಸದನದಲ್ಲಿ ನಾನು ಅಲ್ಪನು ಎಂದು ಹೇಳುತ್ತಾ, ಸದನದ ಸಮಯವನ್ನು ಹೆಚ್ಚು ತೆಗೆದುಕೊಳ್ಳದೆ ಒಂದೆರಡು ಮಾತುಗಳನ್ನು ಮಾತ್ರ ಹೇಳಬಯಸುತ್ತೇನೆ. ಶ್ರೀಮಾನ್ ವೀರೇಂದ್ರ ಪಾಟೀಲ್‌ರ ಜೊತೆ ನಾನು 1985ರಿಂದ ನಿಕಟ ಸಂಪರ್ಕ ಇಟ್ಟುಕೊಂಡಿದ್ದೆ ಎಂಬುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತಿದ್ದೇನೆ. 1989ರಲ್ಲಿ ನನಗೆ ಈ ಶಾಸನಸಭೆಗೆ ಬರಲಿಕ್ಕೆ ಒಂದು ಅವಕಾಶ ಕಲ್ಪಿಸಿಕೊಡದಿದ್ದರೆ ನಾನು ಈ ಸದನಕ್ಕೆ ಬರುವುದಕ್ಕೆ ಆಗುತ್ತಿರಲಿಲ್ಲ. ಇವತ್ತು ಅವರ ಋಣವನ್ನು ತೀರಿಸುವುದಕ್ಕೆ ಈ ಅವಕಾಶ ನನಗೆ ಮತ್ತೊಮ್ಮೆ ಸಿಕ್ಕಿದೆ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀಮಾನ್ ವೀರೇಂದ್ರ ಪಾಟೀಲರು 'ಮಾತು ಆಡಿದರೆ ಆಯಿತು, ಮುತ್ತು ಒಡೆದರೆ ಹೋಯಿತು' ಎಂಬ ವ್ಯಕ್ತಿತ್ವವನ್ನು ಹೊಂದಿದವರು, ಸರಳ ಸಜ್ಜನಿಕೆಗೆ ಹೆಸರಾದವರು. ಅವರನ್ನು ಯಾವ ಶಬ್ದಗಳಿಂದ ಗುಣಗಾನ ಮಾಡಿದರೂ ಕಡಿಮೆಯೇ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗಾಗಲೇ ಶ್ರೀಮತಿ ಲೀಲಾದೇವಿ ಪ್ರಸಾದ್ ಅವರು ಶ್ರೀ ವೀರೇಂದ್ರ ಪಾಟೀಲ್‌ರ ಜೀವನ ಚರಿತ್ರೆ ಬಗ್ಗೆ ಪುಸ್ತಕ ಪ್ರಕಟ ಮಾಡಬೇಕೆಂದು ಹೇಳಿದ್ದು ನನಗೆ ಹಿಡಿಸಿತು. ಆ ಕೆಲಸವನ್ನು ಅವರು ಮಾಡಬೇಕೆಂದು ಸಲಹೆ ಕೊಟ್ಟು, ಮೃತರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಮತ್ತು ಅವರ ಕುಟುಂಬ ವರ್ಗದವರಿಗೆ ಅವರ ಅಗಲಿಕೆಯಿಂದ ಉಂಟಾಗಿರತಕ್ಕ ದುಃಖವನ್ನು ನಿಭಾಯಿಸತಕ್ಕ ಶಕ್ತಿಯನ್ನು ದೇವರು ನೀಡಲಿ ಎಂದು ಪ್ರಾರ್ಥಿಸಿ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎಸ್. ಸುರೇಶಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ಸುಮಾರು 17 ಜನ ಹಿರಿಯ ಸದಸ್ಯರು ದಿವಂಗತ ವೀರೇಂದ್ರ ಪಾಟೀಲರ ಸಹವಾಸದ ಅನುಭವ ಪಡೆದು ಮಾತನಾಡಿದ ಮೇಲೆ ನನ್ನ ಮನಸ್ಸಿಗೆ ಬಂದ ವಿಚಾರ ನಿಜವಾಗಿಯೂ ರಾಜ್ಯದ ಹಿಂದಿನ ರಾಜಕೀಯವನ್ನು ನೋಡಿದಾಗ ಇಂಥ ರಾಜಕಾರಣಿಗಳು ಇದ್ದರೇ ಎಂದು. ಇಷ್ಟು ದಕ್ಷ ಆಡಳಿತ ಕೊಟ್ಟು ತಮ್ಮ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕೆ ಏನೂ ಸರ್ಕಸ್ ಮಾಡದೆ ಮಾನ್ಯ ನಂಜೇಗೌಡರು ಹೇಳಿದ ಹಾಗೆ ಈ ಸದನದಿಂದ ಆಚೆ ಹೋಗಿ ರಾಜೀನಾಮೆ ಕೊಡುವಂತಹ ವ್ಯಕ್ತಿ ರಾಜಕೀಯದಲ್ಲಿ ಇದ್ದರೋ ಎಂದು ಆಶ್ಚರ್ಯವಾಗುತ್ತಿದೆ. ಈಗ ಏತಕ್ಕೆ ಇಂಥ ರಾಜಕಾರಣಿಗಳು, ಇಂಥ ರಾಜಕೀಯ ವ್ಯಕ್ತಿಗಳು ನಮಗೆ ಕಾಣುತ್ತಿಲ್ಲ ಎಂಬ ವಿಚಾರ ನನ್ನ ಮನಸ್ಸಿಗೆ ಬಂತು. ಎಲ್ಲ ಕ್ಷೇತ್ರಗಳಲ್ಲಿಯೂ ಕೂಡ ಮೇಲ್ಪಂಕ್ತಿ ಎಂಬುದು ಕಾಣೆಯಾಗುತ್ತಿರುವಾಗ ಮೇಲ್ಪಂಕ್ತಿ ಎಂಬುದು ಅಭಾವವಾಗುತ್ತಿರುವಾಗ, ಪ್ರಾಯಶಃ ಮೇಲ್ಪಂಕ್ತಿಯಾಗಬಲ್ಲ ನಾಯಕರ ಸರಮಾಲೆಯಲ್ಲಿ ಇವತ್ತು ಒಬ್ಬೊಬ್ಬರನ್ನಾಗಿ ನಾವು ಕಳೆದುಕೊಳ್ಳುತ್ತಿದ್ದೇವೆಂದು ಅನ್ನಿಸುತ್ತದೆ. ಅನೇಕ ಹಿರಿಯರು ಮಾತನಾಡುತ್ತಿದ್ದಾಗ ನನ್ನ ಮನಸ್ಸಿಗೆ ಅನ್ನಿಸಿದ ವಿಚಾರ, ಇವತ್ತು ಇಲ್ಲಿ ಗೌರವ ಸೂಚಿಸುತ್ತಿರುವಾಗ ಭಾಷಣ ಮಾಡುತ್ತಿರುವಾಗ ನನ್ನ ಮನಸ್ಸಿಗೆ ಬಂದವಿಚಾರ ಎಂದರೆ ಈ

ಸಮಾಜದಲ್ಲಿ ಗೌರವ ಸೂಚಿಸುವುದು ಕೂಡ ಎಲ್ಲೋ ಒಂದು ರೀತಿಯ ಹುಸಿ ಗೌರವ ಅನ್ನಿಸುತ್ತದೆ. 14 ನೇ ತಾರೀಖು ಬೆಳಿಗ್ಗೆ ಶ್ರೀ ವೀರೇಂದ್ರ ಪಾಟೀಲ್‌ರು ತೀರಿಕೊಂಡರು. ಅಂದು ಬೆಳಿಗ್ಗೆ 7-8 ಗಂಟೆಯ ಹೊತ್ತಿಗೆ ಬೆಂಗಳೂರಿನ ಎಲ್ಲ ಶಾಲಾ ಕಾಲೇಜುಗಳು ರಜೆಯನ್ನು ಘೋಷಿಸಿದ್ದವು. ನಡೆಯಬೇಕಾಗಿದ್ದ ಪರೀಕ್ಷೆಗಳನ್ನು ರದ್ದು ಮಾಡಿದರು. Was it necessary. I do not know. ಅವತ್ತು ಮಧ್ಯಾಹ್ನ ನಾನು ಆ ಕಡೆ ಬರುತ್ತಿರುವಾಗ ರೇಸ್‌ಕೋರ್ಸ್ ತುಂಬಿ ತುಳುಕುತ್ತಿತ್ತು; ಬಹಳ ಚಟುವಟಿಕೆಯಿಂದ ಕೂಡಿತ್ತು. ರೇಸ್ ನಡೆಯುವುದು was it essential. I do not know. ನಾವು ಗೌರವ ಸೂಚಿಸುವುದೂ ಕೂಡ ಯಾವುದೋ ಹಂತದಲ್ಲಿ ಹುಸಿ ಗೌರವ ತೋರಿಸುತ್ತಿದ್ದೇವೆ ಎಂದು ಅನ್ನಿಸುತ್ತದೆ. ನಾವು ಶ್ರೀ ವೀರೇಂದ್ರ ಪಾಟೀಲ್‌ರ ಆಡಳಿತದ ರುಚಿ ನೋಡಿಲ್ಲ. ಮಾನ್ಯ ಸಿಂಧ್ಯ ಅವರಿಗೆ ಚೆನ್ನಾಗಿ ನೆನಪಿದೆ; 1978ರಲ್ಲಿ ಅವರು ಚಿಕ್ಕಮಗಳೂರು ಚುನಾವಣೆಯಲ್ಲಿ ನಿಂತಾಗ ಸಿಂಧ್ಯ ಅವರ ಬಲಗೈ ಬಂಟನಾಗಿ ನಾನು 22 ದಿನಗಳ ಕಾಲ ಆ ಚುನಾವಣೆಯಲ್ಲಿ ಯಾವ ರೀತಿ ಯಾವ ಕೆಲಸ ಮಾಡಿದ್ದೇನೆಂದು ಅವರಿಗೆ ಗೊತ್ತಿದೆ. ಅವರ ಅನೇಕ ಸದ್ಗುಣಗಳನ್ನು ನಾವು ಕೇಳಿದ್ದೇವೆ, ಗಮನಿಸಿದ್ದೇವೆ. ಇವತ್ತು ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್. ಪಟೇಲರು ಸ್ಮಾರಕದ ಬಗ್ಗೆ ಮಾತನಾಡುತ್ತಿದ್ದರು. ಅವರ ಹೇಳಿಕೆಯನ್ನು ನಾನು ಪತ್ರಿಕೆಯಲ್ಲಿಯೂ ಕೂಡ ಓದಿದ್ದೆ. ಅದಕ್ಕೆ ಸಂಪೂರ್ಣವಾದ ಸಮರ್ಥನೆ ನೀಡುತ್ತಾ, ಇವತ್ತಿನ ದಿವಸ ಏನಾಗಿದೆ ಎಂದರೆ, ಬೆಂಗಳೂರಿನಲ್ಲಿ ಬನ್ನೇರುಘಟ್ಟ ಇದೆ, ಮ್ಯೂಸಿಯಂ ಇದೆ, ವಿಧಾನಸೌಧ ಇದೆ; ಇವೆಲ್ಲ ಪ್ರೇಕ್ಷಣೀಯ ಸ್ಥಳಗಳಾಗಿವೆ. ಆದರೆ ಎಲ್ಲಿಯೂ ಕೂಡ ಯುವ ಪೀಳಿಗೆಗೆ, ಮುಂಬರುವ ಜನಾಂಗಕ್ಕೆ ಇನ್‌ಸ್ಪಿರೇಷನ್ ಕೊಡತಕ್ಕ, ಮಾರ್ಗದರ್ಶನ ನೀಡುವಂತಹ ಯಾವುದೇ ಕೇಂದ್ರ ನಮ್ಮ ರಾಜ್ಯದಲ್ಲಿ ಇಲ್ಲ. ಇಂಗ್ಲೆಂಡಿನಲ್ಲಿ Hall of Fame of Hall of Heros ಎಂಬ ಕೇಂದ್ರ ಇದೆ ಎಂದು ಕೇಳಿದ್ದೇನೆ. ಯಾರು ಯಾರು ಸಮಾಜದ ಬೇರೆ ಬೇರೆ ಕ್ಷೇತ್ರಗಳಲ್ಲಿ ದುಡಿದು ಸಮಾಜದ ಅಭಿವೃದ್ಧಿಗೆ, ಸಮಾಜದ ಪ್ರಗತಿಗೆ ಕಾರಣೀಭೂತರಾಗಿದ್ದಾರೆ. ಅವರ ಪ್ರತಿಮೆಗಳನ್ನು ಅಲ್ಲಿ ಇಟ್ಟು ಅವರ ಜೀವನ ಸಿದ್ಧಾಂತವನ್ನು ತಿಳಿಯಪಡಿಸಲು ಪ್ರತಿವರ್ಷ ಮಕ್ಕಳನ್ನು ಯುವಕರನ್ನು ಅಲ್ಲಿ ಕರೆದುಕೊಂಡು ಹೋಗುತ್ತಾರೆ. It can definitely become a source of inspiration. ಅದರ ಬದಲು ನಾವು ಎಲ್ಲೋ ಒಂದು ಪ್ರತಿಮೆಯನ್ನು ಇಡುವುದು, ಒಂದು ವರ್ಷ ಆದಮೇಲೆ ಪ್ರತಿಮೆಯ ಮುಖ ನಾಯಕರ ತರಹ ಇಲ್ಲವೆಂದು ಚಳುವಳಿ ಮಾಡುವುದು ಏನಿದೆ ಇದು ಸರಿಯಲ್ಲ. ಇದಕ್ಕೆ ಇನ್ನು ಮುಂದಾದರೂ ಆಸ್ಪದ ಕೊಡದೆ ಮುಂಬರುವ ಜನಾಂಗಕ್ಕೆ ನಿಜವಾದ ರೀತಿಯಲ್ಲ ಮಾರ್ಗದರ್ಶನ ನೀಡುವಂತಹ ಪ್ರೇರಣೆ ಕೊಡುವಂತಹ ಇಂಥ ಕೇಂದ್ರವನ್ನು ಸ್ಥಾಪಿಸುವ ವ್ಯವಸ್ಥೆ ಆಗಬೇಕು. ರಾಜ್ಯದಲ್ಲಿ ಅನೇಕರಿಗೆ ಇನ್ನೂ ಕೂಡ ಪ್ರಾಮಾಣಿಕವಾದ ರಾಜಕಾರಣ ಮಾಡಬೇಕೆಂದು ಆಸೆ ಇದೆ. ಅದಕ್ಕೆ ಅವಕಾಶ ಇದೆಯೋ ಇಲ್ಲವೋ ಗೊತ್ತಿಲ್ಲ. ಆ ರೀತಿ ಆಸೆ ಇರುವ ಯುವಕರಿಗೆ ಇಂಥ ಮಹಾತ್ಮರ ಜೀವನ ಪ್ರೇರಣೆ ಕೊಡಲಿ ಎಂದು ಆಶಿಸಿ ಆ ಮಹಾನ ಚೇತನಕ್ಕೆ ಮತ್ತು ಅವರ ಜೊತೆಗೆ ನಮ್ಮ ಮುಂದೆ ಅನೇಕ ಹಿರಿಯರು ಯಾರು ಯಾರು ಮಡಿದಿದ್ದಾರೆ ಅವರಿಗೆಲ್ಲ ಶ್ರದ್ಧಾಂಜಲಿ ಅರ್ಪಿಸಿ ನನ್ನ ಮಾತು ಮುಗಿಸುತ್ತೇನೆ.

+ ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅಧ್ಯಕ್ಷರೆ, ತಾವು ಸಂತಾಪ ಸೂಚಕ ನಿರ್ಣಯವನ್ನು ತಂದಿರುವುದಕ್ಕೆ ನಾನು ಬೆಂಬಲಿಸುತ್ತೇನೆ. ಈಗಾಗಲೇ ಆ ನಿರ್ಣಯದ ಪರವಾಗಿ ಈ ಸಭೆಯಲ್ಲಿ ಎಲ್ಲಾ ಪಕ್ಷಗಳ ನಾಯಕರು ಮಾತನಾಡಿ ತಮ್ಮ ಭಾವನೆಗಳನ್ನು ವ್ಯಕ್ತ ಮಾಡಿ ಅಗಲಿದ ನಾಯಕರ ಗುಣಗಾನ ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಅಭಿನಂದಿಸಬೇಕಾಗುತ್ತದೆ. ಏಕೆಂದರೆ, ಶ್ರೀಮಾನ್ ವೀರೇಂದ್ರ ಪಾಟೀಲ್‌ರು ತೀರಿಕೊಂಡರು ಎಂದು ಹೇಳುವ ಸಂದರ್ಭದಲ್ಲಿ ಅಧಿವೇಶನ ನಡೆಯಬೇಕಾಗಿತ್ತು. ಆಯವ್ಯಯವನ್ನು ಮಂಡನೆ ಮಾಡಬೇಕಾಗಿತ್ತು. ಈ ಸಂದರ್ಭದಲ್ಲಿ, ಯಾವ ರೀತಿಯಾದ ತೀರ್ಮಾನ ತೆಗೆದುಕೊಳ್ಳುತ್ತಾರೆಂಬುದನ್ನು ನಾವು ಎದುರು ನೋಡುತ್ತಿದ್ದೆವು. ನಾನು ತಮ್ಮ ಹತ್ತಿರ ಬಂದಂಥ ಸಂದರ್ಭದಲ್ಲಿ, ಈಗಾಗಲೇ ಸರ್ಕಾರದ ಟ್ರಜರಿ ಬೆಂಚಿನಲ್ಲಿ ತೀರ್ಮಾನ ಮಾಡಿದ್ದಾರೆ, ಆಯವ್ಯಯ ಮಂಡನೆಯ ಕಾರ್ಯಕ್ರಮವನ್ನು ಮುಂದಕ್ಕೆ ಹಾಕತಕ್ಕ ಕೆಲಸಮಾಡಿದ್ದಾರೆ ಅಂದಾಗ ನಿಜವಾಗಿ ಮಾನ್ಯ ಮುಖ್ಯ ಮಂತ್ರಿಗಳನ್ನು ಅಭಿನಂದಿಸಬೇಕಾಗುತ್ತದೆ. ಮಾನ್ಯ ವೀರೇಂದ್ರಪಾಟೀಲರ ಆಗಲಿಕೆಯ ನೋವು ಎಷ್ಟಿತ್ತು ಎಂಬುದರ ಬಗ್ಗೆ ಹೇಳುವುದಕ್ಕೆ ಸಾಧ್ಯವಿಲ್ಲ. ಇಲ್ಲಿ ಅವರ ಪಾರ್ಥಿವ ಶರೀರ ಬಂದ ಸಂದರ್ಭದಲ್ಲಿ ಕೆಲವು ಗಂಟೆಗಳ ಕಾಲ ಇದ್ದು, ನನ್ನ ಕ್ಷೇತ್ರದಲ್ಲ ಮೊದಲೇ ಗೊತ್ತಾಗಿದ್ದ ಎರಡು ಕಾರ್ಯಕ್ರಮಗಳಿಗೆ ಹೋಗಬೇಕಾಯಿತು. ಅಲ್ಲಿ ಹೋದಂಥ ಸಂದರ್ಭದಲ್ಲಿ ಜನರು ಕಾಯುತ್ತಿದ್ದರು. ಈ ಕಾರಣದಿಂದ ಕಾರ್ಯಕ್ರಮಕ್ಕೆ ಬರುವುದು ತಡವಾಯಿತು ಅಂದಾಗ ಜನರು ಸಭೆ ಸೇರಿ ಸಮಾರಂಭವನ್ನು ನಡೆಸುವುದಕ್ಕೆ ಬಿಡಲಿಲ್ಲ. ಮಾನ್ಯ ವೀರೇಂದ್ರ ಪಾಟೀಲರು ತೀರಿಕೊಂಡ ಸಂದರ್ಭದಲ್ಲಿ ಸಭೆಗಳನ್ನು ನಡೆಸತಕ್ಕದ್ದು ಉಚಿತವಲ್ಲವೆಂದು ಹೇಳಿ, ಯಾವ ರೀತಿಯಲ್ಲೂ ಸಭೆ ನಡೆಸಬಾರದೆಂದು ಎರಡೂ ಸಭೆಗಳನ್ನು ರದ್ದು ಮಾಡಿದರು. ಏತಕ್ಕೆ ಈ ಮಾತು ಹೇಳುತ್ತಿದ್ದೇನೆಂದರೆ, ಇವತ್ತು ಅವರ ಅಗಲಿಕೆಯನ್ನು ಗ್ರಾಮೀಣ ಪ್ರದೇಶದ ಜನರೂ ಕೂಡ ಗುರುತಿಸಿದ್ದಾರೆ. ಅದರ ಅನುಭವ ಅವರಿಗೆ ಆಗಿದೆ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರು ನಿಜವಾಗಿಯೂ ಕೂಡ ಸ್ವಾತಂತ್ರ್ಯ ಹೋರಾಟಗಾರರು ಕೂಡ ಆಗಿ ರಾಷ್ಟ್ರಕ್ಕೆ ಸ್ವಾತಂತ್ರ್ಯವನ್ನು ತಂದು ಕೊಡುವ ಚಳುವಳಿಯಲ್ಲಿ ಧುಮುಕಿ, ರಾಜ್ಯದ ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ ಆಡಳಿತ ಕೊಡುವಲ್ಲಿ ತನ್ನದೇ ಆದ ಒಂದು ಗುರುತನ್ನು ಮಾಡಿ ಹೋಗಿದ್ದಾರೆ. ಒಂದು ಮಾತನ್ನು ಹೇಳಬೇಕೆಂದರೆ, ಒಂದು ತೆಂಗಿನ ಮರದಲ್ಲಿ ಅನೇಕ ಗುರುತುಗಳಿರುತ್ತವೆ. ಅದರ ಅರ್ಥ ಏನು ಎಂದರೆ, ಒಂದು ಗರಿ ಮರದ ಜೊತೆಯಲ್ಲಿದ್ದು ಅದು ಬಿಟ್ಟು ಹೋಗುವಾಗ ತನ್ನದೆ ಆದ ಗುರುತನ್ನು ಮಾಡಿ ಹೋಗುವಂತೆ ವೀರೇಂದ್ರ ಪಾಟೀಲರು ತಮ್ಮ ಆಡಳಿತದ ಅವಧಿಯಲ್ಲಿ ಒಂದು ಗುರುತನ್ನು ಮಾಡಿ ಹೋಗಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಮತ್ತೊಂದು ಬಹಳ ಮುಖ್ಯವಾಗಿ ಹೇಳುವುದಾದರೆ, ವೀರೇಂದ್ರ ಪಾಟೀಲರನ್ನು ವೈಯಕ್ತಿಕವಾಗಿ ಬಲ್ಲದೇ ಇದ್ದರೂ ಕೂಡ 11 ತಿಂಗಳ ಕಾಲ ಅವರು ಮುಖ್ಯಮಂತ್ರಿಗಳಾಗಿದ್ದಾಗ ವಿಧಾನಸಭೆಯಲ್ಲಿ ಬಹಳ ಮುಖ್ಯವಾದ ಯಾವುದೋ ಹಗರಣದ ಬಗ್ಗೆ ಪ್ರಸ್ತಾಪ ಬಂದಾಗ ಅವರು 4 ಗಂಟೆಗಳ ಕಾಲ ಮಾಡಿದ ವಿಚಾರ, ಆರ್ಗ್ಯೂಮೆಂಟ್ ಬಹುಶಃ ಯಾವ ಸುಪ್ರೀಂ ಕೋರ್ಟ್ ಅಡ್ವೋಕೇಟ್ ಕೂಡ ಮಾಡದಂತಹ ರೀತಿಯಲ್ಲಿ ಮಾಡಿದ್ದನ್ನು ನೋಡಿದಾಗ ನಿಜವಾಗಿಯೂ ಕೂಡ ಅವರನ್ನು ನೋಡಿ ನಾವು ಕಲಿಯಬೇಕು. 11 ತಿಂಗಳು ಮಾತ್ರ

ಮುಖ್ಯಮಂತ್ರಿಗಳಾಗಿದ್ದರೂ ಕೂಡ ಅದು ಯಾವತ್ತೂ ಕೂಡ ನಮ್ಮ ಮನಸ್ಸಿಗೆ ಬರುತ್ತದೆ. ಅವರ ಆಡಳಿತದ ವೈಖರಿ ಯಾವ ರೀತಿ ಇತ್ತು ಎಂದರೆ ಪೆರಾಲಿಸಿಸ್ ಹೊಡೆದದ್ದು ಕೇವಲ ವೀರೇಂದ್ರ ಪಾಟೀಲರಿಗಲ್ಲ ಇಡೀ ರಾಜ್ಯದ ಆಡಳಿತ ವ್ಯವಸ್ಥೆಗೇ ಪೆರಾಲಿಸಿಸ್ ಹೊಡೆಯಿತು ಎಂಬ ಮಾತನ್ನು ಸಣ್ಣಪುಟ್ಟ ಹಳ್ಳಿಗಳಿಗೆ ಹೋದಾಗ ಕೂಡ ಜನಗಳ ಬಾಯಿಂದ ಬರುತ್ತಿದ್ದುದನ್ನು ನೋಡಿದರೆ ಅವರು ಆಡಳಿತವನ್ನು ಎಷ್ಟರಮಟ್ಟಿಗೆ ಅರಿತಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಹೇಳಿ, ಇಲ್ಲಿ ಆತ್ಮ ಇದೆಯೋ ಇಲ್ಲವೋ ಎಂಬ ಬಗ್ಗೆ ವ್ಯಾಖ್ಯಾನ ಕೂಡ ಆಯಿತು. ಆದರೂ ಕೂಡ ನಾವು ನಂಬಿಕೆಯ ಮೇಲೆ ಹೋಗತಕ್ಕವರು. ನಿಜವಾಗಿಯೂ ಕೂಡ ಆ ಆತ್ಮಕ್ಕೆ ಪುನರ್ಜನ್ಮ ಇದ್ದರೆ ಮತ್ತೆ ಅವರು ಹುಟ್ಟಿ ಬಂದು ಮತ್ತೆ ಈ ರಾಜ್ಯದ ಮುಖ್ಯಮಂತ್ರಿಯಾಗುವ ಅವಕಾಶ ಆಶಿಸಿ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಮಾಲಿಕಯ್ಯ ಗುತ್ತೇದಾರ್ : ಸನ್ಮಾನ್ಯ ಅಧ್ಯಕ್ಷರೆ, ಮಾಜಿ ಮುಖ್ಯಮಂತ್ರಿಯಾದ ಶ್ರೀಮಾನ್ ವೀರೇಂದ್ರ ಪಾಟೀಲ್ ಅವರು ಮತ್ತು ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ವಿ. ತಿಮ್ಮಯ್ಯ ಶ್ರೀಮತಿ ಲೀಲಾವತಿ ವೆಂಕಟೇಶ ಹಾಗೂ ಹಮೀದ್‌ಷಾ ಹಾಗೂ ಭಾಸ್ಕರ್ ನಾಯಿಡು ಅವರ ಸಂತಾಪಸೂಚನೆಗೆ ಬೆಂಬಲವನ್ನು ವ್ಯಕ್ತಪಡಿಸಿ ಅನೇಕ ಹಿರಿಯರು ಮಾನ್ಯ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು, ವಿರೋಧ ಪಕ್ಷದ ನಾಯಕರು ಹಲವಾರು ಸದಸ್ಯರು ದಿವಂಗತ ವೀರೇಂದ್ರ ಪಾಟೀಲಜಿಯವರು ಮಾಡಿದಂತಹ ಸೇವೆಯನ್ನು ಬಹಳ ಸವಿಸ್ತಾರವಾಗಿ ತಮ್ಮದೇ ಆದ ರೀತಿಯಲ್ಲಿ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ನಿಜವಾಗಿಯೂ ಹೈದ್ರಾಬಾದ್ ಕರ್ನಾಟಕ ಒಬ್ಬ ಧೀಮಂತ ನಾಯಕನನ್ನು ಕಳೆದುಕೊಂಡಂತಾಗಿದೆ. ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಮಾತನಾಡಿದ ಸಂದರ್ಭದಲ್ಲಿ ಬಹಳ ನೋವಿನಿಂದ ಹೇಳಿದರು. ಅವರ ಅಂತಿಮ ಸಂಸ್ಕಾರದಲ್ಲಿ ಎಷ್ಟು ಜನ ಇರಬೇಕಾಗಿತ್ತೋ ಅಷ್ಟು ಜನರು ಇರಲಿಲ್ಲ ಎಂದು. ಅದೇ ಮಾತನ್ನು ನಾವು ಎಸ್.ಎಸ್. ಪಾಟೀಲ್, ರೇವಣ್ಣ ಅವರು ಮಾತನಾಡುತ್ತಾ ಇದ್ದೇವೆ. ಇವತ್ತು ಒಬ್ಬ ಆಡಳಿತಗಾರ ಕರ್ನಾಟಕ ರಾಜ್ಯಕ್ಕೆ ಇಂತಹ ಒಂದು ಅಮೋಘ ಸೇವೆಯನ್ನು ಕೊಟ್ಟಾಗ ಅವರನ್ನು ಸ್ಮರಿಸುವಂಥಾದ್ದು ನಮ್ಮೆಲ್ಲರ ಕರ್ತವ್ಯವಾಗಿದೆ. ಹುಟ್ಟು ಆಕಸ್ಮಿಕವಾದರೂ ಕೂಡ ನಾವು ಸ್ವಾಭಾವಿಕ. ಯೌವನದಲ್ಲಿ ಸತ್ತಾಗ ನೋವುಂಟಾಗುತ್ತದೆ. ಯಾವುದೋ ಅನಾರೋಗ್ಯದಿಂದ ಸತ್ತಾಗ ನೋವುಂಟಾಗುತ್ತದೆ. ಆದರೆ ನಾವು ಸ್ವಾಭಾವಿಕವಾದಂತಹ ಸಂದರ್ಭದಲ್ಲಿ ಸಾವಿಗೆ ಹೆದರಬೇಕಾದ ಪ್ರಶ್ನೆಯೇ ಇಲ್ಲ. ದೇವರು ನಮ್ಮಿಂದ ಮೂರು ರೀತಿಯಲ್ಲಿ ನಿರೀಕ್ಷೆ ಮಾಡುತ್ತಾನೆ. ನಮ್ಮ ದೇಶದಲ್ಲಿ ಉಸಿರುವವರೆಗೆ 3 ರೀತಿಯ ಋಣವನ್ನು ತೀರಿಸಿ ನಾವು ಜೀವವನ್ನು ಬಿಡಬೇಕಾಗುತ್ತದೆ. ಆ ಮೂರು ಋಣಗಳು ಯಾವುವೆಂದರೆ, ಒಂದು ಕುಟುಂಬದ ಋಣ, ಎರಡು ಸಮಾಜದ ಋಣ ಮತ್ತು ಮೂರನೆಯದು ದೇಶದ ಋಣ. ದಿವಂಗತ ವೀರೇಂದ್ರ ಪಾಟೀಲರು ಈ ಮೂರು ಋಣಗಳನ್ನು ತೀರಿಸಿ ಇವತ್ತು ನಮ್ಮನ್ನಗಲಿ ಹೋದರೂ ಕೂಡ ಇವತ್ತೂ ನಮ್ಮ ಮಧ್ಯೆ ಜೀವಂತರಾಗಿದ್ದಾರೆ. ಯಾರು ಈ ಮೂರು ಋಣಗಳನ್ನು ತೀರಿಸದೆ ತಮ್ಮದೇ ಆದ ಭಾವನೆಯಲ್ಲಿ ಇದ್ದರೆ ಅವರು ಜೀವಂತರಾಗಿದ್ದರೂ ಕೂಡ ಸತ್ತಂತೆ. ಸಮಾಜಕ್ಕೆ ಒಳ್ಳೆಯ ಕೆಲಸವನ್ನು ಮಾಡಿ ಹೋದಂಥ ವ್ಯಕ್ತಿಗಳು ಹೋದರೂ ಕೂಡ ನಮ್ಮ ಮಧ್ಯೆ ಜೀವಂತರಾಗಿದ್ದಾರೆ ಎಂಬ ಭಾವನೆ

ವ್ಯಕ್ತಪಡಿಸುತ್ತಿದ್ದೇನೆ. ಅವರ ಸೇವೆ ಮತ್ತು ಮಾರ್ಗದರ್ಶನ ನಮಗೆ ದಾರಿದೀಪವಾಗುತ್ತದೆ ಎಂದು ಹೇಳಿ, ಶ್ರೀ ತಿಮ್ಮಯ್ಯನವರು ಶ್ರೀಮತಿ ಲೀಲಾವತಿ ಮಾಗಡಿ, ಹಮೀದ್‌ಷಾ, ಭಾಸ್ಕರ್ ನಾಯ್ಡು ಇವರೆಲ್ಲರ ಕುಟುಂಬದವರಿಗೆ ಧೈರ್ಯವನ್ನು ಭಗವಂತನು ದಯಪಾಲಿಸಲಿ ಎಂದು ಹೇಳಿ, ಮೃತರ ಆತ್ಮಕ್ಕೆ ಶಾಂತಿ ಕೋರಿ ತಮಗೆ ವಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ವೈಜನಾಥ್ ಪಾಟೀಲ್ (ಚಿಂಚೋಳಿ) : ಮಾನ್ಯ ಅಧ್ಯಕ್ಷರೆ, ವೀರೇಂದ್ರ ಪಾಟೀಲ್‌ರು ಮತ್ತು ಬೇರೆ ಅನೇಕ ಈ ಸಭೆಯ ಮಾಜಿ ಸದಸ್ಯರು ಸ್ವರ್ಗಸ್ಥರಾಗಿದ್ದು ತಾವು ಏನು ಆ ಬಗ್ಗೆ ಪ್ರಸ್ತಾವನೆಯನ್ನು ಎತ್ತಿದ್ದೀರಿ ಅದನ್ನು ಸಮರ್ಥಿಸುತ್ತಾ ವಿಶೇಷವಾಗಿ ವೀರೇಂದ್ರ ಪಾಟೀಲರ ಸಂಬಂಧ, ಪರಿಚಯ ಇದ್ದುದರ ಸಲುವಾಗಿ ನಾನು ಅವರ ಬಗ್ಗೆ ನಾಲ್ಕು ಮಾತುಗಳನ್ನು ಹೇಳಬೇಕೆಂದಿದ್ದೇನೆ. 1969ರಲ್ಲಿ ಕಾಂಗ್ರೆಸ್ ಒಡೆದಾಗ ಬಹಳಷ್ಟು ಮುಖ್ಯಮಂತ್ರಿಗಳು ವಿಶೇಷವಾಗಿ ಮಹಾರಾಷ್ಟ್ರ ಮುಖ್ಯಮಂತ್ರಿ, ಆಂಧ್ರದ ಮುಖ್ಯಮಂತ್ರಿ ಇವರೆಲ್ಲರೂ ಅಂದಿನ ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರ ಜೊತೆ ಹೋಗಿ ಅವರು ತಮ್ಮ ಮುಖ್ಯಮಂತ್ರಿತ್ವವನ್ನು ಅನೇಕ ವರ್ಷಗಳವರೆಗೂ ಉಳಿಸಿಕೊಂಡು ಬಂದರು. ಬಹುಶಃ ವೀರೇಂದ್ರ ಪಾಟೀಲರು ಕೂಡ ಅದೇ ದಾರಿಯಲ್ಲಿ ಹೋಗಿದ್ದರೆ ಅನೇಕ ವರ್ಷಗಳಾದರೂ ಅವರು ಮುಖ್ಯಮಂತ್ರಿಯಾಗಿ ಮುಂದುವರೆಯಬಹುದಾಗಿತ್ತು. ಆದರೆ ಅವರು ಆ ಕಾಲದಲ್ಲಿ ನಿಜಲಿಂಗಪ್ಪ ಅವರಿಗೆ ಲಾಯಲ್ ಇದ್ದರು. ಯಾರು ಜೊತೆ ಇದ್ದರು ಅವರಿಗೆ ದ್ರೋಹ ಮಾಡಬಾರದು. ಏಕೆಂದರೆ ಅನೇಕ ಸಲ ನಾನು ಆ ಪಕ್ಷದಲ್ಲಿ ಇಲ್ಲದಿದ್ದರೂ ನಾನು ಸಮಾಜವಾದಿ ಪಕ್ಷದಲ್ಲಿದ್ದರೂ ಕೂಡ ಬೀದರ್ ಗುಲ್ಬರ್ಗಾ ಜಿಲ್ಲೆಯಲ್ಲಿ ಅವರ ಬಗ್ಗೆ ಅಭಿಮಾನ ಇರುವವರೆಲ್ಲರೂ ಹೋಗಿ ಅವರಿಗೆ ಸಲಹೆ ಕೊಟ್ಟರು. ಇನ್ನು ತಾವೂ ಕೂಡ ಕಾಂಗ್ರೆಸ್ (ಆರ್)ನಲ್ಲಿ ಜಾಯಿನ ಆಗಬೇಕು. ಹಾಗೆಯೇ ಮುಖ್ಯಮಂತ್ರಿತ್ವವನ್ನೂ ವಹಿಸಿಕೊಂಡು ಆ ಭಾಗದ ಪ್ರಗತಿ ಮಾಡಬೇಕೆಂದು ಕೇಳಿಕೊಂಡರೂ ಕೂಡ ಅವರು ಒಪ್ಪಿಕೊಳ್ಳಲಿಲ್ಲ. ಮುಂದೆ ಕೆಲವೇ ದಿವಸಗಳಲ್ಲಿ ಮತ್ತೆ ಆ ಭಾಗದ ಮತ್ತು ಬೇರೆ ಅನೇಕ ಜನ ಕಾಂಗ್ರೆಸ್ಸಿಗರು ಅವರನ್ನು ಬಿಟ್ಟು ಕಾಂಗ್ರೆಸ್ (ಐ)ನಲ್ಲಿ ಅಥವಾ ಕಾಂಗ್ರೆಸ್ (ಆರ್)ನಲ್ಲಿ ಜಾಯಿನ ಆದ ನಂತರ ಯಾವುದೇ ಕಹಿ ಮಾತನಾಡದೆ ತಮ್ಮ ರಾಜೀನಾಮೆ ಕೊಟ್ಟು ಹೊರಗೆ ಬಂದರು. ಮುಂದೆ ಬರಬರುತ್ತಾ ಎಮರ್ಜೆನ್ಸಿ ಬಂತು, ಅದು ಮುಗಿದ ಮೇಲೆ ಸಮಾಜವಾದಿ ಪಕ್ಷ, ಸಂಸ್ಥಾ ಕಾಂಗ್ರೆಸ್, ಭಾರತೀಯ ಜನಸಂಘ, ಸ್ವತಂತ್ರ ಪಾರ್ಟಿ ಇವೆಲ್ಲಾ ಕೂಡ ರಾಜ್ಯದ ಅಧ್ಯಕ್ಷರನ್ನಾಗಿ ಅವರನ್ನು ಆಯ್ಕೆ ಮಾಡಿದರು. 1977ರಲ್ಲಿ ಪಾರ್ಲಿಮೆಂಟ್‌ಗೆ ಚುನಾವಣೆ ಆಯಿತು. ಅದರಲ್ಲಿ ಕರ್ನಾಟಕ ಮತ್ತು ಆಂಧ್ರದ ಟ್ರೆಂಡ್ ಏನೆಂದರೆ, ಇಡೀ ದೇಶದಲ್ಲಿ ಉತ್ತರ ಭಾರತದಲ್ಲಿ ಎಲ್ಲಾ ಕಡೆ ಜನತಾ ಪಕ್ಷ ಬಂದಾಗ ಇಲ್ಲಿ ಕಾಂಗ್ರೆಸ ಪಕ್ಷ ಅಧಿಕಾರಕ್ಕೆ ಬಂತು. ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಇಲ್ಲಿ ಶುರು ಮಾಡಿದರು. ಪಾರ್ಲಿಮೆಂಟಿಗೆ ನಮ್ಮಿಂದ ಬಹಳಷ್ಟು ಸದಸ್ಯರು ಆರಿಸಿ ಬಂದಿಲ್ಲ, ನೀವು ಅಧ್ಯಕ್ಷ ಸ್ಥಾನ ಬಿಟ್ಟು ಕೊಡಬೇಕೆಂದು ನಮ್ಮ ಪಕ್ಷದಲ್ಲಿ ಬಹು ದೊಡ್ಡ ಹೋರಾಟ ಪ್ರಾರಂಭವಾಯಿತು. ಆದರೆ ಆಂಧ್ರದಲ್ಲಿ ಆಗಲಿಲ್ಲ. ಅವರ ನೇತೃತ್ವ ಸೋತಿಲ್ಲ, ಆದರೆ ಇದನ್ನೇ ಗೂಬೆ ಮಾಡಿ ಅವರಿಗೆ ಅಧ್ಯಕ್ಷ ಪದವಿ ಬಿಡಿಸಲಾಯಿತು. ಮುಂದೆ 1978ರ ಚುನಾವಣೆಯಲ್ಲಿ ಅವರು ಅಧ್ಯಕ್ಷರಾಗಿರಲಿಲ್ಲ, ಆದರೂ ಕೂಡ ನಮಗೆ ಅಂದರೆ ಆಂಧ್ರದಲ್ಲಿ ಮತ್ತು ಕರ್ನಾಟಕದಲ್ಲಿ ಸೋಲಾಯಿತು.

ಅದಕ್ಕೆ ಅವರು ಕಾರಣರಲ್ಲ. ಬರಬರುತ್ತಾ ಬಹಳ ಆರ್ಗನೈಸೇಷನ್ ಚುನಾವಣೆಗಳಾದವು. ಏನಾದರೂ ಮಾಡಬೇಕೆಂಬುದು ಅವರದ್ದೊಂದು ಸ್ವಭಾವ. ಯಾರೂ ಖುಷಾಮತ್‌ನವರು ಇದ್ದಿಲ್ಲ ವೀರೇಂದ್ರ ಪಾಟೀಲರಿಗೆ. ಯಾರೂ ಪ್ಲೀಸ್ ಮಾಡುವವರಿದ್ದಿಲ್ಲ. ಆ ದೃಷ್ಟಿಯಿಂದ ಬಹಳಷ್ಟು ನಾಯಕರು ಇವರಿಗೇ ಅಧ್ಯಕ್ಷ ಆಗಬೇಕು ಎಂದು ಹೇಳಿದರು. 1978-79ರಲ್ಲಿ ಮತ್ತೆ ಆರ್ಗನೈಸೇಷನ್ಸ್ ಚುನಾವಣೆಗಳಾದವು. ಏನೇ ಮಾಡಿ ಅವರನ್ನು ಬರಗೊಡಬಾರದು ಎಂಬ ವ್ಯವಸ್ಥೆಯಾಯಿತು. ಪುನಃ ಕೇಂದ್ರದಲ್ಲಿ ಅಂದಿನ ಸರ್ಕಾರ ಒಡೆಯಿತು. ಆಗ ಶ್ರೀಮತಿ ಇಂದಿರಾಗಾಂಧಿಯವರು ಇವರಿಗೆ ಇನ್‌ವೈಟ್ ಮಾಡಿದರು ನೀವು ಕಾಂಗ್ರೆಸ್‌ನಲ್ಲಿ ಬರಬೇಕು ಎಂದು. ಹಾಗೆ ಅವರು ನಿರ್ಣಯ ಕೂಡ ತೆಗೆದುಕೊಂಡರು. ಬಹಳಷ್ಟು ಜನರನ್ನು ಕೇಳಲಿಲ್ಲ. ನಮ್ಮ ಜಿಲ್ಲೆಯ ಶಾಸಕರು ಶ್ರೀ ಗೋವಿಂದ ಪಿ. ಒಡೆಯರಾಜ, ಶ್ರೀ ಅಣ್ಣಾರಾವ್, ಶ್ರೀ ಮಲಕರೆಡ್ಡಿ ಮೂರು ನಾಲ್ಕು ಜನ ಇದ್ದರು. ಅವರಿಗೆ ಮಾತ್ರ ಕೇಳಿದರು. ಆಗ ನಾನು ಜಿಲ್ಲಾ ಅಧ್ಯಕ್ಷನಾಗಿದ್ದೆ. ಜನತಾಪಕ್ಷದ ಜಿಲ್ಲಾ ಅಧ್ಯಕ್ಷನಿದ್ದರೂ ನಾನು ಯಾರನ್ನೂ ಕೇಳುವುದಿಲ್ಲ. ನನ್ನ ತಾಲ್ಲೂಕು ಅದು, ಚಿಂಚೋಳಿ ತಾಲ್ಲೂಕು. ನಮ್ಮದು ಅವರದು ರಿಲೇಷನ್‌ಷಿಪ್ ಇದ್ದರೂ ಕೂಡ ನಾನು ತಾಲ್ಲೂಕಾ ಪ್ರೆಸಿಡೆಂಟ್ ಇದ್ದೆ. ಅವರು ರಾಜ್ಯದ ಅಧ್ಯಕ್ಷರಾಗಿದ್ದರು. ಅನಂತರ ನಾನು ಜಿಲ್ಲಾಧ್ಯಕ್ಷನಾದೆ. ಅವರು ಮುಂದೆ ರಾಜ್ಯದ ಅಧ್ಯಕ್ಷರಾಗಬೇಕಾಗಿತ್ತು, ಅದಕ್ಕೆ ವಿರೋಧವಾಯಿತು. ಅವರಿಗೆ ಆಗಲಿಕ್ಕೆ ಸಾಧ್ಯ ಆಗಲಿಲ್ಲ. ಇಂದಿರಾಗಾಂಧಿಯವರು ಇನ್‌ವೈಟ್ ಮಾಡಿದ್ದಾರೆ. ನಾವೆಲ್ಲಾ ಹೋಗಬೇಕಾಗಿದೆ. ನೀನೂ ಕೂಡ ನನ್ನ ತಾಲ್ಲೂಕಿನವನು. ನನಗೆ ಪ್ರಶ್ನೆ ಕೇಳುತ್ತಾರೆ ನಿಮ್ಮ ತಾಲ್ಲೂಕಿನ ಅಧ್ಯಕ್ಷರು ಬರುತ್ತಿಲ್ಲ ಏಕೆ ಎಂದು, ಅದಕ್ಕ ನೀನು ಬರಬೇಕು ಎಂದು ಹೇಳಿದರು. ಆಗ ನಾನು ಅವರಿಗೆ ಕೇಳಿಕೊಂಡೆ, ಪಕ್ಷದಲ್ಲಿ ಏನು ಗುಂಪುಗಾರಿಕೆ ಇತ್ತು, ರಾಜ್ಯ ಮಟ್ಟದ ಅಧ್ಯಕ್ಷ ಪದವಿಗೆ ಏನು ಕಾಂಟೆಸ್ಟ್ ಆಯಿತು ಅದೆಲ್ಲದರಲ್ಲಿ ನಾವು ವೀರೇಂದ್ರಪಾಟೀಲರ ಜೊತೆಗಿದ್ದೆವು. ಅವರನ್ನು ತೆಗೆಯಬೇಕು ಎಂದಾಗ ಇಲ್ಲ ಅವರೇ ಇರಬೇಕು ಎಂದು ಹೇಳಿದವರು ನಾನು ಮತ್ತು ಒಡೆಯರಾಜ್. ಕೊನೆಗೆ ಬೆಳೆಯುತ್ತಾ ಬೆಳೆಯುತ್ತಾ ಏನಾಯಿತು ಅಂದರೆ ಅವರಿಗೆ ಆಗಗೊಡಲಿಲ್ಲ. ಅವರ ಜೊತೆ ನಾನು ಹೇಳಿದೆ. ಅವರು ನನಗೆ ಹೇಳಿದರು. ನನಗೆ ಬಹಳ ಹ್ಯುಮಿಲಿಯೇಟ್ ಮಾಡಿದ್ದಾರೆ, ಗೋಡೆಗೆ ತಳ್ಳುತ್ತಿದ್ದಾರೆ, ಹೇಗಿರಬೇಕು ಹೇಳಿರಿ ಎಂದು ಕೇಳಿದರು. ಅದೆಲ್ಲಾ ಇದ್ದರೆ ಬೇಕಾದರೆ ನೀವು ಬೇರೆ ಒಂದು ಪಕ್ಷ ಮಾಡಿ, ಏಕೆಂದರೆ ತಾವು ಕಾಂಗ್ರೆಸ್‌ನಲ್ಲಿದ್ದವರು, ನಾನು ಎಂದೂ ಕಾಂಗ್ರೆಸ್‌ನಲ್ಲಿದ್ದಿಲ್ಲ. ನಾನು ಸಮಾಜವಾದಿ ಪಕ್ಷದಲ್ಲಿ ಅಂದರೆ ಅಂಟಿ ಕಾಂಗ್ರೆಸ್ ಮೂವ್‌ಮೆಂಟಿನಲ್ಲಿ ಬೆಳೆದವನು, ನನಗೆ ಬಹಳ ತ್ರಾಸವಾಗುತ್ತದೆ. ಆ ದೃಷ್ಟಿಯಿಂದ ತಾವು ಕಾಂಗ್ರೆಸ್ಸಿಗೆ ಸೇರದೆ ಕರ್ನಾಟಕ ಜನತಾ ಪಾರ್ಟಿ ಎಂದು ಮಾಡಿ, ನಾವೆಲ್ಲಾ ನಿಮ್ಮ ಜೊತೆಯಲ್ಲಿರುತ್ತೇವೆ ಎಂದು ಹೇಳಿದೆ. ಲೋಕದಳ ಸೇರಬೇಕು ಅಂತೀರೋ ಅಥವಾ ನಿಮ್ಮದೇ ಒಂದು ಪ್ರಾದೇಶಿಕ ಪಕ್ಷ ಕಟ್ಟಿರಿ, ನೀವು ಶಕ್ತಿಶಾಲಿ ಇದ್ದೀರಿ. ನಾವು ನಿಮ್ಮ ಜೊತೆ ಇರುತ್ತೇವೆ. ಕಾಂಗ್ರೆಸ್ಸಿಗಾದರೆ ನಮಗೆ ತ್ರಾಸವಾಗುತ್ತದೆ; ನಮಗೆ ಮುಜುಗರವಾಗುತ್ತದೆ ಎಂದು ಹೇಳಿದಾಗ ಅವರು ಬಹಳ ಅಪ್ರಿಷಿಯೇಟ್ ಮಾಡಿದರು. ನಮಗೆಂದೂ ಒತ್ತಾಯ ಮಾಡಲಿಲ್ಲ. ಅವರು ಕಾಂಗ್ರೆಸ್ಸಿನಲ್ಲಿ ಜಾಯಿನ್ ಆದರು. ನಾವು ಹಾಗೇ ಜನತಾಪಕ್ಷದಲ್ಲಿ ಉಳಿದೆವು. ಬಹಳಷ್ಟು ಸಲ ವೀರೇಂದ್ರಪಾಟೀಲರು ಸಮರ್ಥರಿದ್ದಾರೆ ಎಂದು ಅನ್ನಿಸಿದರೂ ಅದೇ ತ್ರಾಸ ಮಾಡಿಕೊಳ್ಳುತ್ತಾ

ಹೋರಾಟ ಮಾಡಿಕೊಳ್ಳುತ್ತಾ ಕೊನೆಗೆ ಉಳಿದೆವು. ಕೊನೆಗೆ ಅವರು ಹೋಗುವ ಕಾಲಕ್ಕೆ ಹೇಳಿದರು. ಚಿಂಚೋಳಿ ತಾಲ್ಲೂಕಾ ನಿನ್ನದೇ. ನಾನು ಪುನಃ ಬರುವಹಾಗಿಲ್ಲ. ಚಿಂಚೋಳಿ ತಾಲ್ಲೂಕನ್ನು ನಾನು ಅನೇಕ ವರ್ಷಗಳಿಂದ ಚೆನ್ನಾಗಿ ನಡೆಸಿಕೊಂಡು ಬಂದಿದ್ದೆ. ಈಗ ಅದನ್ನು ಕೆಡಿಸಿದ್ದಾರೆ. ನೀನೇ ಅದರ ಸಕ್ಸೆಸರ್ ಇರಬೇಕು. ನಾನು ಚಿಂಚೋಳಿಗೆ ಬರುವುದಿಲ್ಲ. ಅದನ್ನು ನರ್ಸ್ ಮಾಡಬೇಕು ಎಂದು ಪದೇ ಪದೇ ಕೇಳಿಕೊಂಡರು. ಕೊನೆಗ ಅವರು ಬಿಟ್ಟುಹೋದರು. ಅವರು ಹೇಳಿದರು, ಇಲ್ಲಿ ನನಗೆ ತಳ್ಳುತ್ತಿದ್ದಾರೆ, ಅವರು ಕರೆಯುತ್ತಿದ್ದಾರೆ. ನಿಮ್ಮದು ಭವಿಷ್ಯ ಅದರಲ್ಲೇ ಭಲೋ ಇದೆ ಎಂದು ಬಹಳಷ್ಟು ಸಲ ಹೇಳಿದರೂ ಕೂಡ ಒಂದು ತಾತ್ವಿಕ ದೃಷ್ಟಿಯಿಂದ ಹೋಗಲಿಲ್ಲ. ಕೊನೆಗೆ ಅವರ ಮೇಲೆ ಜನ ಬಹಳಷ್ಟು ಟೀಕೆ ಮಾಡಿದರು. ಜಿಲ್ಲಾ ಅಧ್ಯಕ್ಷರು ಚಿಂಚೋಳಿ ತಾಲ್ಲೂಕಿನವರೇ, ನಿಮ್ಮ ತಾಲ್ಲೂಕಿನವರೇ ಆಗಿ ನಿಮ್ಮ ಜೊತೆ ಬರುತ್ತಾ ಇಲ್ಲ ಎಂದಾಗ, ಇಲ್ಲ ಅವರು ವೈಚಾರಿಕ ಮತಭೇದದಿಂದ ಬರುತ್ತಿಲ್ಲ, ವೈಯಕ್ತಿಕವಾಗಿ ಇಲ್ಲ ಎಂದು ಹೇಳಿ ನಾನು ಟೀಕೆಯಂತೂ ಮಾಡಲಿಲ್ಲ. ಕೊನೆಗೆ ಹೋಗಿ ಕೇಂದ್ರದಲ್ಲಿ ಅವರು ಮಂತ್ರಿಗಳು ಕೂಡ ಆದರು. ಮುಖ್ಯಮಂತ್ರಿ ಕೂಡ ಆಗುವ ಅವಕಾಶ ಬಂತು. ಅವರು ಇಡೀ ರಾಷ್ಟ್ರದ ಮತ್ತು ರಾಜ್ಯದ ನಾಯಕರಾಗಿದ್ದರೂ ಕೂಡ ಹೈದರಾಬಾದ್ ಕರ್ನಾಟಕದ ಬಗ್ಗೆ ಹಿಂದುಳಿದ ಪ್ರದೇಶ, ನಿಜಾಮರ ರಾಜ್ಯ, ಆ ಮೂರು ಜಿಲ್ಲೆಗಳ ಬಗ್ಗೆ ಬಹಳಷ್ಟು ಅಭಿಮಾನ ಇಟ್ಟುಕೊಂಡಿದ್ದರು. ಮೊದಲು ಅವಕಾಶ ಸಿಗಲಿಕ್ಕಿಲ್ಲ. 1969ರಲ್ಲಿ ಆ ಭಾಗ ಮುಂದೆ ಬರಬಹುದಾಗಿತ್ತು. ಅವಕಾಶ ಸಿಗಲಿಲ್ಲ ಕಾಂಗ್ರೆಸ ಒಡೆದು. ಆ ಅವಕಾಶ ಪುನಃ ಬಂದಿದೆ. 1989ರಲ್ಲಿ ಚುನಾವಣೆ ಆದನಂತರ ಮುಖ್ಯಮಂತ್ರಿ ಆದನಂತರ ಅವಕಾಶ ಬಂದಾಗ ಆ ಭಾಗಕ್ಕೆ ಪ್ರಗತಿ ಮಾಡಬೇಕೆಂದು ಇಚ್ಛೆಇತ್ತು. ದುರ್ದೈವದಿಂದ ಅವರು ಅಧಿಕಾರ ಕಳೆದುಕೊಳ್ಳಬೇಕಾಯಿತು. ಆದರೆ ಪುನಃ ಪುನಃ ಅವರು ಹೇಳುತ್ತಾ ಇದ್ದರು. ನಾನು ಸತ್ತನಂತರ ಇದೇ ಮಣ್ಣಿನಲ್ಲಿ ನನ್ನ ದೇಹ ಸೇರಬೇಕಾಗಿದೆ ಎಂದು. ಕೊನೆಗೆ ಅವರನ್ನು ಅಲ್ಲೇ ತಂದರು. ಅವರ ಸ್ವಭಾವ ಏನೆಂದರೆ ಬಹಳ ಕಡಿಮೆ ಮಾತನಾಡುತ್ತಿದ್ದರು. ಯಾವುದಾದರೂ ನಮ್ಮದು ಅವರದು ರಿಲೇಷನಷಿಪನಲ್ಲಿ ಫ್ಯಾಮಿಲಿ ಡಿಸಪ್ಯೂಟ್ಸ ಇದ್ದರೂ ಕೂಡ ನಿನ್ನೆ ಅವರ ಅಂತ್ಯಕ್ರಿಯೆ ಎಲ್ಲಾಯಿತು. ಆ ಜಮೀನು ಬಗ್ಗೆ ಕೂಡ ಡಿಸಪ್ಯೂಟ ಇದ್ದರೆ ಕರೆದು ಕೇಳುತ್ತಿದ್ದರು. ಇದರಲ್ಲಿ ಏನು ಡಿಸಪ್ಯೂಟ ಇದೆ ಎಂದು. ಹೀಗೆ ಇಷ್ಟಿಷ್ಟಿದೆ ಎಂದರೆ ಅರ್ಧ ನೀವು ಇಟ್ಟುಕೊಳ್ಳಿರಿ, ಅರ್ಧ ನಾವಿಟ್ಟುಕೊಳ್ಳುತ್ತೇವೆ ಎಂದು ಹೇಳುತ್ತಿದ್ದರು. ಅದು ಹಾಗೆಯೇ ಆಯಿತು. ಅವರು ಅದೇ ಹೇಳಿದರು. ರೋಡ್‌ಸೈಡಿನಲ್ಲಿ ನಮಗೆ ಫ್ಯಾಮಿಲಿ ಗ್ರೇವೆಯಾರ್ಡ್ ಮಾಡಬೇಕಾಗಿದೆ. ಯಾವುದೇ ಡಿಸ್‌ಪ್ಯೂಟಿಗೆ ಹೋಗದೆ ಅರ್ಧ ನೀವು ಅರ್ಧ ನಾವು ಇಟ್ಟುಕೊಳ್ಳೋಣ ಎಂದು ಒಂದೇ ಮಾತಿನಲ್ಲಿ ಮುಗಿಸುತ್ತಿದ್ದರು. ಅಂಥ ವ್ಯಕ್ತಿ ಅವರು. ರಾಜಕೀಯ ಕಾರಣಗಳಿಂದ ನಮ್ಮದು ಅವರದು ಬೇರೆ ಬೇರೆ ಅಭಿಪ್ರಾಯ ಇತ್ತು. 1989ರಲ್ಲಿ ಚುನಾವಣೆ ಆಯಿತು. ನಾನು ಅವರ ವಿರುದ್ಧ ಒಂದು ಪಕ್ಷದ ಸಿಪಾಯಿಯಾಗಿ ಹೋರಾಡಿದೆ ಸೋತೆ. ಅವರು ತಮ್ಮ ಜೀವನದಲ್ಲಿ ಎಂದೂ ಸೋತಿಲ್ಲ. ಕೇವಲ ಚಿಕ್ಕಮಗಳೂರಿನಲ್ಲಿ ಮಾತ್ರ ಸೋತರು ಇಂದಿರಾಗಾಂಧಿಯವರ ವಿರುದ್ಧ. ಯಾರ ವಿರುದ್ಧ ಸೋತರೋ ಅವರನ್ನು ಇಂದಿರಾಗಾಂಧಿಯವರು ಕರೆದರು, ಮತ್ತೆ ಅಧಿಕಾರ ಕೊಟ್ಟರು, ಮುಖ್ಯಮಂತ್ರಿ ಕೂಡ ಮಾಡಿದರು. ಆದರೆ ಅವರು ಮುಖ್ಯಮಂತ್ರಿಯಾಗಿ ಇನ್ನೂ ನಾಲ್ಕೈದು ವರ್ಷ ಉಳಿದಿದ್ದರೆ ಒಳ್ಳೆಯ ರೀತಿಯಿಂದ ನಮ್ಮ ಭಾಗವನ್ನು ಮುಂದೆ ತರಬಹುದಾಗಿತ್ತು. ದುರ್ದೈವದಿಂದ ಹಾಗೆ ಆಗಲಿಲ್ಲ. ಆ ದೃಷ್ಟಿಯಿಂದ ಈ ಸಂದರ್ಭದಲ್ಲಿ

ತಾವು ಏನು ಪ್ರಸ್ತಾವ ತಂದಿದ್ದೀರಿ ಅದನ್ನು ಸಮರ್ಥಿಸುತ್ತಾ ಅವರ ಆತ್ಮಕ್ಕೆ ಗೌರವ ಸಿಗಲಿ ಎಂದು ಹೇಳಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಚಂದ್ರಶೇಖರ್ ರೆಡ್ಡಿ ದೇಶಮುಖ್ ಮದನ್(ಸೇಡಂ) : ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ವೀರೇಂದ್ರಪಾಟೀಲರನ್ನು ನಮ್ಮ ಗುರುಗಳು ಎಂದರೂ ಕೂಡ ತಪ್ಪಾಗಲಾರದು. ಏನು ದೊಡ್ಡ ಭಾವನೆ ಅವರ ವಿಷಯದಲ್ಲಿದೆ, ಅವರೇ ನನ್ನನ್ನೂ ರಾಜಕಾರಣದಲ್ಲಿ ತಂದಿದ್ದಾರೆ. ಮೊಟ್ಟಮೊದಲು 1960-61ರಲ್ಲಿ ಒಂದು ಚುನಾವಣೆ ಆಯಿತು. ಆ ಹೊತ್ತಿನಲ್ಲಿ ನಮ್ಮ ಸೇಡಂ ತಾಲ್ಲೂಕಾ ರಿಸರ್ವ್ ಕಾನ್‌ಸ್ಟಿಟ್ಯುಯೆನ್ಸಿ ಕಾಂಗ್ರೆಸ್ ಕಡೆಯಿಂದ ಮಾನ್ಯ ಶಂಕರಸ್ವಾಮಿ ಎನ್ನುವವರು ಅಧ್ಯಕ್ಷರಿದ್ದರು. ಆ ಹೊತ್ತಿನಲ್ಲ ಸೇಡಂ ಕಾನ್‌ಸ್ಟಿಟ್ಯುಯೆನ್ಸಿ ಏನಿದೆ ಬೇರೆ ಜಾಗದಲ್ಲಿ ಕಾಂಗ್ರೆಸ್ ಇದ್ದರೂ ಕೂಡ ಆ ಕಾನ್‌ಸ್ಟಿಟ್ಯುಯೆನ್ಸಿ ಒಂದು ಬೇರೆ ನಮೂನೆಯಲ್ಲಿ ವ್ಯವಹಾರ ಮಾಡುತ್ತಿತ್ತು ಅದು. ಯಾವಾಗಲೂ ಕಾಂಗ್ರೆಸ್ ವಿರುದ್ಧ ಅದು. ಆ ಸಂದರ್ಭದಲ್ಲಿ ವೀರೇಂದ್ರಪಾಟೀಲರು ಟೂರ್ ಹಾಕಿದಾಗ ನನ್ನನ್ನು ಕರೆಸಿದ್ದರು. ಯಾವಾಗಲೂ ಅವರು ನಾವು ಮಾತನಾಡುವಾಗ ಉರ್ದುವಿನಲ್ಲೇ ಮಾತನಾಡುತ್ತಿದ್ದೆವು. ಅವರು ಹೇಳಿದರು. (ಉರ್ದುವಿನಲ್ಲಿ ಹೇಳಿದರು) ಆ ಹೊತ್ತಿನಲ್ಲಿ ನಾನು ಸಣ್ಣತನದಲ್ಲಿ ಶಿಕಾರಿ ಕಾರ್ಯದಲ್ಲಿ ನನಗೆ ಇಂಟೆರೆಸ್ಟ್ ಇತ್ತು. ಆ ಇಂಟರೆಸ್ಟ್ ಇದ್ದ ಸಲುವಾಗಿ, ಹೋಗಿ ಅವರಿಗೆ ಹೇಳಿಕೊಂಡಾಗ ನನಗೂ ಏನೋ ಅಭಿಮಾನ ಇತ್ತು. ನಮ್ಮ ಕ್ಯಾಂಡಿಡೇಟ್ ಗೆದ್ದು ಬಂದರು. ಆ ತರುವಾಯ ಟಿ.ಡಿ.ಬಿ. ಎಲೆಕ್ಷನ್ ಗೆಲ್ಲಬೇಕು ನೋಡು ಎಂದು ಹೇಳಿದರು. ನಾನು ಹೇಳಿದೆ ನೋಡ್ರಿ, ಸೇಡಂ ಅಂದರೆ ಶಂಕರ ಸ್ವಾಮಿ, ಜೇವರ್ಗಿ ಅಂದರೆ ನೀಲಕಂಠಪ್ಪ ದೇವರಮನಿ, ಚಿತ್ತಾಪುರಕ್ಕೆ ಹೋದರೆ ಎಸ್. ರುದ್ರಪ್ಪ ಇದ್ದಾರೆ. ನಮಗೂ ಕೂಡ ಕೆಲವು ಅಭಿಮಾನಿಗಳಿದ್ದಾರೆ. ನಮಗೆಲ್ಲಾ ಸ್ವಲ್ಪ ಐಡೆಂಟಿಫೈ ಮಾಡಿ, ನಮ್ಮನ್ನೂ ಹೊರಗೆ ತನ್ನಿ, ಹೊರಗೆ ತಂದು ಜಮೇದಾರಿ ಒಪ್ಪಿಸಿ; ನಾವೂ ಕೂಡ ಏನಾದರೂ ಮಾಡಿ ತೋರಿಸುತ್ತೇನೆ, ನೀನು ಯಾರಿಗೆ ಬೇಕಾದರೂ ತೆಗೆದುಕೊಂಡು ಮೆಜಾರಿಟಿ ತರಬೇಕು ಎಂದು ಹೇಳಿದರು. ಆಗ ನಿಜವಾಗಿ ಅಂದರೆ ಅವರ ಆಶೀರ್ವಾದದಿಂದ ಕಂಪ್ಲಿಟ್ ಮೆಜಾರಿಟಿ ತಂದು ಟಿ.ಡಿ.ಬಿ. ಅಧ್ಯಕ್ಷ ಕೂಡ ನಾನು ಆದೆ. ಆಮೇಲೆ 1974ರಲ್ಲಿ ಪಾರ್ಲಿಮೆಂಟಿನ ಉಪಚುನಾವಣೆ ಬಂತು. ಆಗ ನಾನು ನಿಜವಾಗಿ ಪಾರ್ಲಿಮೆಂಟಿಗೆ ಹೋಗಬೇಕೆಂದು ಕನಸು ಕೂಡ ಕಂಡಿರಲಿಲ್ಲ. ಅವರ ಸಡೆನ್ನಾಗಿ ಸಿದ್ದರಾಮರೆಡ್ಡಿಯವರ ವಿರುದ್ಧ ಪಾರ್ಲಿಮೆಂಟಿಗೆ ಕ್ಯಾಂಡಿಡೇಟ್ ಆಗಿ ನನ್ನನ್ನು ನಿಲ್ಲಿಸಿದರು. ನಾನೆಂದೆ ನನಗಿಂತ ಹೆಚ್ಚಿಗೆ ಓದಿದವರು, ನನಗಿಂತ ಹೆಚ್ಚಿನ ಅರ್ಹತೆ ಇರುವವರು ಗುಲ್ಬರ್ಗಾದಲ್ಲಿದ್ದಾರೆ, ಅವರಿಗೆ ಯಾರಿಗಾದರೂ ಟಿಕೆಟ್ ಕೊಡಿ ನನ್ನನ್ನು ಏತಕ್ಕೆ ಇದರೊಳಗೆ ಎಳೆಯುತ್ತೀರಿ ಎಂದು ಕೇಳಿದೆ. ಏತಕ್ಕೆ ಭಯ ಪಡುತ್ತೀರಿ, ನಾನು ಇದ್ದೇನೆ, ನನ್ನ ಮಾತು ಕೇಳು ಎಂದು ಹೇಳಿದರು. ಅದಕ್ಕೆ ನೀವೇ ನಿದರ್ಶನ, ನಿಮ್ಮ ಮರ್ಜಿ ಪ್ರಕಾರ ಆಗಲಿ ಎಂದು ಹೇಳಿದೆ. ಆಗ ಪಾರ್ಲಿಮೆಂಟ್ ಎಲೆಕ್ಷನ್ ಆಯಿತು. ನಮ್ಮ ಅಮ್ಮಾವ್ರು ಲೀಲಾದೇವಿ ಪ್ರಸಾದ ಅವರೂ ಎಲೆಕ್ಷನ್‌ಗೆ ಬಂದಿದ್ದರು. ಬಹಳ ಜನ ಬಂದಿದ್ದರು. ಚಂದ್ರಶೇಖರ್ ರೆಡ್ಡಿ ಯಾರು ಎಂದು ಅನೇಕರಿಗೆ ಗೊತ್ತಿರಲಿಲ್ಲ. ಎಲ್ಲರೂ ಬಂದು ನನ್ನನ್ನು ಮಾತನಾಡಿಸುತ್ತಿದ್ದರು. ನನಗೆ ಒಂದು ರೀತಿಯಲ್ಲಿ ಅದರ ಅಡ್ವಾಂಟೇಜ್ ಸಿಕ್ಕಿತು. ಆ ಸಂದರ್ಭದಲ್ಲಿ ರಾಜಕಾರಣದಲ್ಲಿ ಚಂದ್ರಶೇಖರರೆಡ್ಡಿ ಯಾರು ಎಂದು ಬಹಳಷ್ಟು ಜನರು

ಗುರುತಿಸುವ ಹಾಗೆ ಆಯಿತು. ಆ ಸಂದರ್ಭದಲ್ಲಿ ನಾನು 1974ರಲ್ಲಿ ಟಿ.ಡಿ.ಬಿ. ಎಲೆಕ್ಷನ್‌ನಲ್ಲಿ ಪ್ರೆಸಿಡೆಂಟ್ ಆದಮೇಲೆ, ಆ ಹೊತ್ತಿನಲ್ಲಿ ದುರ್ದೈವದಿಂದ ನನ್ನ ಮಗಳಿಗೆ ಆಕ್ಸಿಡೆಂಟ್ ಆಯಿತು. ಆ ಹೊತ್ತಿನಲ್ಲಿ ನಾನು ಮೊದಲು ಅವರಿಗೆ ಫೋನಮಾಡಿದೆ. ಆಗ ಅವರು ಹೇಳಿದರು. "ಮೈ ಗಾಡಿ ಭೇಜದಿಯಾ ಹೂ. ಜಲ್ದಿ ದೋ ಮಿನಿಟಕೆಲಿಯ ಆವೋ"ಅಂತ. ನಾನು ಬಹಳ ಮೆಹೂಸಮೇಂ ಹೋ ಹಾರಕೆ ತಕದೀರಕಿ ಬಾಜಿ. ಪ್ಯಾರಬೀ ಹೋ ಗಮಹೈ ಇಸಮೆ ಭಗವಾನ್ ಕೀ ಹೈ ರಾಜಿ" ಇಷ್ಟು ಅವರು ಹೇಳಿ ಬಿಟ್ಟರು. ನಾನು ಬಂದುಬಿಟ್ಟೆ. ಅಂದರೆ ಮನುಷ್ಯ ಜೀವಂತ ಇದ್ದಮೇಲೆ ಏನೂ ಆಗಲಿಲ್ಲ. ಸತ್ತಮೇಲೆ ಅವನ ಖಿದರ್ ಏನಾಗುತ್ತದೆ ಅಂತ; ಅದರ ವಿಷಯದಲ್ಲಿ ಹೇಳಿದ್ದಾರೆ. "ಯಾದ ಆಯೇಂಗಿ ಪಂಹೀ ತುಮಕೋ ಮೇರಿ ದೇಖಿನಾ. ಖಿದರ ಹೋಗಿ ತುಮಕೋ ಮೇರಿ ಮರಜಾನೇಕೆ ಬಾದ್" ಇಷ್ಟು ಹೇಳಿ ನನ್ನ ಮಾತುಗಳನ್ನು ನಾನು ಮುಗಿಸುತ್ತೇನೆ.

ಅಧ್ಯಕ್ಷರು : ಈ ಮಹನೀಯರುಗಳ ಗೌರವಾರ್ಥವಾಗಿ ಮಾನ್ಯ ಸದಸ್ಯರುಗಳು ಈಗ ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲ ಸದಸ್ಯರು ಎದ್ದು ನಿಂತು
ಒಂದು ನಿಮಿಷ ಮೌನವನ್ನಾಚರಿಸಿದರು).

ಅಧ್ಯಕ್ಷರು : ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬವರ್ಗದವರಿಗೆ ಕಳುಹಿಸಲಾಗುವುದು. ಈಗ ಸಭೆಯನ್ನು ಮುಂದೂಡಿ ಪುನಃ ನಾಳೆ ಬೆಳಿಗ್ಗೆ 12-30ಗಂಟೆಗೆ ನಾವು ಸಮಾವೇಶಗೊಳ್ಳಲಿದ್ದೇವೆ.

(ಸದನವು ಮಧ್ಯಾಹ್ನ 3 ಗಂಟೆ ನಿಮಿಷಕ್ಕೆ ಮುಕ್ತಾಯಗೊಂಡು ಪುನಃ
ದಿನಾಂಕ 18ನೇ ಮಾರ್ಚ್ ಮಾಹೆ 1997ರ ಮಂಗಳವಾರದಂದು
ಮಧ್ಯಾಹ್ನ 12-30 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).